ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭ || ಬೆಂಗಳೂರು, ಗುರುವಾರ, ಫೆಬ್ರವರಿ ೨೩, ೨೦೧೨ (ಫಾಲ್ಗುಣ ೪, ಶಕ ವರ್ಷ ೧೯೩೩) || ಸಂಚಿಕೆ ೮

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 23-02-2012

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
65	28-01-2012	ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 100 ಎಲ್‌ಜಿಎಂ 2011 ಬೆಂಗಳೂರು, ದಿನಾಂಕ: 25-01-2012
67	31-01-2012	ಸಂಖ್ಯೆ : ಸಇ 378 ಎಂಆರ್‌ಇ 2011, ಬೆಂಗಳೂರು, ದಿನಾಂಕ : 27ನೇ ಜನವರಿ, 2012
68	31-01-2012	ಸಂಖ್ಯೆ: ಆನಾಸ 55 ಸಲಫ 2011, ಬೆಂಗಳೂರು, ದಿನಾಂಕ: 30-01-2012
69	31-01-2012	No. HD 166 PPE 2008, Bangalore, dated: 30.01.2012
70	31-01-2012	No. DPAR 85 SSC 2010, Bangalore, dated: 30.01.2012
71	01-02-2012	No. B/1/12, Bangalore, dated 1st February 2012
72	01-02-2012	No. KLA/LGA/9/Bill/2012, Bangalore, Dated: 1.2.2012
74	02-02-2012	ಸಂಖ್ಯೆ: ನಅಇ 18 ಎಂಎಲ್‌ಆರ್ 2012, ಬೆಂಗಳೂರು, ದಿನಾಂಕ 31ನೇ ಜನವರಿ 2012
75	02-02-2012	ಸಂಖ್ಯೆ : ಸಿಐ 340 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 2ನೇ ಫೆಬ್ರವರಿ, 2012
76	02-02-2012	ನಂ. ರಾಚುಆ:268:ಟಿಜಡ್‌ಪಿ.2011, ಬೆಂಗಳೂರು, ದಿನಾಂಕ: 02-02-2012
77	02-02-2012	ನಂ. ರಾಚುಆ.05.ಇಯುಬಿ.2012, ಬೆಂಗಳೂರು, ದಿನಾಂಕ: 02-02-2012
78	02-02-2012	No. KLA/LGA/46/Bill/2012, Bangalore, Dated: 2.2.2012
79	03-02-2012	ಸಂಖ್ಯೆ: ಇಎಲ್‌ಎನ್/ಪಿಆರ್/41/2011-12, ಬೆಂಗಳೂರು, ದಿನಾಂಕ: 03.02.2012
80	03-02-2012	ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2011, ಬೆಂಗಳೂರು, ದಿನಾಂಕ: 02.02.2012
81	03-02-2012	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 1.2.2012
82	04-02-2012	ಸರ್ಕಾರದ ಆದೇಶ ಸಂಖ್ಯೆ: ನಅಇ 04 ಎಂಎಲ್‌ಆರ್ 2012, ಬೆಂಗಳೂರು, ದಿನಾಂಕ: 03-02-2012
83	04-02-2012	ಸಂಖ್ಯೆ: ಒಇ 56 ಪೊಸಿಆ 2011, ಬೆಂಗಳೂರು, ದಿನಾಂಕ: 04-02-2012
84	04-02-2012	ಸಂಖ್ಯೆ : ಸಿಐ 32 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 4ನೇ ಫೆಬ್ರವರಿ, 2012

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

http//www.gazette.kar.nic.in

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.gazette.kar.nic.in

೨೦೧೧–೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು		ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	....	21-00	831-00
2.	ಭಾಗ – 2	....	5-00	182-00
3.	ಭಾಗ – 3	....	10-00	411-00
4.	ಭಾಗ – 4	....	3-00	109-00
5.	ಭಾಗ – 4ಎ	....	11-00	435-00
6.	ಭಾಗ – 5	....	22-00	879-00
7.	ಭಾಗ – 6	(ಬೆಂಗಳೂರು)............	9-00	363-00
8.	ಭಾಗ – 6ಎ	(ಮೈಸೂರು)............	25-00	964-00
9.	ಭಾಗ – 6ಬಿ	(ಧಾರವಾಡ)	45-00	1763-00
10.	ಭಾಗ – 6ಸಿ	(ಗುಲ್ಬರ್ಗ)	29-00	1162-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 .... (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ		81-00	3210-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ,			

೨೦೧೧–೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಫೆಬ್ರವರಿ ೨೩, ೨೦೧೨ (ಫಾಲ್ಗುಣ ೪, ಶಕ ವರ್ಷ ೧೯೩೩)	ಸಂಚಿಕೆ ೮

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಸುರಳಿಕಲ್ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸನೀಇ 10 ನಯೋಕಾ 2010, ದಿನಾಂಕ : 27–11–2010.
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ : ಮುಇಂ/ಸನೀ(ಉ)ವ/ಬಿಜೆಪಿ/ಎಇ–6/2011–12/5558, ದಿನಾಂಕ: 31–10–2011.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಸುರಳಿಕಲ್ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ರೂ. 428.00 ಲಕ್ಷ ಮೊತ್ತದ ಅಂದಾಜಿಗೆ ಉಲ್ಲೇಖ (1) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯರವರ ಕಛೇರಿ ನೋಂದಣಿ ಸಂಖ್ಯೆ : 183/2010–11 ರಲ್ಲಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	8–7–2011
ಕನ್ನಡ ಪ್ರಭ ದಿನ ಪತ್ರಿಕೆ	7–7–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಇವರು ಅರ್ಹತೆ ಹೊಂದಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಿಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 4,03,37,588/–
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 4,14,23,908/–

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಮೆ. ಅಭಿರಾಮ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈಲಿ., ಒಂದನೇ ದರ್ಜೆ ಗುತ್ತಿಗೆದಾರರು	5,47,54,598/–	35.74 ಹೆಚ್ಚು	32.18 ಹೆಚ್ಚು

ಮೇಲ್ಕಂಡಂತೆ ಮೆ. ಅಭಿರಾಮ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈ. ಲಿ., ಒಂದನೇ ದರ್ಜೆ ಗುತ್ತಿಗೆದಾರರು, ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 32.18 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ: 10–12–2011ರ ಪತ್ರದಲ್ಲಿ ಕಾಮಗಾರಿಯನ್ನು ಅವರು ನಮೂದಿಸಿರುವ ದರಗಳನ್ನು ಕಡಿಮೆಗೊಳಿಸಿ ರೂ. 4,80,51,733/–ಗಳಿಗೆ ಟೆಂಡರನ್ನು ಅನುಮೋದಿಸಲು ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 4,14,23,908/–ಗಳ ಮೇಲೆ ಶೇ. 16.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 4,80,51,733/–ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 78 ಅಪಿಬಂ 2011 (ತಾಂತ್ರಿಕ), ಬೆಂಗಳೂರು, ದಿನಾಂಕ : 5ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಸುರಳಿಕಲ್ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 4,14,23,908/–ಗಳ ಮೇಲೆ ಶೇ. 16.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 4,80,51,733/– ಗಳಿಗೆ (ರೂ. ನಾಲ್ಕು ಕೋಟಿ ಎಂಬತ್ತು ಲಕ್ಷ ಐವತ್ತೊಂದು ಸಾವಿರದ ಏಳುನೂರ ಮೂವತ್ತಮೂರು ಮಾತ್ರ) ಗಳಿಗೆ ಮೆ. ಅಭಿರಾಮ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈ.ಲಿ., ಒಂದನೇ ದರ್ಜೆ ಗುತ್ತಿಗೆದಾರರುರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20–1–2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 257 ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಸನೀಇ 120 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ : 4–1–2012.

ಬಿಜಾಪುರ ಜಿಲ್ಲೆ, ಮುದ್ದೇಬಿಹಾಳ ತಾಲ್ಲೂಕಿನ ಮಾದಿನಾಳ ಗ್ರಾಮದ ವಸರು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪರಿಹಾರ ಪಾವತಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ : ಸನೀಇ 120 ಭೂಸ್ವಾಪ್ರ 2011, ದಿನಾಂಕ : 28–10–11 ರಂದು ಹೊರಡಿಸಲಾದ ಆದೇಶದ ಪ್ರಸ್ತಾವನೆಯ ಭಾಗದಲ್ಲಿರುವ ಪಟ್ಟಿಯನ್ನು ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಕ್ರ.ಸಂ.	ಎಲ್.ಎ.ಸಿ. ಸಂಖ್ಯೆ	ಮದಿನಾಳ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	15/04	93	2–01	570825
2	16/04	95/1	0.07	49787
3	17/04	95/2	0–22	155403
4	18/04	99/3	0–24	169485
5	19/04	102/2	0–05	35705
6	20/40	102/1	0–38	371592
			ಒಟ್ಟು	**1352797**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 258 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲ ಸಂಪನ್ಮೂಲ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಸನೀಇ 74 ಅಪಿಬಂ 2011 (ತಾಂತ್ರಿಕ), ಬೆಂಗಳೂರು, ದಿನಾಂಕ : 24–12–2011.

ಬೆಳಗಾವಿ ಜಿಲ್ಲೆ, ಗೋಕಾಕ್ ತಾಲ್ಲೂಕಿನ ಗೊಡಚಿನಮಲ್ಕಿ ಗ್ರಾಮದ ಹತ್ತಿರ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ : ಸನೀಇ 74 ಅಪಿಬಂ 2011 (ತಾಂತ್ರಿಕ), ದಿನಾಂಕ: 7–12–2011 ರಂದು ಹೊರಡಿಸಲಾದ ಆದೇಶದಲ್ಲಿ **"ಟೆಂಡರಿಗಿಡಲಾದ ಮೊತ್ತ ರೂ. 84,21,924/–ಗಳ ಮೇಲೆ ಶೇ. 14.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,00,76,321/– (ರೂ. ಒಂದು ಕೋಟಿ ಎಪ್ಪತ್ತಾರು ಸಾವಿರದ ಮುನ್ನೂರ ಇಪ್ಪತ್ತೊಂದು ಮಾತ್ರ)"** ಎಂಬುದರ ಬದಲಾಗಿ **"ಟೆಂಡರಿಗಿಡಲಾದ ಮೊತ್ತ ರೂ. 84,21,924/–ಗಳ ಮೇಲೆ ಶೇ. 14.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 96,00,993/– (ರೂ. ತೊಂಬತ್ತಾರು ಲಕ್ಷ ಒಂಭೈನೂರ ತೊಂಭತ್ತೂರು ಮಾತ್ರ)"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 259 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಸಿಆಸುಇ 54 ಸೇಇವಿ 2011, ಬೆಂಗಳೂರು, ದಿನಾಂಕ : 27-12-2011.

ವಿಷಯ : ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(4)ರನ್ವಯ ಇಲಾಖಾ ವಿಚಾರಣೆಯ ಪ್ರಕರಣಗಳಲ್ಲಿ ಲೋಕಾಯುಕ್ತ ಸಂಸ್ಥೆಗೆ ಶೀಘ್ರವಾಗಿ ವರದಿ ಕಳುಹಿಸುವ ಬಗ್ಗೆ.

ಉಲ್ಲೇಖ : ಉಪ ನಿಬಂಧಕರು (ವಿಚಾರಣೆಗಳು-5), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ : 3-11-2011 ರ ಪತ್ರ ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಜಿಎಂ/298/2008/ ಡಿಆರ್‌ಇ-5,

ಸರ್ಕಾರಿ ನೌಕರರು ದುರ್ನಡತೆ ಎಸಗಿದ್ದಾರೆಂದು ಲೋಕಾಯುಕ್ತ ಸಂಸ್ಥೆ ಸಾರ್ವಜನಿಕರಿಂದ ದೂರು ಸ್ವೀಕರಿಸಿದ ಮೇರೆಗೆ ನಡೆಸಿರುವ ಪ್ರಾಥಮಿಕ ತನಿಖೆಯಲ್ಲಿ ಸದರಿ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿದೆಯೆಂದು ಕಂಡು ಬಂದಾಗ ಅಂತಹವರ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಇಲಾಖೆಗೆ ಮಾನ್ಯ ಲೋಕಾಯುಕ್ತರು/ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರನ್ವಯ ಕಳುಹಿಸಿದ ವರದಿಯ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಲೋಕಾಯುಕ್ತ ಸಂಸ್ಥೆಗೆ ಕೂಡಲೇ ತಿಳಿಸುತ್ತಿಲ್ಲವೆಂದು ಹಾಗೂ ಕೆಲವು ಇಲಾಖೆಗಳು ಕ್ರಮ ಕೈಗೊಂಡರೂ ನೆನಪೋಲೆಗಳನ್ನು ಕಳುಹಿಸಿದ ನಂತರವೇ ಸದರಿ ಮಾಹಿತಿಯನ್ನು ಲೋಕಾಯುಕ್ತ ಸಂಸ್ಥೆಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3)ರಲ್ಲಿ ಲೋಕಾಯುಕ್ತ ಸಂಸ್ಥೆಯಿಂದ ಸ್ವೀಕೃತವಾಗುವ ವರದಿಗಳ ಮೇಲೆ ಸದರಿ ಅಧಿನಿಯಮದ ಕಲಂ 12(4)ರಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ತಪ್ಪದೇ ಕ್ರಮ ಕೈಗೊಂಡು ಲೋಕಾಯುಕ್ತ ಸಂಸ್ಥೆಗೆ ಕ್ರಮವಾಗಿ ತಿಳಿಸತಕ್ಕದ್ದು.

ಈ ಸೂಚನೆಗಳನ್ನು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ತಮ್ಮ ಇಲಾಖೆಗಳ ಆಡಳಿತಾತ್ಮಕ ವ್ಯಾಪ್ತಿಯಲ್ಲಿ ಬರುವ ಸಂಬಂಧಪಟ್ಟ ಎಲ್ಲಾ ಶಿಸ್ತು ಪ್ರಾಧಿಕಾರಗಳಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಮೊಹಮ್ಮದ್ ಸನಾವುಲ್ಲ

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

ಪಿ.ಆರ್. 260

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 411 ಸಅಸೇ 2008, ದಿನಾಂಕ: 28-07-2009.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 559 ಸಅಸೇ 2010, ದಿನಾಂಕ: 04-03-2011.
3. ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಸನೀಇ 108 ಸೇಸಎ 2011, ದಿನಾಂಕ: 14-09-2011.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸರ್ಕಾರಿ ಸಚಿವಾಲಯದ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಹೆಚ್ಚುವರಿಯಾಗಿ ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಿ ಮೇಲೆ ಉಲ್ಲೇಖ (2)ರಲ್ಲಿ ಓದಲಾದ ಆದೇಶದಲ್ಲಿ ಸದರಿ ಹುದ್ದೆಗಳನ್ನು ದಿನಾಂಕ: 27-07-2011ರ ವರೆಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1.	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವೇತನ ಶ್ರೇಣಿ ರೂ. 14,050-25050)	01
2.	ಸಹಾಯಕ ಇಂಜಿನಿಯರ್ (ವೇತನ ಶ್ರೇಣಿ ರೂ. 11,400-21,600)	03
3.	ಶೀಘ್ರಲಿಪಿಗಾರರು (ವೇತನ ಶ್ರೇಣಿ ರೂ. 8,000-14,800)	01

ಮೇಲೆ ಕ್ರಮ ಸಂಖ್ಯೆ: (3) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)ಯು ದಿನಾಂಕ: 04-03-2011 ರ ಆದೇಶದಲ್ಲಿ ತಾತ್ಕಾಲಿಕವಾಗಿ ಮುಂದುವರಿಸಲಾದ 5 ಹುದ್ದೆಗಳು ಜಲಸಂಪನ್ಮೂಲ ಇಲಾಖೆಗೆ ಅವಶ್ಯಕತೆ ಇರುವುದರಿಂದ ಸದರಿ ಹುದ್ದೆಗಳನ್ನು ಮತ್ತೆ ದಿನಾಂಕ: 28-07-2011 ರಿಂದ 1 ವರ್ಷದ ಅವಧಿಗೆ ಮುಂದುವರೆಸುವಂತೆ ಕೋರಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 594 ಸಅಸೇ 2011, ಬೆಂಗಳೂರು, ದಿನಾಂಕ: 20ನೇ ಡಿಸೆಂಬರ್ 2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರ ಸಚಿವಾಲಯದ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ತಾತ್ಕಾಲಿಕವಾಗಿ ಸೃಜಿಸಿ ಮುಂದುವರೆಸಲಾದ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ: 28-07-2011 ರಿಂದ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1.	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವೇತನ ಶ್ರೇಣಿ ರೂ. 14050-25050)	01
2.	ಸಹಾಯಕ ಇಂಜಿನಿಯರ್ (ವೇತನ ಶ್ರೇಣಿ ರೂ. 11,400-21,600)	03
3.	ಶೀಘ್ರಲಿಪಿಗಾರರು (ವೇತನ ಶ್ರೇಣಿ ರೂ. 8,000-14,800)	01

ಮೇಲ್ಕಂಡ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ದಿನಾಂಕ: 28-07-2009 ರ ಆದೇಶದಲ್ಲಿ ನಿಗದಿ ಪಡಿಸಲಾದ ಕ್ರಮಗಳನ್ನು ಅನುಸರಿಸಲು ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಆರ್. ವಿಜಯಾನಂದ ಶರ್ಮ

ಪಿ.ಆರ್. ನಂ. 261

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ವಿವಿಧ ವರ್ಗಗಳ ಮಾರಾಟಗಾರರ ನಮೂದಿತ ಪಟ್ಟಿಯ ಕುರಿತು.

ಓದಲಾಗಿದೆ : 01-02-2010ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ವಿಮಾಅ 2008.

ಪ್ರಸ್ತಾವನೆ:

ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳ ಗಣಕೀಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು ಪ್ರಿಂಟರ್‌ಗಳು, ಅವುಗಳ ಪೂರಕ ಸಾಧನಗಳು, ವಿವಿಧ ತಂತ್ರಾಂಶಗಳು, ತಂತ್ರಾಂಶ ಸಿದ್ಧಪಡಿಸುವ, ನೆಟ್ ವರ್ಕಿಂಗ್, ಯು.ಪಿ.ಎಸ್. ತರಬೇತಿ, ವೆಬ್ ಡಿಸೈನಿಂಗ್, ಡೇಟಾ ಎಂಟ್ರಿ ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ ಸಾಮಗ್ರಿ/ಸೇವೆಗಳನ್ನು ಪೂರೈಸುವ ಇತ್ಯಾದಿಗಾಗಿ ನಾನಾ ಸಂಸ್ಥೆಗಳನ್ನು ಸಂಕ್ಷಿಪ್ತಗೊಳಿಸಿ, ಮಾರಾಟಗಾರರ ಪಟ್ಟಿಗೆ ಮೇಲೆ ಓದಲಾದ ಸರ್ಕಾರದ ಆದೇಶದ ಮೂಲಕ ಅನುಮೋದನೆ ನೀಡಲಾಗಿದೆ. ಸದರಿ ಪಟ್ಟಿಯಲ್ಲಿರುವ ಸಂಸ್ಥೆಗಳ ಸಿಂಧುತ್ವವು 31-12-2011ಗೆ ಕೊನೆಗೊಳ್ಳಲಿದೆ. 2012-2013ನೇ ಸಾಲಿಗೆ ಹೊಸ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇನ್ನೂ ಅಂತಿಮವಾಗಿಲ್ಲವಾದ್ದರಿಂದ ಸದರಿ ಆದೇಶದನ್ವಯ ಪ್ರಸ್ತುತ ಚಾಲ್ತಿಯಲ್ಲಿರುವ ಮಾರಾಟಗಾರರ ಪಟ್ಟಿಯ ಸಿಂಧುತ್ವವನ್ನು ವಿಸ್ತರಿಸುವುದು ಅವಶ್ಯವಾಗಿದೆ. ಅದರಂತೆ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 32 ವಿಮಾಅ 2011, ಬೆಂಗಳೂರು, ದಿನಾಂಕ: 28ನೇ ಡಿಸೆಂಬರ್ 2011

2. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಗಣಕಿಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು, ಪ್ರಿಂಟರ್‌ಗಳು, ಅವುಗಳ ಪೂರಕ ಸಾಧನಗಳು, ವಿವಿಧ ತಂತ್ರಾಂಶಗಳು, ತಂತ್ರಾಂಶ ಸಿದ್ಧಪಡಿಸುವ, ನೆಟ್ ವರ್ಕಿಂಗ್, ಯು.ಪಿ.ಎಸ್., ತರಬೇತಿ, ವೆಬ್ ಡಿಸೈನಿಂಗ್, ಡೇಟಾ ಎಂಟ್ರಿ, ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ ಸಾಮಗ್ರಿ/ಸೇವೆಗಳನ್ನು ಪೂರೈಸುವ ಇತ್ಯಾದಿಗಾಗಿ ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿನ ಸಂಸ್ಥೆಗಳ ಸಿಂಧುತ್ವವನ್ನು ದಿನಾಂಕ: 01-01-2012 ರಿಂದ 15-02-2012 ರವರೆಗೆ ಅಥವಾ ಹೊಸ ಪಟ್ಟಿ ಸಿದ್ಧಗೊಳ್ಳುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಪ್ರಶಾಂತ ಕುಮಾರ್

ಪಿ.ಆರ್. ನಂ. 262

ಪೀಠಾಧಿಕಾರಿ-2

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಎಸ್.ಕೆ. ಕುಂದರಗಿ, ಭೂಗೋಳಶಾಸ್ತ್ರ ಉಪನ್ಯಾಸಕರು, ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ಧಾರವಾಡ ಇವರ ನೇಮಕಾತಿಯನ್ನು ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ: ಇಡಿ 273 ಯುಪಿಸಿ 96, ದಿನಾಂಕ: 04-06-1998.
2. ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಇ:59:ವೇಅ:ಖಾಕಾವಿ-2/95-96, ದಿನಾಂಕ: 05-08-2009 ಮತ್ತು 05-10-2009.
3. ಆಡಳಿತ ಮಂಡಳಿಯ ಅಧ್ಯಕ್ಷರಾದ ಮಾನ್ಯ ಶ್ರೀ ಶ್ರೀ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 11-09-2009 ರಂದು ಜರುಗಿದ ಸಭೆಯ ನಿರ್ಣಯ.
4. ಸರ್ಕಾರಿ ಆದೇಶ ಸಂಖ್ಯೆ: ಇಡಿ 170 ಯುಪಿಸಿ 2009, ದಿನಾಂಕ: 16-11-2009.
5. ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಕಾಶಿಇ:59:ವೇಅ:ಖಾಕಾವಿ:95-96:ಪಿಸಿಸಿ-2, ದಿನಾಂಕ: 23-06-2011.

ಪ್ರಸ್ತಾವನೆ:

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 04-06-1998ರ ಆದೇಶದಲ್ಲಿ ಧಾರವಾಡದ ಎಸ್.ಜೆ.ಎಂ. ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜನ್ನು ದಿನಾಂಕ: 01-04-1998 ರಿಂದ ಜಾರಿಗೆ ಬರುವಂತೆ ವೇತನಾನುದಾನಕ್ಕೆ ಒಳಪಡಿಸಲಾಗಿದೆ. ಮೇಲೆ ಕ್ರಮಾಂಕ (2)ರಲ್ಲಿ

ಓದಲಾದ ದಿನಾಂಕ: 05-08-2009ರ ಕಾಲೇಜು ಶಿಕ್ಷಣ ಆಯುಕ್ತರ ಪ್ರಸ್ತಾವನೆಯ ವರದಿಯಲ್ಲಿ ಧಾರವಾಡದ ಎಸ್.ಜೆ.ಎಂ. ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜಿನ ಆಡಳಿತ ಮಂಡಳಿಯವರು ಈ ಕೆಳಕಂಡ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ.

1) ಶ್ರೀಮತಿ ಎಂ.ಬಿ. ಅಳಗವಾಡಿ, ಹಿಂದಿ ಉಪನ್ಯಾಸಕರು

2) ಶ್ರೀಮತಿ ಜೆ.ಪಿ. ಯಂಡಿಗೇರಿ, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಉಪನ್ಯಾಸಕರು.

ಸದರಿ ಕಾಲೇಜಿನಲ್ಲಿ ಪ್ರಾರಂಭಿಸಿರುವ ಭೂಗೋಳಶಾಸ್ತ್ರ, ಹಿಂದಿ ಹಾಗೂ ಪತ್ರಿಕೋದ್ಯಮ ವಿಷಯಗಳನ್ನು 1993-94 ರಿಂದ ಅನುದಾನರಹಿತ ವಿಷಯಗಳಾಗಿ ಪ್ರಾರಂಭಿಸಲು ಅನುಮತಿ ನೀಡಿರುವುದರಿಂದ ಪ್ರಸ್ತುತ ವೇತನಾನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲವೆಂದು ಕಾಲೇಜು ಶಿಕ್ಷಣ ಆಯುಕ್ತರು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಶ್ರೀ ಎಸ್.ಜೆ.ಎಂ. ವಿದ್ಯಾಪೀಠದ ಶ್ರೀ ಮುರುಘಮಠ, ಚಿತ್ರದುರ್ಗ ಇಲ್ಲಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಮಾನ್ಯ ಶ್ರೀ ಶ್ರೀ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 11-09-2009ರಂದು ಜರುಗಿದ ಸಭೆಯ ನಿರ್ಣಯದ ಪ್ರಕಾರ ಧಾರವಾಡದ ಎಸ್.ಜೆ.ಎಂ. ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಮಾಡಿಕೊಂಡಿರುವ ಇಬ್ಬರು ಉಪನ್ಯಾಸಕರುಗಳನ್ನು ಕಾರ್ಯಭಾರಕ್ಕನುಗುಣವಾಗಿ ಆಡಳಿತ ಮಂಡಳಿಯ ಅಧೀನದಲ್ಲಿರುವ ಇತರೆ ಕಾಲೇಜುಗಳಲ್ಲಿರುವ ಅನುದಾನಿತ ಖಾಲಿ ಹುದ್ದೆಗಳಿಗೆ ಎದುರಾಗಿ ಹುದ್ದೆ ಪರಿವರ್ತಿಸಿ ವೇತನಾನುದಾನಕ್ಕೆ ಒಳಪಡಿಸಲು ಸರ್ವಾನುಮತದಿಂದ ಒಪ್ಪಿ ಮೇಲೆ (3)ರಲ್ಲಿ ಓದಲಾದ ದಿನಾಂಕ: 11-09-2009ರ ಠರಾವಿನಲ್ಲಿ ತೀರ್ಮಾನಿಸಿರುತ್ತಾರೆ.

ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ದಿನಾಂಕ: 16-11-2009ರ ಆದೇಶದಲ್ಲಿ ಸದರಿ ಕಾಲೇಜಿನ ಆಡಳಿತ ಮಂಡಳಿಯವರು ದಿನಾಂಕ: 01-07-1992 ರಂದು ಮಾಡಿಕೊಂಡಿರುವ ನೇಮಕಾತಿ ಹಾಗೂ ಉಪನ್ಯಾಸಕರುಗಳು ಸಲ್ಲಿಸಿರುವ ನಿರಂತರ ಸೇವೆಯನ್ನು ಗಣನೆಗೆ ತೆಗೆದುಕೊಂಡು ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ ಇದರ ವ್ಯಾಪ್ತಿಗೆ ಬರುವ ಎಸ್.ಜೆ.ಎಂ. ಕಾಲೇಜು, ಚಿತ್ರದುರ್ಗ ಇಲ್ಲಿನ ಉರ್ದು ವಿಷಯವನ್ನು ಹಿಂದಿ ವಿಷಯಕ್ಕೆ ಪರಿವರ್ತಿಸಿ ಹಾಗೂ ಎಸ್.ಜೆ.ಎಂ. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ಭೂಗರ್ಭಶಾಸ್ತ್ರ ವಿಷಯವನ್ನು ಪತ್ರಿಕೋದ್ಯಮ ಹಾಗು ಸಮೂಹ ಸಂವಹನ ವಿಷಯಕ್ಕೆ ಪರಿವರ್ತಿಸಿ ಈ ರೀತಿ ಪರಿವರ್ತಿಸಿದ ಎರಡೂ ಹುದ್ದೆಗಳನ್ನು ಧಾರವಾಡದ ಎಸ್.ಜೆ.ಎಂ. ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜಿಗೆ ಸ್ಥಳಾಂತರಿಸಿ, ಸ್ಥಳಾಂತರಿಸಿದ ಹುದ್ದೆಗಳಿಗೆ ಎದುರಾಗಿ ಶ್ರೀಮತಿ ಎಂ.ಬಿ. ಅಳಗವಾಡಿ ಮತ್ತು ಶ್ರೀಮತಿ ಜೆ.ಪಿ. ಯಂಡಿಗೇರಿ ಇವರುಗಳ ನೇಮಕಾತಿಯನ್ನು ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿತ್ತು.

ಪ್ರಕರಣವನ್ನು ಪರಿಶೀಲಿಸಲಾಗಿ ಸದರಿ ಕಾಲೇಜಿನ ಆಡಳಿತ ಮಂಡಳಿಯವರು ಭೂಗೋಳಶಾಸ್ತ್ರದ ವಿಷಯದಲ್ಲಿ ಪೂರ್ಣ ಕಾರ್ಯಭಾರ ಹಾಗೂ ಹುದ್ದೆ ಖಾಲಿಯಿದ್ದು, ಅನುದಾನಿತ ಭೂಗರ್ಭಶಾಸ್ತ್ರದ ವಿಷಯದಲ್ಲಿ ಮಂಜೂರಾದ ಹುದ್ದೆಯಿದ್ದು, ಕಾರ್ಯಭಾರವಿರುವುದಿಲ್ಲವಾದ್ದರಿಂದ ಭೂಗೋಳಶಾಸ್ತ್ರ ವಿಷಯದ ಅಧ್ಯಾಪಕರಾದ ಶ್ರೀ ಎಸ್.ಕೆ. ಕುಂದರಗಿಯವರ ಹೆಸರನ್ನು ಭೂಗರ್ಭಶಾಸ್ತ್ರದ ವಿಷಯದಿಂದ ಭೂಗೋಳಶಾಸ್ತ್ರದ ವಿಷಯಕ್ಕೆ ಹುದ್ದೆ ಪರಿವರ್ತನೆ ಮಾಡಿ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವಂತೆ ಉಲ್ಲೇಖ (5)ರಲ್ಲಿರುವ ಪತ್ರದಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 118 ಯುಪಿಸಿ 2011 ಬೆಂಗಳೂರು, ದಿನಾಂಕ: 28-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ ಇದರ ವ್ಯಾಪ್ತಿಗೆ ಬರುವ ಎಸ್.ಜೆ.ಎಂ. ಕಾಲೇಜು, ಚಿತ್ರದುರ್ಗ ಇಲ್ಲಿನ ಭೂಗರ್ಭಶಾಸ್ತ್ರದ ವಿಷಯದಿಂದ ಭೂಗೋಳಶಾಸ್ತ್ರದ ವಿಷಯಕ್ಕೆ ಹುದ್ದೆ ಪರಿವರ್ತಿಸಿ ಈ ರೀತಿ ಪರಿವರ್ತಿಸಿದ ಹುದ್ದೆಯನ್ನು ಧಾರವಾಡದ ಎಸ್.ಜೆ.ಎಂ. ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜಿಗೆ ಸ್ಥಳಾಂತರಿಸಿ, ಸ್ಥಳಾಂತರಿಸಿದ ಹುದ್ದೆಗೆ ಎದುರಾಗಿ ಶ್ರೀ ಎಸ್.ಕೆ. ಕುಂದರಗಿ ಇವರ ನೇಮಕಾತಿಯನ್ನು ಈ ಕೆಳಗಿನಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿದೆ.

ಈ ಸಂಬಂಧ ಉಂಟಾಗುವ ವೇತನ ವೆಚ್ಚವನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇಲಾಖೆಗೆ ಒದಗಿಸಿರುವ ಆಯವ್ಯಯ ಹಂಚಿಕೆಯಲ್ಲಿ ಭರಿಸಿಕೊಳ್ಳಲು ಆದೇಶಿಸಿದೆ.

ಕ್ರಮ ಸಂಖ್ಯೆ	ಉಪನ್ಯಾಸಕರ ಹೆಸರು	ಖಾಲಿ ಹುದ್ದೆ ವಿವರ	ನೇಮಕಾತಿ ದಿನಾಂಕ	ಅನುದಾನಕ್ಕೆ ಒಳಪಟ್ಟಿರುವ ವಿಷಯ	ಖಾಲಿ ಹುದ್ದೆಯ ಕಾಲೇಜಿನ ಹೆಸರು
1	ಶ್ರೀ ಎಸ್.ಕೆ. ಕುಂದರಗಿ, ಭೂಗೋಳಶಾಸ್ತ್ರ ಉಪನ್ಯಾಸಕರು	ಶ್ರೀ ಸುಜಯಶಾಂತ ಪ್ರಕಾಶ್ ಎಸ್. ಭೂಗರ್ಭಶಾಸ್ತ್ರ ಉಪನ್ಯಾಸಕರು ಸ್ವಯಂ ನಿವೃತ್ತಿ 30-08-2008	01-07-1992	ಭೂಗೋಳಶಾಸ್ತ್ರ (ಭೂಗರ್ಭಶಾಸ್ತ್ರ ವಿಷಯವನ್ನು ಭೂಗೋಳಶಾಸ್ತ್ರ ವಿಷಯಕ್ಕೆ ಪರಿವರ್ತಿಸಿ)	ಎಸ್.ಜೆ.ಎಂ. ಕಾಲೇಜು, ಚಂದ್ರವಳ್ಳಿ ಚಿತ್ರದುರ್ಗ

1. ಆದೇಶ ಸಂಖ್ಯೆ: ಇಡಿ 146 ಯುಪಿಸಿ 1979, ದಿನಾಂಕ: 03-10-1981 ಮತ್ತು ಈ ನಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ತಿದ್ದುಪಡಿ ಹಾಗೂ ಸ್ಪಷ್ಟೀಕರಣಗಳಿಗೆ ನಿಗದಿಪಡಿಸಿದ ಕಾರ್ಯಭಾರವನ್ನು ಹೊಂದಿರತಕ್ಕದ್ದು, ಅಲ್ಲದೆ ಮುಂದೆ ಸರ್ಕಾರ ವಿಧಿಸಬಹುದಾದ ಯಾವುದೇ ಷರತ್ತಿಗೊಳಪಟ್ಟಿರತಕ್ಕದ್ದು.
2. ಇನ್ನು ಮುಂದೆ ಭವಿಷ್ಯಾನುಸಾರ ಭರ್ತಿ ಮಾಡಬೇಕಾಗಿರುವ ಹುದ್ದೆಗಳಿಗೆ ಸಕ್ಷಮ ಅಧಿಕಾರಿಯಿಂದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.
3. ನೇರ ನೇಮಕಾತಿ, ಬಡ್ತಿ ಮತ್ತು ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

4. ಪ್ರವೇಶಾವಕಾಶದಲ್ಲಿ ನಿಗದಿಪಡಿಸಿರುವ ವಿದ್ಯಾರ್ಥಿಗಳ ಕನಿಷ್ಠ ಪ್ರಮಾಣವನ್ನು ವಿವರವಾಗಿ ಅನುಸರಿಸತಕ್ಕದ್ದು.
5. ಮುಂದೆ ಉದ್ಭವಿಸುವ ಹುದ್ದೆಗಳನ್ನು ಬ್ಯಾಕ್ ಲಾಗ್ ರಿಕ್ತಸ್ಥಾನಗಳೆಂದು ಪರಿಗಣಿಸಿ ಅವುಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮೀಸಲಾತಿಯ ಅನುಪಾತದನ್ವಯ ರಿಕ್ತಸ್ಥಾನ ತುಂಬುವತನಕ ಮುಂದುವರೆಸಿ ನೇಮಕಾತಿ ಮಾಡತಕ್ಕದ್ದು ಮತ್ತು ಈ ದಿಸೆಯಲ್ಲಿ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು ಪಾಲಿಸತಕ್ಕದ್ದು.
6. ಸದರಿ ಕಾಲೇಜಿನಲ್ಲಿ ಇನ್ನು ಮುಂದೆ ನೌಕರರ ರಾಜೀನಾಮೆ, ನಿವೃತ್ತಿ ಮತ್ತು ನಿಧನದಿಂದ ತೆರವಾದ ಬೋಧಕ ಹುದ್ದೆಗಳನ್ನು ತುಂಬುವಾಗ ಸರ್ಕಾರದ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
7. ಈ ಉಪನ್ಯಾಸಕರು ನೇಮಕಾತಿ ಹೊಂದಿದ ದಿನಾಂಕದಂದು ಹಾಗೂ ತದನಂತರ ಹೊಂದಿರುವ ವಿದ್ಯಾರ್ಹತೆಯನ್ವಯ ಇವರುಗಳಿಗೆ ವೇತನ ಶ್ರೇಣಿಯನ್ನು ನಿಗದಿಪಡಿಸತಕ್ಕದ್ದು.
8. ಸದರಿ ಉಪನ್ಯಾಸಕರಿಗೆ ವೇತನಾನುದಾನ ಬಿಡುಗಡೆ ಮಾಡುವ ಮುನ್ನ ನಿಯಮಗಳ ಪ್ರಕಾರ ವಯೋಮಿತಿ:ವಿದ್ಯಾರ್ಹತೆ ಮತ್ತಿತರ ಷರತ್ತುಗಳನ್ನು ಪೂರೈಸುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

ಪ್ರತೀ ವರ್ಷವೂ ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವ ಕುರಿತು ಸಂಬಂಧಪಟ್ಟ ಜಂಟಿ ನಿರ್ದೇಶಕರು ದೃಢೀಕರಿಸಿದ ನಂತರವೇ ಆಯಾ ವರ್ಷದ ವೇತನಾನುದಾನ ಬಿಡುಗಡೆ ಮಾಡುವಂತೆ ಆಯುಕ್ತಾಲಯಕ್ಕೆ ಸೂಚಿಸಲಾಗಿದೆ. ನ್ಯೂನ್ಯತೆಗಳಾದಲ್ಲಿ ಸಂಬಂಧಪಟ್ಟ ಜಂಟಿ ನಿರ್ದೇಶಕರೇ ಜವಾಬ್ದಾರರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಯು.ಬಿ. ಉಳವಿ

ಪಿ.ಆರ್. ನಂ. 263

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಶಿಕ್ಷಣ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದಲ್ಲಿನ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಿಸಿದಂತೆ ಅನುದಾನ ಸಂಹಿತೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : ಕರ್ನಾಟಕ ರಾಜ್ಯದಲ್ಲಿನ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘ, ಬೆಂಗಳೂರು ಇವರ ಮನವಿ ದಿನಾಂಕ: 20-06-2011.

ಪ್ರಸ್ತಾವನೆ:

ಕರ್ನಾಟಕ ರಾಜ್ಯದಲ್ಲಿನ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘವು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಅನುದಾನ ಸಂಹಿತೆ ಪ್ರಕಾರ ಅನುದಾನಕ್ಕೊಳಪಟ್ಟ 10 ಇಂಜಿನಿಯರಿಂಗ್ ಕಾಲೇಜುಗಳಿಗೆ ಸರ್ಕಾರವು ಶೇ. 85ರಷ್ಟು ಅನುದಾನವನ್ನು ನೀಡಲಾಗುತ್ತಿದೆ. ಆದರೆ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯನ್ನು ಸಿಬ್ಬಂದಿಗಳಿಗೆ ಜಾರಿಗೊಳಿಸಲು ಆಡಳಿತ ವೆಚ್ಚವು ಹೆಚ್ಚಾಗುವುದರಿಂದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಅನುದಾನಿತ ಕೋರ್ಸುಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳಿಗೆ ಪಾವತಿಸುವ ಬೋಧನಾ ಶುಲ್ಕದ ಶೇ. 100 ರಷ್ಟನ್ನು ಸಂಸ್ಥೆಯೇ ಉಳಿಸಿಕೊಳ್ಳಲು ಅನುಮತಿ ನೀಡುವಂತೆ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಈ ಬೇಡಿಕೆಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 130 ಟಿಇಸಿ 2011 ಬೆಂಗಳೂರು, ದಿನಾಂಕ: 04ನೇ ಜನವರಿ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿನ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಅನುದಾನಿತ ಕೋರ್ಸುಗಳಿಗೆ ಅನುದಾನ ಸಂಹಿತೆಗೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತ ಮಂಡಳಿಯವರು ಪಡೆಯುತ್ತಿರುವ ಶೇ. 100 ರಷ್ಟು ಬೋಧನಾ ಶುಲ್ಕವನ್ನು ಆಡಳಿತ ಮಂಡಳಿಯೇ ಉಳಿಸಿಕೊಳ್ಳಲು ಸರ್ಕಾರ ಅನುಮತಿಸಿದೆ.

(1) ಈ ಆದೇಶವು ದಿನಾಂಕ: 01-04-2012 ರಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಯಲ್ಲಿರತಕ್ಕದ್ದು.
(2) ಸರ್ಕಾರಿ ಕೋಟಾದ ಸೀಟುಗಳಿಗೆ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು.
(3) ಅನುದಾನಿತ ಕೋರ್ಸುಗಳಲ್ಲಿ ಶೇ. 95 ರಷ್ಟು ಸೀಟುಗಳು ಸರ್ಕಾರಿ ಕೋಟಾದ ಸೀಟುಗಳಾಗಿ ಇರತಕ್ಕದ್ದು.
(4) ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ನಿಯಮ/ಆದೇಶಗಳಿಗೆ ಬದ್ಧರಾಗಿರತಕ್ಕದ್ದು.
(5) ಒಂದು ವೇಳೆ ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಸಂಸ್ಥೆಗಳು ಶೇ. 100 ರಷ್ಟು ಬೋಧನಾ ಶುಲ್ಕ ಉಳಿಸಿಕೊಳ್ಳುವುದನ್ನು ನಿಯಮಾನುಸಾರ ರದ್ದುಪಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಸ್. ಜಗದೀಶ್

ಪಿ.ಆರ್. ನಂ. 264

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಒಳಾಡಳಿತ ಸಚಿವಾಲಯ

ವಿಷಯ : ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಹಾಲಿಯಿರುವ ವಿತ್ತಾಧಿಕಾರವನ್ನು ಹೆಚ್ಚಿಸಿ ಮತ್ತು ಹೊಸದಾಗಿ ಆರ್ಥಿಕ ವಿತ್ತಾಧಿಕಾರವನ್ನು ನೀಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 72 ಇಎಫ್‌ಎಸ್ 2009, ದಿನಾಂಕ 25-08-2009

2) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರಗಳ ಸಂಖ್ಯೆ: ಬಿಯುಡಿ-4/21/2010-11, ದಿನಾಂಕ 28-10-2010 ಮತ್ತು ಬಿಯುಡಿ-4/14/2008-09, ದಿನಾಂಕ 1-8-2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪೊಲೀಸ್ ಇಲಾಖೆಯ ವಿವಿಧ ದರ್ಜೆಯ ಅಧಿಕಾರಿಗಳಿಗೆ ಆರ್ಥಿಕ ವಿತ್ತಾಧಿಕಾರವನ್ನು ಪರಿಷ್ಕರಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಪತ್ರಗಳಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಹಾಗೂ ಸಾರ್ವಜನಿಕರಿಗೆ ಪೊಲೀಸ್ ಇಲಾಖೆಯ ಬಗ್ಗೆ ಸದಭಿಪ್ರಾಯ ಮೂಡಿಸಲು ದಿನಪತ್ರಿಕೆಗಳಲ್ಲಿ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಜಾಹಿರಾತು ನೀಡುವ ಅವಶ್ಯಕತೆ ಇರುತ್ತದೆ. ತುರ್ತು ಸಂದರ್ಭಗಳಲ್ಲಿ ಈ ರೀತಿ ಜಾಹೀರಾತು ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಆದೇಶ ಪಡೆಯಲು ಕಾಲಾವಕಾಶ ಕಡಿಮೆ ಇರುತ್ತದೆ ಹಾಗೂ ಪೊಲೀಸ್ ಇಲಾಖೆಯ ವಿವಿಧ ದರ್ಜೆಯ ಅಧಿಕಾರಿಗಳಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಪೊಲೀಸ್ ಸಿಬ್ಬಂದಿಗಳಿಗೆ ಬಹುಮಾನವನ್ನು ಹಾಗೂ ಕೆಲವೊಂದು ಐಟಂಗಳಿಗೆ ಆರ್ಥಿಕ ವಿತ್ತಾಧಿಕಾರವನ್ನು ಮತ್ತಷ್ಟು ಹೆಚ್ಚಿಸುವ ಅಗತ್ಯತೆ ಕಂಡುಬಂದಿದೆ. ಇದಲ್ಲದೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗವು ಪೊಲೀಸ್ ದೌರ್ಜನ್ಯಗೊಳಗಾದವರಿಗೆ ಪರಿಹಾರ ಮೊತ್ತ ನೀಡಲು ಆರ್ಥಿಕ ವಿತ್ತಾಧಿಕಾರ ಇರುವುದಿಲ್ಲ. ಆದ್ದರಿಂದ ಈ ಬಗ್ಗೆ ಪೂರ್ಣ ಅಧಿಕಾರ ನೀಡಲು ಆರ್ಥಿಕ ಪ್ರತ್ಯಯೋಜನೆಯ ಅವಶ್ಯಕತೆಯಿದೆಯೆಂದು ತಿಳಿಸಿ ಈ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿರುತ್ತಾರೆ.

ಪೊಲೀಸ ಇಲಾಖೆಗೆ ಸಂಬಂಧಿಸಿದಂತೆ ದಿನಾಂಕ 22-11-2011ರಂದು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ತೀರ್ಮಾನ ತೆಗೆದುಕೊಂಡಿರುತ್ತದೆ. ಅದರಂತೆ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 171 ಇಎಫ್‌ಎಸ್ 2010, ಬೆಂಗಳೂರು, ದಿನಾಂಕ : 03-01-2012

ಪೊಲೀಸ್ ಇಲಾಖೆಯ ವಿವಿಧ ದರ್ಜೆಯ ಅಧಿಕಾರಿಗಳಿಗೆ ಆದೇಶ ಸಂಖ್ಯೆ: ಹೆಚ್‌ಡಿ 72 ಇಎಫ್‌ಎಸ್ 2009, ದಿನಾಂಕ 25-08-2009ರಲ್ಲಿ ಪರಿಷ್ಕರಿಸಿ ನಿಗದಿಪಡಿಸಿದ್ದ ಆರ್ಥಿಕ ವಿತ್ತಾಧಿಕಾರವನ್ನು ಭಾಗಷಃ ಮಾರ್ಪಡಿಸಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಕೆಲವು ಐಟಂಗಳಿಗೆ ಆರ್ಥಿಕಾಧಿಕಾರವನ್ನು ಮತ್ತಷ್ಟು ಹೆಚ್ಚಿಸಿ/ಹೊಸದಾಗಿ ಆರ್ಥಿಕ ಅಧಿಕಾರವನ್ನು ನಿಗದಿಪಡಿಸಲು ಸರ್ಕಾರದ ಮಂಜೂರಾತಿ ಆದೇಶ ನೀಡಲಾಗಿದೆ. ಉಳಿದಂತೆ ಮೇಲೆ ಓದಲಾದ ಆದೇಶದಲ್ಲಿ ನೀಡಲಾದ ಆರ್ಥಿಕ ಅಧಿಕಾರದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 366 ವೆಚ್ಚ 11/2011, ದಿನಾಂಕ 26-12-2011ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ರಾಜಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

Annexure to Government Order No. HD 171 EFS 2010, Dated 03-01-2012

Delegation of special financial powers to Director General and Inspector General of Police, Commissioner of Police and other Head of Department & District level officers of Police Department

Existing Powers as per G.O. No. FD/39/TFP/2006, dated 16-09-2008 G.O. No. HD 72 EPS 2009, dated 25-8-2009							Revised Financial Powers as per the recommendation of the ACS Committee			
Sl. No.	Item No.	Subject	Director General and Inspector General of Police	DGP AdsGp and IGsP having State jurisdiction/ Commissioners of Police Bangalore City	Other Heads of Department DGP (Crime & Training) (2) ADGP and IFP (3) Commissioner of Traffic & Road Safety (4) Commissioner of Police Mysore, Hubli-Dharwad (5) Range IGPs. (6) DIG-Chief office (7) DIG-Cod (8) DIG-O/o COP Bangalore city (9) DIG Intelligence (10) DIG Training 1.	District Level Officers (1) Supdt. Of Police (2) Director FSL (3) S.P.F.P.B. (4) Principal, PTS Channapatna (5) Principal, KSRP Training School (6) DCPs is cities of B'lore Mysore, Hubli-Dharwad (7) Other equivalent rank officers in Police Dept. (8) Addl.	Director General and Inspector General of Police	DGP AdsGP and IGsP having State jurisdiction	Other Heads of Department	Distric Leve Office

		Existing Powers				Revised Powers			
Item No.	Subject	Director General and Inspector General of Police	DGP AdsGp and IGsP having State jurisdiction	Other Heads of Departme nt	District Level Officers	Director General and Inspector General of Police	DGP AdsGP and IGsP having state jurisdiction	Other Heads of Department	District Level Officers
2	3	4	5	6	7	8	9	10	11
37	To Sanction rewards to the police personnel for good service including Police Officers and other meritorious service	Rs. 3.00 lakhs in a year subject to maximum of Rs 6000/- per individual	Rs. 2.00 lakhs in a year subject to maximum of Rs. 4000/- per individual	Rs. 1.00 lakh in a year subject to maximum of Rs 2000/- per case and Rs 500/- per individual	Rs. 50000/- in a year subject to maximum of Rs. 2000/- per case and Rs. 500/- per individual	Rs. 25.00 lakhs in a year subject to maximum of Rs. 10000/- per individual	Rs. 3.00 lakhs in a year subject to maximum of Rs. 8000/-per individual	Rs. 2.00 lakh in a year subject to maximum of Rs. 5000/-per individual	Rs. 1.00 lakh in a year subject to maximum of Rs. 5000/- per individual
	Approving companies quotations for recruitment process including printing of applications, question paper, Receiving of application, processing of applications, conducting different tests etc., reg. recruitment subject to following KTPP Rules	Nil	Nil	Nil	Nil	Estimates upto Rs. 2.00 crore p.a. for one recruitment work subject to availability of grants and following KTPP Act. & Rules	Estimates upto Rs. 1.00 crore p.a. for one recruitment work subject to availability of grants and following KTPP Act & Rules	Nil	Nil
	To Sanction remuneration to the supervisors etc., related to written examination work, remuneration to evaluation committee/subcommittee and other staff for pre and post examination activities and remuneration to question paper setters, Expert committee	Ni.	Nil	Nil	Nil	Full Powers subject to approval of rates by Government	Rs. 15.00 lakhs per recruitment subject to approval of rates by Government	Rs. 20,000/- per recruitment subject to approval of rates by Government	Rs. 10,000/- per recruitment subject to approval of rates by Government
7	To sanction expenditure on publication of official advertisement in newspaper and Television (vide Rule 55 (1) of MCE)	Upto Rs. 50,000/- in each case subject to Rs. 5 lakhs p.a.	Upto Rs. 30,000/- in each case subject to Rs. 2 lakhs p.a.	Upto Rs. 25,000/- in each case subject to Rs. 1 lakh p.a.	Upto Rs. 10,000/- in each case subject to Rs. 50,000/- p.a.	Rs. 1.00 lakh in each case upto Rs. 50.00 lakhs p.a. subject to Budget Provision and guidelines of Department	Rs. 50,000 in each case upto Rs. 5.00 lakhs p.a. subject to Budget Provision and guidelines of Department of	Rs. 50,000 in each case upto Rs. 5.00 lakhs p.a. subject to Budget Provision and guidelines of Department of	Rs. 25,000 in each case upto Rs. 2.00 lakhs p.a. subject to Budget Provision and guidelines of Department of

							of Information and Publicity	Information and Publicity	Information and Publicity	Inf an Public
5	34	To sanction charges for: Barricading on important occasions like Dasara, visit of VIPs., Mastakabisheka etc.,	Rs. 5.00 lakhs in each case	Rs. 2.00 lakhs in each case	Rs. 1.00 lakh in each case	Rs. 50,000 in each case	This power can be exercised under item No. 1 of No. FD 2 TFP 2010, dated 30-4-2010.			
6	35	To sanction purchase of equipment and clothing (Kit Articles to the Dept)	Rs. 2.00 lakhs in each time subject to limit of Rs. 20.00 lakhs p.a.	Rs. 1.00 lakh in each time subject to limit of Rs. 10.00 lakhs p.a.	Rs. 50,000 in each time subject to limit of Rs. 5.00 lakhs p.a.	Rs. 25,000 in each time subject to limit of Rs. 2.00 lakhs p.a.	Rs. 5.00 crore in each case subject to Budget Provisions and KTPP Act.	Rs. 5.00 lakhs in each case subject to Budget Provisions and KTPP Act.	Rs. 3.00 lakhs in each case subject to Budget Provisions and KTPP Act.	Nil
7	40	To meet expenditure towards training materials and files, Training conducted by Government organizations and also reputed private and public sector organizations	Rs. 50,000 each time limited to Rs. 5.00 lakhs p.a	Rs. 40,000 each time limited to Rs. 4.00 lakhs p.a	Rs. 20,000 each time limited to Rs. 2.00 lakhs p.a	Rs. 10,000 each time limited to Rs. 1.00 lakh p.a	Full powers	Rs. 1.00 lakh each time limited to Rs. 10,000 lakhs p.a.	Rs. 50,000/- each time limited to Rs. 5,00 lakhs p.a.	Rs. 20,00 each time limited Rs. 2, lakhs p.a.
8	41	To sanction charges for Scientific Tests like DNA, Narco analysis, brain mapping etc., and to send materials/documents etc., for expert opinion in criminal cases registered under PC or other criminal enactments	Rs. 50,000/- per case upto Rs. 2.00 lakhs p.a	Rs. 25,000/- per case upto Rs. 1.00 lakh p.a	Rs. 20,000/- per case upto Rs. 1.00 lakh p.a	Rs. 10,000/- per case upto Rs. Rs. 50,000/- p.a	Rs. 5.00 lakhs per case upto Rs. 50.00 lakhs p.a.	Rs. 2.00 lakhs per case upto Rs. 20.00 lakhs p.a.	Rs. 50,000/- per case upto Rs. 5.00 lakhs p.a	Rs. 25,00 per ca upto R 2.00 lakhs p
9	42	To sanction Hire charges of KSRTC and BMTC Vehicles	Full Powers	Rs. 1.00 lakh each time provided the Police Dept. vehicles are not available	Rs. 50,000/- each time provided the Police Dept. vehicles are not available	Rs. 25,000/- each time provided the Police Dept. vehicles are not available	Full Powers provided the Police Dept. vehicles are not available	Full Powers provided the Police Dept. vehicles are not available	Full Powers provided the Police Dept. vehicles are not available	Rs. 1.0 lakh each time provide the Police Dept vehicle are no availab
10	44	Payments to expenses towards Horse & Dogs	Rs. 2.00 lakhs p.a.	Rs. 1.00 lakh p.a.	Rs. 50,000/- p.a.	Rs. 30,000/- p.a.	This power is already included in general delegation of powers under diet items vide G.O No. FD 2 TFP 2010, dated 30-4-2010 under iter No. 9			

47	Photography/ video Audio records charges	Rs. 50,000/- each case	Rs. 25,000/- in each case	Rs. 10,000/- in each case	Rs. 5,000/- in each case	Rs. 10.00 lakhs in each case upto Rs. 50.00 lakhs p.a.	Rs. 5.00 lakhs in each case upto Rs. 25.00 lakhs p.a.	Rs. 2.00 lakhs in each case Rs. 10.00 lakhs p.a.	Rs. 1.00 lakh each case Rs. 5.00 lakhs p.a.
New Item	Police Summons' Duty Pass renewal amount/Payment of Bus warrant charges to KSRTC	Nil	Nil	Nil	Nil	Full Powers	Full Powers	Full Powers	Full Powers
	Police Department study Report Entrustment of evaluation work/study report on police department activities to reputed organisations in the field	Nil	Nil	Nil	Nil	This can be exercised under the provision for procuring consultancy services under the KTPP Act.			
New Item	Sanction of compensation amount of victims on the recommendation of NHRC/SHRC	Nil	Nil	Nil	Nil	Full Powers	Full Powers	Nil	Nil
New items	Purchase of arms & ammunitions/ Tear Gas Munitions/weapon Spare Parts/Guages and incurring the cost of their transportation	Nil	Nil	Nil	Nil	Upto Rs. 5.00 crore subject to availability of Budget Provision and following KTPP Act, Rules	Nil	Nil	Nil
New item	Fabrication of vehicles bodies (including bullet proofing)	Nil	Nil	Nil	Nil	Not necessary. Should come to Government			
New item	For procurement for Trial/Evaluation of New Machines and Equipments, Arms & Ammunitions, Clothing & Tentages	Nil	Nil	Nil	Nil	Full Powers	Nil	Nil	Nil

18	New item	Providing Computer Training to the staff through Public/Private Training Institutions for incurring expenditure on providing computer training to staff	Nil	Nil	Nil	Nil	This power is covered under training under item No. 21 of G.O. No. FD 2 TFP 2010, dated 30-4-2010	Nil	Nil	Nil
19	New item	Powers of Land Acquisition	Nil	Nil	Nil	Nil	Not required. May obtain Government permissio			

Note : 1. All Powers are subject to Budget provision

2. All powers are subject to following guidelines, rules specified under KTPP Act.

3. Department should either follow General Delegation of powers or Special Delegation of powers to the Department

B. Rajamma
Under Secretary to Govt. (Police Expenditure)
Home Department

ಪಿ.ಆರ್. 265

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಸಿ.ಕೆ. ರಾಮಯ್ಯ ಮಾಜಿ ಹೆಚ್.ಸಿ. ವಿಧಾನಸೌಧ ಪೊಲೀಸ್ ಠಾಣೆ ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಉಪ ಪೊಲೀಸ್ ಕಮೀಷನರ್, ಕೇಂದ್ರ ವಿಭಾಗ ಬೆಂಗಳೂರು, ಇವರ ಆದೇಶ ಸಂಖ್ಯೆ: 131/ಡಿಇ/ಆರ್6/ಡಿಸಿಪಿಕೇ/93 ದಿ: 17-3-2001

2) ಮೇಲ್ಮನವಿ ಪ್ರಾಧಿಕಾರ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್ (ಆಡಳಿತ) ಇವರ ಆದೇಶ ಸಂಖ್ಯೆ: 61/ಅಪೀಲು/2000-01 ದಿನಾಂಕ: 15-3-2002.

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 11-11-2010.

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)/68/2010-11 ದಿನಾಂಕ: 23-3-2011

ಪ್ರಸ್ತಾವನೆ :

ಶ್ರೀ ಸಿ.ಕೆ. ರಾಮಯ್ಯ, ಇವರು ಬೆಂಗಳೂರು ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ನೀವು ದಿನಾಂಕ: 25-7-93 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು ಗೈರುಹಾಜರಿ ಸೂಚನಾ ಪತ್ರ ಜಾರಿಯಾದ ಮೇಲೆಯೂ ಸಹ ಕರ್ತವ್ಯಕ್ಕೆ ಹಾಜರಾಗದೆ ತಮ್ಮ ಗೈರುಹಾಜರಿಯನ್ನು ಮುಂದುವರಿಸಿ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಕಮೀಷನರ್, ಕೇಂದ್ರ ವಿಭಾಗ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 17-3-2001 ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ದಿನಾಂಕ: 25-7-93 ರಿಂದ 04-3-94 ರವರೆಗಿನ ಅವಧಿಯನ್ನು ಸಂಬಳರಹಿತ ರಜೆಯೆಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್ (ಆಡಳಿತ), ಇವರು ಮೆಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 15-3-2002ರ ಆದೇಶದಲ್ಲಿ ಮೇಲ್ಮನವಿಯಲ್ಲಿ ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 169 ಪೊಸಿಅ 2010, ಬೆಂಗಳೂರು, ದಿನಾಂಕ: 12-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸಿ.ಕೆ. ರಾಮಯ್ಯ, ಮಾಜಿ ಹೆಚ್.ಸಿ. ವಿಧಾನಸೌಧ ಪೊಲೀಸ್ ಠಾಣೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 266

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಟಿ. ರಾಮಯ್ಯ, ಪಿ.ಐ. ಜಿಲ್ಲಾ ಗುಪ್ತಶಾಖೆ, ಬೆಂಗಳೂರು ಜಿಲ್ಲೆ ಮತ್ತು ಶ್ರೀ ಸಿ.ವಿ. ಕೃಷ್ಣೇಗೌಡ ಹೆಚ್.ಸಿ. ವಿಕಾಸಸೌಧ ಭದ್ರತೆ, ಬೆಂಗಳೂರು, ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)/69/2006-07 ದಿನಾಂಕ: 15-10-2010
2) ಅರ್ಜಿದಾರರುಗಳ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 30-11-2010 ಮತ್ತು 17-01-2011
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)/69/2006-07 ದಿನಾಂಕ: 28-02-2011

ಪ್ರಸ್ತಾವನೆ :

ಶ್ರೀ ಟಿ. ರಾಮಯ್ಯ, ಪಿ.ಐ. ಮತ್ತು ಶ್ರೀ ಸಿ.ವಿ. ಕೃಷ್ಣೇಗೌಡ ಹೆಚ್.ಸಿ. ಇವರುಗಳು ಈ ಹಿಂದೆ ಬೆಂಗಳೂರಿನ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅಧಿಕಾರ ದುರುಪಯೋಗ, ದುರ್ನಡತೆ ಹಾಗೂ ಕರ್ತವ್ಯಚ್ಯುತಿ ಎಸಗಿರುವ ಕಾರಣದ ಮೇಲೆ ಇವರುಗಳ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ಮತ್ತು 8 ರ ಪ್ರಕಾರ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

1) ಶ್ರೀ ಟಿ. ರಾಮಯ್ಯ, ಪೊಲೀಸ್ ಇನ್ಸ್‌ಪೆಕ್ಟರ್ ಆದ ನೀವು ದಿ: 02-02-2007 ರಂದು ನೀವು ಪಿರ್ಯಾದಿದಾರರಾದ ರಮೇಶ್ ಭಟ್‌ರವರಿಂದ ನೆರಳು ಸಾಕ್ಷಿ ಸಮಕ್ಷಮದಲ್ಲಿ 50,000 ಲಂಚದ ಹಣವನ್ನು ಕೇಳಿದ್ದು ಪಿರ್ಯಾದಿದಾರರು ಅಷ್ಟು ಹಣ ಇರುವುದಿಲ್ಲವೆಂದು ತಿಳಿಸಿದ್ದು ಮುಂಗಡವಾಗಿ ರೂ. 10,000-00 ಗಳನ್ನು ನೀಡುವುದಾಗಿ ತಿಳಿಸಿದ್ದು ಅದರಂತೆ ಪಿರ್ಯಾದಿದಾರರು ಹಣವನ್ನು ಕೊಡಲು ಬಂದಾಗ ನಿಮ್ಮ ಠಾಣೆಯ ಹೆಚ್.ಸಿ. 1193 ಶ್ರೀ ಸಿ.ವಿ. ಕೃಷ್ಣೇಗೌಡರವರನ್ನು ಕರೆದು ಅವರ ಕೈಯಲ್ಲಿ ಹಣವನ್ನು ಕೊಡುವಂತೆ ತಿಳಿಸಿದ್ದರ ಮೇರೆಗೆ ಹಣವನ್ನು ಕೃಷ್ಣೇಗೌಡರು ಪಿರ್ಯಾದಿದಾರರಿಂದ ಪಡೆದುಕೊಂಡಾಗ ಲೋಕಾಯುಕ್ತ ಟ್ರಾಪ್ ಬಲೆಗೆ ಸಿಕ್ಕಿ ಬಿದ್ದಿರುತ್ತಾರೆ."
2) ಹೆಚ್.ಸಿ. 1193 ಸಿ.ವಿ. ಕೃಷ್ಣೇಗೌಡ ಆದ ನೀವು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಪಿರ್ಯಾದಿದಾರರಾದ ಶ್ರೀ ರಮೇಶ್ ಭಟ್ ರವರ ವಿರುದ್ಧ ನಿಮ್ಮ ಠಾಣೆಯಲ್ಲಿ ದಾಖಲಾಗಿದ್ದ ಮೊ.ಸಂ. 255/2006 ಕಲಂ 419 ಐ.ಪಿ.ಸಿ. ಪ್ರಕರಣದಲ್ಲಿ ನಿಮ್ಮ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್‌ರವರಾದ ಶ್ರೀ ಟಿ. ರಾಮಯ್ಯನವರು ಹೇಳಿದಂತೆ ದಿ: 02-02-2007 ರಂದು ನೆರಳು ಸಾಕ್ಷಿ ಸಮಕ್ಷಮ ಪಿರ್ಯಾದಿದಾರರಾದ ಶ್ರೀ ರಮೇಶ್ ಭಟ್ ರವರಿಂದ 10,000/- ರೂ.ಗಳನ್ನು ಪಡೆದುಕೊಂಡ ಬಗ್ಗೆ ಪಿರ್ಯಾದಿದಾರರ ಮತ್ತು ನೆರಳು ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ರಸಾಯನಿಕ ತಜ್ಞರ ವರದಿಯಿಂದ ಹಾಗೂ ತನಿಖೆಯ ಸಮಯದಲ್ಲಿ ಸಂಗ್ರಹಿಸಿದ ದಾಖಲೆಗಳಿಂದ ಕಂಡುಬಂದಿರುತ್ತೆ"

ಮೇಲ್ಕಂಡ ಆರೋಪದ ಮೇಲೆ ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪವು ಸಾಕ್ಷಾಧಾರಗಳ ಕೊರತೆಯಿಂದ ಸಾಬೀತಾಗಿರುವುದಿಲ್ಲವೆಂದು ವರದಿ ನೀಡಿದ್ದು, ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದೆ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 15-10-2010ರ ಆದೇಶದಲ್ಲಿ ಅರ್ಜಿದಾರರುಗಳು ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ಹಂತಕ್ಕೆ ಒಂದು ವರ್ಷಗಳವರೆಗೆ ಇಳಿಸಲಾಗಿದೆ. ದಂಡನೆಯ ಅವಧಿಯಲ್ಲಿ ಯಾವುದೇ ವಾರ್ಷಿಕ ವೇತನ ಬಡ್ತಿಗಳಾಗಲಿ ಅಥವಾ ಪದೋನ್ನತಿಯಾಗಲಿ ಪಡೆಯಲು ಅರ್ಹರಿರುವುದಿಲ್ಲ. ದಂಡನಾವಧಿ ಪೂರ್ಣಗೊಂಡ ನಂತರ ದಂಡನಾವಧಿಯ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನದಿಂದ ವಾರ್ಷಿಕ ವೇತನ ಬಡ್ತಿಗಳನ್ನು ನೀಡತಕ್ಕದ್ದು, ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 189 ಪೊಸಿಅ 2010, ಬೆಂಗಳೂರು, ದಿನಾಂಕ: 12-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಟಿ. ರಾಮಯ್ಯ, ಪಿ.ಐ. ಗುಪ್ತಶಾಖೆ, ಬೆಂಗಳೂರು ಜಿಲ್ಲೆ ಮತ್ತು ಸಿ.ವಿ. ಕೃಷ್ಣೇಗೌಡ ಹೆಚ್.ಸಿ. ವಿಕಾಸಸೌಧ ಭದ್ರತೆ, ಬೆಂಗಳೂರು, ಇವರುಗಳು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 267

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕೆ.ಎಸ್. ರವೀಂದ್ರಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ. (ಕಿವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ ಇವರನ್ನು ಕ್ರಿಮಿನಲ್ ಆರೋಪದ ಮೇಲೆ ಸೇವೆಯಿಂದ ವಜಾ ಮಾಡುವ ಕುರಿತು.

ಓದಲಾಗಿದೆ:

1) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು, ಇವರ ಆದೇಶ ಸಂಖ್ಯೆ: ಡಿಪಿಎನ್/ಸಿಶಾ-1/133/2005-2006, ದಿನಾಂಕ: 18.08.2005.

2) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಪಿಎನ್/ಸಿಶಾ-1/133/2005-2006, ದಿನಾಂಕ 29.03.2006.

3) ಸರ್ಕಾರದ ಆದೇಶ ಸಂಖ್ಯೆ: ಒಇ 791 ಪಿಪಿಇ 2005, ದಿನಾಂಕ: 23.06.2007 ಮತ್ತು ತಿದ್ದುಪಡಿ ದಿನಾಂಕ 15.11.2007.

4) ಸರ್ಕಾರದ ಆದೇಶ ಸಂಖ್ಯೆ: ಒಇ 200 ಪಿಪಿಇ 2009, ದಿನಾಂಕ: 02.05.2009

5) ದಿನಾಂಕ 03.05.2011 ರಂದು ಮಾನ್ಯ ವಿಶೇಷ ನ್ಯಾಯಾಧೀಶರು ಹಾಗೂ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಸ್ಪೆಷಲ್ ಕೇಸ್ ಸಂಖ್ಯೆ: 7/2008ರಲ್ಲಿ ತೀರ್ಮ.

6) ದಿನಾಂಕ 30.05.2011 ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ: 547/2011 ರಲ್ಲಿ ಮಧ್ಯಂತರ ಆದೇಶ.

7) ದಿನಾಂಕ 20.07.2011ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ: 547/2011 ರಲ್ಲಿ ಆದೇಶ.

8) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಪಿಎನ್/ಸಿಶಾ/1ಎ/133/ 2005-06, ದಿನಾಂಕ 08.06.2011.

9) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆ ಸಂಖ್ಯೆ: ಡಿಪಿಎಆರ್ 9 ಸೇಇವಿ 95, ದಿನಾಂಕ 26.06.1996.

10) ದಿನಾಂಕ 30.11.2011ರ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸೆಡಿ/577/2011.

ಪ್ರಸ್ತಾವನೆ :

ಶ್ರೀ ಕೆ.ಎಸ್. ರವೀಂದ್ರಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ. (ಕಿವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಪಾಂಡವಪುರ ಇವರು ಮೈಸೂರಿನ 3ನೇ ಅಧಿಕ ಸಿ.ಜೆ.ಎಂ ನ್ಯಾಯಾಲಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಂಕ 10.08.2005ರಂದು ಮೈಸೂರು ನಜರ್‌ಬಾದ್ ಪೊಲೀಸ್ ಠಾಣೆಯ ಮೊಕದ್ದಮ ಸಂಖ್ಯೆ: 330/1993ರ ಪ್ರಕರಣದ ಪಿರ್ಯಾದುದಾರರಾದ ಶ್ರೀ ಬಷೀರ್ ಅಹಮದ್ ಖಾನ್ ಇವರಿಂದ ₹5,000/- ಗಳ ಲಂಚವನ್ನು ಪಡೆಯುತ್ತಿದ್ದಾಗ ಮೈಸೂರು ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿರುತ್ತಾರೆ. ಆದುದರಿಂದ ಇವರ ವಿರುದ್ಧ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು ಮೇಲೆ ಓದಲಾದ (1)ರ ಆದೇಶ ದಿನಾಂಕ 18.08.2005 ರಲ್ಲಿ ಇಲಾಖಾ ವಿಚಾರಣೆ ಬಾಕಿ ಇರಿಸಿ ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿ ಇಟ್ಟಿದ್ದರು. ಮೇಲೆ ಓದಲಾದ (2) ರ ಆದೇಶದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರು ಶ್ರೀ ಕೆ.ಎಸ್. ರವೀಂದ್ರಗೌಡ ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ ಅವರ ಅಮಾನತ್ತಿನ ಆದೇಶವನ್ನು ರದ್ದುಗೊಳಿಸಿ ಕರ್ತವ್ಯಕ್ಕೆ ಪುನರ್ ನೇಮಿಸಿದ್ದರು.

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ.ಎಸ್. ರವೀಂದ್ರಗೌಡ ಇವರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಲೋಕಾಯುಕ್ತ ಪೊಲೀಸರಿಗೆ ಅನುಮತಿಯನ್ನು ನೀಡಲಾಗಿತ್ತು.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ.ಎಸ್. ರವೀಂದ್ರಗೌಡ ಇವರ ವಿರುದ್ಧ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರನ್ವಯ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ (5)ರಲ್ಲಿ ಓದಲಾದ ಮಾನ್ಯ ವಿಶೇಷ ನ್ಯಾಯಾಧೀಶರು ಹಾಗೂ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಸ್ಪೆಷಲ್ ಕೇಸ್ ಸಂಖ್ಯೆ: 7/2008ರಲ್ಲಿ ದಿನಾಂಕ 03.05.2011ರಂದು ಶ್ರೀ ಕೆ.ಎಸ್. ರವೀಂದ್ರಗೌಡ ಇವರಿಗೆ ಒಂದು ವರ್ಷದ ಕಠಿಣ ಸಜಾ ಹಾಗೂ ₹10,000/- ದಂಡವನ್ನು ವಿಧಿಸಿದ್ದು, ದಂಡವನ್ನು ಕಟ್ಟಲು ತಪ್ಪಿದಲ್ಲಿ ಮುಂದುವರೆದು 3 ತಿಂಗಳ ಸಾದಾ ಸಜೆಯನ್ನು ವಿಧಿಸಿರುತ್ತಾರೆ.

ಮೇಲೆ (6)ರಲ್ಲಿ ಓದಲಾದ ಮಾನ್ಯ ಉಚ್ಚ ನ್ಯಾಯಾಲಯದ ಅಪೀಲ್ ಸಂಖ್ಯೆ: 547/2011ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 30.05.2011ರಂದು ಮಧ್ಯಂತರ ಆದೇಶವನ್ನು ನೀಡಿತ್ತು.

ಮೇಲೆ (7)ರಲ್ಲಿ ಓದಲಾದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯವು ಅಪೀಲ ಸಂಖ್ಯೆ: 547/2011ರಲ್ಲಿ ದಿನಾಂಕ 20.07.2011ರಂದು "____ For the aforesaid reasons, the appeal is dismissed. The appellant shall surrender before the trial court to undergo the sentence imposed upon him and the trial court also shall take necessary steps in this regard". ಎಂದು ಆದೇಶ ನೀಡಿರುತ್ತದೆ. ಸದರಿ ಆದೇಶದ ಅನ್ವಯ ಶ್ರೀ ಕೆ.ಎಸ್. ರವೀಂದ್ರಗೌಡ ಇವರನ್ನು ದಿನಾಂಕ 15.09.2011 ರಂದು ಮೈಸೂರಿನ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ದಿನಾಂಕ 03.05.2011 ರ ಆದೇಶದಂತೆ ಮಾನ್ಯ ನ್ಯಾಯಾಧೀಶರು ಶ್ರೀ ಕೆ.ಎಸ್. ರವೀಂದ್ರಗೌಡ ಇವರನ್ನು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದು, ಅದರಂತೆ ಸದರಿಯವರನ್ನು ದಿನಾಂಕ 15.09.2011ರಂದು ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆ.

ಮೇಲೆ (8)ರಲ್ಲಿ ಓದಲಾದ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು ಶ್ರೀ ಕೆ.ಎಸ್. ರವೀಂದ್ರಗೌಡ ಇವರು ಗ್ರೂಪ್-'ಬಿ' ಪತ್ರಾಂಕಿತ ಅಧಿಕಾರಿಯಾಗಿರುತ್ತಾರೆ. ಆದುದರಿಂದ ಇವರಿಗೆ ಶಿಕ್ಷೆ ವಿಧಿಸಿರುವ ದಿನಾಂಕದಿಂದ ಅಂದರೆ ದಿನಾಂಕ 03.05.2011 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾ ಮಾಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ (9)ರಲ್ಲಿ ಓದಲಾದ ದಿನಾಂಕ 26.06.1996 ರ ಸುತ್ತೋಲೆಯಲ್ಲಿ "ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14(1) ರ ಅನುಸಾರ ಸದರಿ ನಿಯಮಗಳ ನಿಯಮಗಳು 11, 12 ಮತ್ತು 13ರಲ್ಲಿ ಏನೇ ಹೇಳಲಾಗಿದ್ದರೂ ಕ್ರಿಮಿನಲ್ ನ್ಯಾಯಾಲಯದ ಕ್ರಿಮಿನಲ್ ಆರೋಪಕ್ಕಾಗಿ ದೋಷಸಿದ್ದಿಯಾದ ಸರ್ಕಾರಿ ನೌಕರರನ್ನು ಪುನಃ ಇಲಾಖಾ ವಿಚಾರಣೆಗೆ ಒಳಪಡಿಸದೆಯೇ ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವ ಅಥವಾ ಕೆಳದರ್ಜೆಗೆ ಇಳಿಸುವ ದಂಡನೆಯನ್ನು ವಿಧಿಸಬಹುದಾಗಿದೆ. ಈ ನಿಯಮದ ಅವಕಾಶವು ಸಂವಿಧಾನದ 311(2)ರ ಬೆಂಬಲ ಪಡೆದಿದೆ" ಎಂಬುದಾಗಿ ಉಲ್ಲೇಖಿಸಲಾಗಿದೆ.

ಮೇಲೆ (10) ರಲ್ಲಿ ಓದಲಾದ ದಿನಾಂಕ 30.11.2011 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಪ್ರಕರಣದ ವಿಷಯ ಸಂಖ್ಯೆ: ಸಿ/577/2011 ರಲ್ಲಿ ಸಚಿವ ಸಂಪುಟ ಟಿಪ್ಪಣಿಯ ಖಂಡಿಕೆ 11ರಲ್ಲಿ ಶ್ರೀ ಕೆ.ಎಸ್. ರವೀಂದ್ರಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ. (ಕಿವಿ) ಮತ್ತು ಜೆ.ಎಂಎಫ್.ಸಿ ನ್ಯಾಯಾಲಯ, ಪಾಂಡವಪುರ ಇವರು ಕ್ರಿಮಿನಲ್ ಅಪರಾಧ ಎಸಗಿರುವ ಕಾರಣಕ್ಕೆ ಮಾನ್ಯ ವಿಶೇಷ ನ್ಯಾಯಾಧೀಶರು ಹಾಗೂ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು ಇವರ ಆದೇಶ ದಿನಾಂಕ 03.05.2011 ರಲ್ಲಿ ಇವರಿಗೆ ಒಂದು ವರ್ಷದ ಕಠಿಣ ಸಜಾ ಹಾಗೂ ₹10,000/- ದಂಡವನ್ನು ವಿಧಿಸಿದ್ದು, ದಂಡವನ್ನು ಕಟ್ಟಲು ತಪ್ಪಿದಲ್ಲಿ ಮುಂದುವರೆದು 3 ತಿಂಗಳ ಸಾದಾ ಸಜೆಯನ್ನು ವಿಧಿಸಿರುವುದರಿಂದ, ಶ್ರೀ ಕೆ.ಎಸ್. ರವೀಂದ್ರಗೌಡ ಇವರನ್ನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8ರ ಉಪನಿಯಮ (viii) ರನ್ವಯ ಸರ್ಕಾರಿ ಸೇವೆಯಿಂದ ದಿನಾಂಕ 03.05.2011 ರಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾ ಮಾಡಲು ಸಚಿವ ಸಂಪುಟ ಸಮಿತಿಯು ಅನುಮೋದನೆ ನೀಡಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 222 ಪಿಪಿಇ 2011, ಬೆಂಗಳೂರು, ದಿನಾಂಕ: 27ನೇ ಡಿಸೆಂಬರ್, 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಶ್ರೀ ಕೆ.ಎಸ್. ರವೀಂದ್ರಗೌಡ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ. (ಕಿವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಪಾಂಡವಪುರ, ಇವರನ್ನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8ರ ಉಪನಿಯಮ (viii) ರನ್ವಯ ದಿನಾಂಕ 03.05.2011 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-'ಬಿ')

ಪಿ.ಆರ್. 268

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ 30 ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂ:ಲಾ 130 ಎಲ್ಎಜಿ 79, ದಿನಾಂಕ: 07.10.1980
2) ಸರ್ಕಾರದ ಆದೇಶ ಸಂ:ಲಾ 16 ಎಲ್‌ಸಿಇ 90, ದಿನಾಂಕ: 26.08.1993
3) ಸರ್ಕಾರದ ಆದೇಶ ಸಂ:ಲಾ 111 ಎಲ್‌ಸಿಇ 93, ದಿನಾಂಕ: 08.04.1994
4) ಸರ್ಕಾರದ ಆದೇಶ ಸಂ.ಲಾ 18 ಎಲ್‌ಸಿಇ 97(vol-II), ದಿನಾಂಕ: 04.05.2000
5) ಸರ್ಕಾರದ ಆದೇಶ ಸಂ:ಒಇ 428 ಪಿಪಿಇ 2010, ದಿನಾಂಕ: 13.07.2011
6) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ: ಡಿಪಿಎನ್/ಕೇಂಸ/ವಿವ/31/2011-12, ದಿನಾಂಕ: 07.07.2011.

ಪ್ರಸ್ತಾವನೆ :

• ಮೇಲೆ (1)ರಲ್ಲಿ ಓದಲಾದ ದಿನಾಂಕ: 07.10.1980ರ ಸರ್ಕಾರದ ಆದೇಶದನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ನಿರ್ದೇಶಕರ ಹಾಗೂ ಸರ್ಕಾರಿ ಅಭಿಯೋಜಕರುಗಳ ಕಛೇರಿಗಳಿಗೆ ಹೊಂದಿಕೊಂಡಂತೆ 21 ಪ್ರಥಮ ದರ್ಜೆ ಸಹಾಯಕರುಗಳ, ಮೇಲೆ (2)ರಲ್ಲಿ ಓದಲಾದ ದಿನಾಂಕ: 26.08.1993ರ ಸರ್ಕಾರದ ಆದೇಶದನ್ವಯ ಗುಲ್ಬರ್ಗಾದ ವಿಶೇಷ ನ್ಯಾಯಾಲಯ (ಪ.ಜಾ. ಮತ್ತು ಪ.ಪಂ.)ದ ಸರ್ಕಾರಿ ಅಭಿಯೋಜಕರ ಕಛೇರಿಗೆ ಹೊಂದಿಕೊಂಡಂತೆ 01 ಪ್ರಥಮ ದರ್ಜೆ ಸಹಾಯಕರ ಮೇಲೆ (3)ರಲ್ಲಿ ಓದಲಾದ ದಿನಾಂಕ: 08.04.1994ರ ಸರ್ಕಾರದ ಆದೇಶದನ್ವಯ ಬೆಂಗಳೂರು, ಮೈಸೂರು ಮತ್ತು ಮಂಗಳೂರಿನ ವಿಶೇಷ ನ್ಯಾಯಾಲಯ (ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ)ದ ಸರ್ಕಾರಿ ಅಭಿಯೋಜಕರ ಕಛೇರಿಗೆ ಹೊಂದಿಕೊಂಡ 03 ಪ್ರಥಮ ದರ್ಜೆ ಸಹಾಯಕರುಗಳ ಮೇಲೆ (4)ರಲ್ಲಿ ಓದಲಾದ ದಿನಾಂಕ: 04.05.2000ರ ಸರ್ಕಾರದ

ಆದೇಶದನ್ವಯ ನೂತನ ಜಿಲ್ಲೆಗಳಾದ ಗದಗ, ಹಾವೇರಿ, ಬಾಗಲಕೋಟೆ, ದಾವಣಗೆರೆ ಮತ್ತು ಕೊಪ್ಪಳಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳ ಸರ್ಕಾರಿ ಅಭಿಯೋಜಕರ ಕಛೇರಿಗೆ ಹೊಂದಿಕೊಂಡ 05 ಪ್ರಥಮ ದರ್ಜೆ ಸಹಾಯಕರುಗಳ, ಹೀಗೆ ಒಟ್ಟು 30 ಪ್ರಥಮ ದರ್ಜೆ ಸಹಾಯಕರುಗಳ ಹುದ್ದೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸೃಜಿಸಲಾಗಿದೆ.

ಮೇಲೆ (5)ರಲ್ಲಿ ಓದಲಾದ ದಿನಾಂಕ: 13.07.2011ರ ಸರ್ಕಾರದ ಆದೇಶದನ್ವಯ ಮೇಲೆ (1), (2), (3) ಮತ್ತು (4)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಸೃಜಿಸಿ, ಕಾಲ-ಕಾಲಕ್ಕೆ ಮುಂದುವರಿಸಿಕೊಂಡು ಬಂದಿರುವ 30 ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ: 31.03.2012ರ ಮುಂದುವರೆಸಲಾಗಿದೆ.

In the circumstances explained in the preamble above, Government is pleased to accord approval under section (2) of Forest (Conservation) Act 1980 for diversion of 8.34 ha. Forest land for laying of 400/220 KV double circuit transmission line from Bellary Thermal Power Station (BTPS) at Kudutini to Hiriyur (at Beerenahalli), Chitradurga District in favour of the Executive Engineer (Elect), Major Works Division, KPTCL, Chitradurga subject to the following conditions:

1. The legal status of Forest land shall remain unchanged
2. Demarcation of the proposed Forest area shall be carried out by erecting cement concrete pillars duly numbered at an interval of 20 mts. at the cost of user agency.
3. The compensatory afforestation shall be raised over 8.34 ha. identified non-forest land in Sy. No. 15 of Rangapura village, Hiriyur Taluk Chitradurga District at the cost of user agency. The State Government shall obtain prior permission of Central Government for change of location and schedule of compensatory afforestation, if any.
4. Non forest land for compensatory afforestation shall be notified by the State Government as P.F/R.F. and Nodal officer (FCA) shall report the compliance within 6 months.
5. The additional amount of the Net Present Value (NPV) of the diverted forest land if any becoming due after revision of the same by the Hon'ble Supreme Court of India in future, shall be charged by the Government from the user agency and the same shall be transferred to either in SB A/c No. SB01025213-CAF Karnataka, Corporation Bank, CGO Complex, Lodhi Road, New Delhi-110003 (RTGS/IFSC No. CORP0000371) or in SB A/c NO. 344902010105 421-KARNATAKA CAMPA, Union Bank of India, Sundar Nagar, New Delhi-110003 (RTGS/;IFSC No. UBIN0534498).
6. The proposal for renewal of forest land pertaining to 39.60 ha. diverted in favour of M/s. KPTCL for laying of 110 KV transmission line from Sagar to Sorab in Shimoga district shall be submitted with in a period of 3 months.
7. Pending dues towards NPV, extraction charges, arising of dwarf trees etc., in respect of other KPTCL Projects as mentioned vide PCCF letter No. A5(4)GFL.CR. 37/2008-09 dated 18-11-2011 shall be paid by the user agency and compliance shall be reported to Government of India. Ministry of Environment and Forest, Regional Office (South Zone), Bangalore within one month period.
8. Only minimum number of trees shall be cut based on actual requirement for laying the transmission line.
9. The total forest area utilized for the project shall not exceed 8.34 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
10. The lease tenure is 20 (Twenty) years
11. The land shall be utilized only for the purpose for which it is released
12. The user agency has to pay the lease rent as fixed by the Government at the time of sanction and any subsequent orders in this regard.
13. In case the forest land is not used for the stipulated purpose or when it is no linger needed for the stipulated purpose, the area should automatically revert to the Karnataka Forest Department.
14. The User Agency should not sub-lease, mortgage and hypothecate the forest area
15. The User Agency shall pay the extraction and transportation charges of trees as estimated by the Deputy Conservators of Forests from the proposed forest land.
16. The User Agency shall pay the cost of raising compensatory afforestation over an extent of 8.340 ha.of non-forest land at the rate prevailing at the time of sanction (at present it is Rs. 1,05,000-00 per ha.)
17. The User Agency shall pay the Net Present Value as per Orders dated 28-3-2008 and 9-5-2008 of the Hon'ble Supreme Court of India.
18. The Karnataka Forest Act, 1963 and Rules, 1969 will be applicable for any violation
19. The User Agency shall abide by all the conditions imposed upon by the Government of India, the Government of Karnataka and the Principal Chief Conservator of Forests(HOFF).
20. Any other conditions that the Additional Principal Chief Conservator of Forests (Central) Regional Office, Bangalore may impose from time to time for protection, improvement of flora and fauna in the forest area and public convenience, shall also be applicable.

By Order and in the name of the Governor of Karnataka

G. H. Anasuyamma

Under Secretary to Government

Forest, Ecology and Environment Department

P.R. 292

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಕಲಂ 38x ರನ್ವಯ ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನದ ಹುಲಿ ಸಂರಕ್ಷಣಾ ಪ್ರತಿಷ್ಠಾನವನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ :
1) ಪರಿಸರ ಮತ್ತು ಅರಣ್ಯ ಸಚಿವಾಲಯ, ಭಾರತ ಸರ್ಕಾರ ಇವರ ದಿನಾಂಕ 22-06-2007ರ ಅಧಿಸೂಚನೆ.
2) ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್‌ಇಇ 133 ಎಫ್‌ಡಬ್ಲ್ಯುಎಲ್ 2008, ದಿನಾಂಕ 24-01-2011.
3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರ ಪತ್ರ ಸಂಖ್ಯೆ ಬಿ2/ವಜೀ/ಸಿಆರ್-2001-12, ದಿನಾಂಕ 15-10-2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 22-06-2007 ರ ಅಧಿಸೂಚನೆಯಲ್ಲಿ ಕೇಂದ್ರ ಸರ್ಕಾರವು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಕಲಂ 38xರ ಪ್ರಕಾರ ರಾಜ್ಯದಲ್ಲಿ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳನ್ನು ಸ್ಥಾಪಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ 24-01-2011ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನದ ವನ್ಯಧಾಮವನ್ನು ಬಿಳಿಗಿರಿ ರಂಗನಾಥ ಸ್ವಾಮಿ ಹುಲಿ ಸಂರಕ್ಷಣಾ ಪ್ರದೇಶವೆಂದು ಘೋಷಿಸಿರುತ್ತದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ 15-10-2011ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರು ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಣೆ, ಭದ್ರಾ ವನ್ಯಜೀವಿ ಸಂರಕ್ಷಣೆ ಮತ್ತು ದಾಂಡೇಲಿ-ಅಣಶಿ ಹುಲಿ ಸಂರಕ್ಷಣೆಗಳಿಗೆ ಸಂಬಂಧಪಟ್ಟಂತೆ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳನ್ನು ಸ್ಥಾಪಿಸಿದಂತೆ ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನದ ಹುಲಿ ಸಂರಕ್ಷಣೆಗೂ ಪ್ರತಿಷ್ಠಾನವನ್ನು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಕಲಂ 38x ರನ್ವಯ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಂತೆ ಸ್ಥಾಪಿಸಲು ಹಾಗೂ ಅರಣ್ಯ ಮತ್ತು ಪರಿಸರ ಸಚಿವಾಲಯ, ನವದೆಹಲಿ ಇವರ ದಿನಾಂಕ 22-06-2007ರ ಅಧಿಸೂಚನೆಯನ್ವಯ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹುಲಿ ಸಂರಕ್ಷಣೆ, ಚಾಮರಾಜನಗರ ಇವರ ಹೆಸರಿನಲ್ಲಿ ಚಾಮರಾಜನಗರದಲ್ಲಿರುವ ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಉಳಿತಾಯ ಖಾತೆ ತೆರೆದು, ಖಾತೆ ಚಲಾವಣೆ ಮಾಡಲು ಸರ್ಕಾರದ ಆದೇಶ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಅಪಜೀ 104 ಎಫ್‌ಡಬ್ಲ್ಯೂಎಲ್ 2007 ಬೆಂಗಳೂರು, ದಿನಾಂಕ : 05-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಕಲಂ 38x ರನ್ವಯ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಂತೆ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನದ ಹುಲಿ ಸಂರಕ್ಷಣಾ ಪ್ರತಿಷ್ಠಾನವನ್ನು ಸ್ಥಾಪಿಸಲು ಹಾಗೂ ಅರಣ್ಯ ಮತ್ತು ಪರಿಸರ ಸಚಿವಾಲಯ, ನವದೆಹಲಿ ಇವರ ದಿನಾಂಕ 22-06-2007ರ ಮಾರ್ಗಸೂಚಿಗಳನ್ವಯ ಅರಣ್ಯ ಸಂರಕ್ಷಣಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿ, ಹುಲಿ ಸಂರಕ್ಷಣೆ, ಚಾಮರಾಜನಗರ ಇವರ ಹೆಸರಿನಲ್ಲಿ ಚಾಮರಾಜನಗರದಲ್ಲಿರುವ ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಉಳಿತಾಯ ಖಾತೆ ತೆರೆದು, ಖಾತೆ ಚಲಾವಣೆ ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ, ಚಾಮರಾಜನಗರ	ಅಧ್ಯಕ್ಷರು
2	ಅರಣ್ಯ ಸಂರಕ್ಷಣಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿ, (BRT Tiger Reserve, Chamrajanagar)	ಸದಸ್ಯ ಕಾರ್ಯದರ್ಶಿ
3	ಅಧ್ಯಕ್ಷರು, ಪರಿಸರ ಅಭಿವೃದ್ಧಿ ಸಮಿತಿ, ಅರೇಪಾಳ್ಯ, ಕೊಳ್ಳೇಗಾಲ ತಾಲ್ಲೂಕು	ಸದಸ್ಯರು
4	ಅಧ್ಯಕ್ಷರು, ಪರಿಸರ ಅಭಿವೃದ್ಧಿ ಸಮಿತಿ, ಕನ್ನಾರೀ ಕಾಲೋನಿ, ಚಾಮರಾಜನಗರ ತಾಲ್ಲೂಕು	ಸದಸ್ಯರು
5	ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಪುಣಜನೂರು	ಸದಸ್ಯರು
6	ವನಪಾಲಕ ಮತ್ತು ಕಾರ್ಯದರ್ಶಿ, ದೇವರಳ್ಳಿ ಪರಿಸರ ಅಭಿವೃದ್ಧಿ ಸಮಿತಿ, ವನ್ಯಜೀವಿ ವಲಯ, ಯಳಂದೂರು	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 293

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಸರ್ಕಾರಿ ಮತ್ತು ಸರ್ಕಾರಿ ಸ್ವಾಯತ್ತ ವೈದ್ಯಕೀಯ/ದಂತ ವಿಜ್ಞಾನ ಕಾಲೇಜುಗಳ ಹಾಗೂ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳ ಬೋಧಕ ಸಿಬ್ಬಂದಿಗೆ 2006ರ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಆಕುಕ 231 ಎಂಎಂಸಿ 98, ದಿನಾಂಕ 01-06-1999
2) ಸರ್ಕಾರದ ಆದೇಶ ಸಂಖ್ಯೆ: ಆಕುಕ 207 ಎಂಎಂಸಿ 2006, ದಿನಾಂಕ 19-05-2007
3) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್‌ನ ಅಧಿಸೂಚನೆ ಸಂಖ್ಯೆ: ಎಫ್ ನಂ. 37-3/ಲೀಗಲ್/2010. ದಿನಾಂಕ 22-10-2010.
4) ಅಧ್ಯಕ್ಷರು/ಕಾರ್ಯದರ್ಶಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶಿಕ್ಷಕರ ಸಂಘ, ಬೆಂಗಳೂರು ಇವರ ಪತ್ರ ದಿನಾಂಕ 01-01-2010.
5) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ವೈಶಿನಿ/ಎಸ್‌ಆರ್‌ಬಿ (1) 25/2009-10, ದಿನಾಂಕ 17-03-2010 ಹಾಗೂ 22-07-2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ಒಳಪಡುವ ಸರ್ಕಾರಿ ಹಾಗೂ ಸರ್ಕಾರಿ ಸ್ವಾಯತ್ತ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳ ಬೋಧಕ ವರ್ಗದವರಿಗೆ ದಿನಾಂಕ 01-06-1999 ರಿಂದ ಜಾರಿಗೆ ಬರುವಂತೆ 1996ರ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಸ್ವಾಯತ್ತ ವೈದ್ಯಕೀಯ/ದಂತ ವಿಜ್ಞಾನ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿಯ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗಿದೆ ಹಾಗೂ ಎಂಬಿಬಿಎಸ್ ಪದವಿಯೊಂದಿಗೆ ಡಿಪ್ಲೋಮಾ/ಡಿಗ್ರಿ ಪಡೆದ ಜೂನಿಯರ್ ರೆಸಿಡೆಂಟ್ ಮತ್ತು ಟ್ಯೂಟರ್‌ಗಳಿಗೆ ರೂ. 5000/–ಗಳಂತೆ ವಿಶೇಷ ಭತ್ಯೆ ಉಪನ್ಯಾಸಕರಿಗೆ ರೂ. 8000/–ಗಳಂತೆ, ಸಹಾಯಕ ಪ್ರಾಧ್ಯಾಪಕರಿಗೆ ರೂ. 10000/–ಗಳಂತೆ, ಸಹ ಪ್ರಾಧ್ಯಾಪಕರಿಗೆ ರೂ. 15,000/– ಗಳಂತೆ ಮತ್ತು ಪ್ರಾಧ್ಯಾಪಕರಿಗೆ ರೂ. 17,000/–ಗಳಂತೆ ನಾನ್ ಪ್ರಾಕ್ಟೀಸಿಂಗ್ ಭತ್ಯೆ ಮತ್ತು ಉಪನ್ಯಾಸಕರು ಮತ್ತು ಮೇಲ್ಪಟ್ಟ ಎಲ್ಲಾ ಬೋಧಕ ಸಿಬ್ಬಂದಿಯವರಿಗೆ ಮೂಲ ವೇತನದ ಶೇ. 40 ರಷ್ಟು ಶೈಕ್ಷಣಿಕ ಭತ್ಯೆ (Academic Allowance) ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ All India Council for Technical Education (Pay-Scales, Service Conditions and Qualifications for the Teachers and other Academic Staff in Technical Institutions) (Degree) Regulations, 2010 ಈ ನಿಯಮಗಳಲ್ಲಿ ಪರಿಷ್ಕೃತ ವೇತನವನ್ನು ದಿನಾಂಕ 01–01–2006 ರಿಂದ ಜಾರಿಗೆ ಬರುವಂತೆ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಪತ್ರದಲ್ಲಿ ಅಧ್ಯಕ್ಷರು/ಕಾರ್ಯದರ್ಶಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶಿಕ್ಷಕರ ಸಂಘ, ಬೆಂಗಳೂರು ಇವರು ದಿನಾಂಕ 01–06–1999ರ ಆದೇಶದನ್ವಯ ಸರ್ಕಾರಿ ವೈದ್ಯಕೀಯ/ದಂತ ವಿಜ್ಞಾನಗಳ ಸಂಸ್ಥೆಯಲ್ಲಿನ ಬೋಧಕ ಸಿಬ್ಬಂದಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿತ್ತೆಂದು, ಸದರಿ ಆದೇಶದಲ್ಲಿ ಕೇಂದ್ರ ಸರ್ಕಾರವು ಎಐಸಿಟಿಇ ವೇತನ ಶ್ರೇಣಿಯನ್ನು ಪರಿಷ್ಕರಿಸಿದಾಗ ರಾಜ್ಯ ಸರ್ಕಾರವು ವೇತನವನ್ನು ಪರಿಷ್ಕರಿಸುವುದೆಂದು ನಮೂದಿಸಲಾಗಿತ್ತೆಂದು ತಿಳಿಸುತ್ತಾ, ಬೆಂಗಳೂರು ವೈದ್ಯಕೀಯ ಕಾಲೇಜು ಸ್ವಾಯತ್ತ ಸಂಸ್ಥೆಯಾಗಿ ರೂಪಗೊಂಡಾಗ ಈ ಸಂಸ್ಥೆಯಲ್ಲಿನ ಎಲ್ಲಾ ಬೋಧಕ ಸಿಬ್ಬಂದಿಯನ್ನು ಕೆಲವೊಂದು ಷರತ್ತುಗಳನ್ವಯ ವಿಲೀನಗೊಳಿಸಲಾಗಿತ್ತೆಂದು, ಅದರಂತೆ, ಕೇಂದ್ರ ಸರ್ಕಾರವು ಪರಿಷ್ಕರಿಸಿದ ಎಐಸಿಟಿಇ ವೇತನ ಶ್ರೇಣಿಯನ್ನು ರಾಜ್ಯ ಸರ್ಕಾರವು ಪರಿಷ್ಕರಿಸಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿಗೆ ಕೇಂದ್ರ ಸರ್ಕಾರವು ಪರಿಷ್ಕರಿಸಿ ಜಾರಿಗೊಳಿಸಿರುವ 2006ರ ಎಐಸಿಟಿಇ ವೇತನ ಶ್ರೇಣಿಯನ್ನು ದಿನಾಂಕ 01–01–2006 ರಿಂದ ಪೂರ್ವಾನ್ವಯವಾಗುವಂತೆ ರಾಜ್ಯ ಸರ್ಕಾರವು ಪರಿಷ್ಕರಿಸಿ ಜಾರಿಗೊಳಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಪತ್ರಗಳ ಮುಖಾಂತರ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ಒಳಪಡುವ ವೈದ್ಯಕೀಯ/ದಂತ ವಿಜ್ಞಾನ ಸಂಸ್ಥೆಗಳ ಬೋಧಕರಿಗೆ ಮತ್ತು ಸರ್ಕಾರಿ ಸೇವೆಯಲ್ಲಿ ಮುಂದುವರಿಯುತ್ತಿರುವ ಬೋಧಕರಿಗೆ (ಅಂದಿನ ಸರ್ಕಾರಿ ಸಂಸ್ಥೆಗಳಲ್ಲಿ) 2006ರ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯನ್ನು ನೀಡುವ ಬಗ್ಗೆ ತಮ್ಮ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಕೆಳಕಂಡ ಪರಿಷ್ಕೃತ ವೇತನ ಶ್ರೇಣಿಗಳನ್ನು ಶಿಫಾರಸ್ಸು ಮಾಡಿರುತ್ತದೆಂದು ತಿಳಿಸಿರುತ್ತಾರೆ.

ಕ್ರಮ ಸಂಖ್ಯೆ	ವೃಂದ	ವೇತನ ಶ್ರೇಣಿ (ರೂ.ಗಳಲ್ಲಿ)
1	ಟ್ಯೂಟರ್ / ರೆಸಿಡೆಂಟ್ / ಸೀನಿಯರ್ ರೆಸಿಡೆಂಟ್	ಕ್ರೋಢೀಕೃತ ವೇತನ:– 1ನೇ ವರ್ಷ -20000 2ನೇ ವರ್ಷ -21000 3ನೇ ವರ್ಷ -22000
2	ಉಪನ್ಯಾಸಕರು	Pay Band-15600-39100 AGP 6000
3	ಸಹಾಯಕ ಪ್ರಾಧ್ಯಾಪಕರು	Pay Band-15600-39100 AGP 8000
4	ಸಹ ಪ್ರಾಧ್ಯಾಪಕರು	Pay Band-37400-67000 AGP 9000
5	ಪ್ರಾಧ್ಯಾಪಕರು	Pay Band-37400-67000 AGP 10000

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಬೋಧಕ ವರ್ಗದವರಿಗೆ ಮತ್ತು ಸದರಿ ಸಂಸ್ಥೆಗಳಲ್ಲಿ ಸರ್ಕಾರಿ ಸೇವೆಯಲ್ಲಿ ಮುಂದುವರಿಯುತ್ತಿರುವ ಬೋಧಕ ವರ್ಗದವರಿಗೆ ದಿನಾಂಕ 01–04–2011 ರಿಂದ ಅನ್ವಯವಾಗುವಂತೆ ಕೆಲವೊಂದು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಕೆಳಕಂಡ 2006 ರ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (AICTE) ಪರಿಷ್ಕೃತ ವೇತನ ಶ್ರೇಣಿಗಳನ್ನು ವಿಸ್ತರಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಎಂಎಂಸಿ 2010, ಬೆಂಗಳೂರು, ದಿನಾಂಕ : 16–12–2011

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳು, ಸರ್ಕಾರಿ ಸ್ವಾಯತ್ತ ದಂತ ವಿಜ್ಞಾನ ಕಾಲೇಜುಗಳು ಮತ್ತು ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಾದ ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ನೆಫ್ರೋ–ಯುರಾಲಜಿ ಸಂಸ್ಥೆ, ಎಸ್.ಡಿ.ಎಸ್.ಟಿ.ಬಿ. ಸಂಶೋಧನಾ ಕೇಂದ್ರ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ, ಬೆಂಗಳೂರು ಹಾಗೂ ಧಾರವಾಡ ಮಾನಸಿಕ ಆರೋಗ್ಯ ಮತ್ತು ನರರೋಗ ವಿಜ್ಞಾನಗಳ ಸಂಸ್ಥೆ, ಧಾರವಾಡ ಈ ಸಂಸ್ಥೆಗಳಲ್ಲಿನ ಕೆಳಕಂಡ ಬೋಧಕ ವರ್ಗದವರಿಗೆ ಮತ್ತು ಸದರಿ ಸಂಸ್ಥೆಗಳಲ್ಲಿ ಸರ್ಕಾರಿ ಸೇವೆಯಲ್ಲಿ ಮುಂದುವರಿಯುತ್ತಿರುವ ಬೋಧಕ ವರ್ಗದವರಿಗೆ ದಿನಾಂಕ 01–04–2011 ರಿಂದ

ಅನ್ವಯವಾಗುವಂತೆ 2006ರ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (AICTE) ಪರಿಷ್ಕೃತ ವೇತನ ಶ್ರೇಣಿಗಳನ್ನು ಈ ಕೆಳಕಂಡಂತೆ ವಿಸ್ತರಿಸಿ ಆದೇಶಿಸಿದೆ.

ಕ್ರ.ಸಂ.	ವೃಂದದ ಪದನಾಮ	ಈಗ ಬರುವ ಶ್ರೇಣಿ	ನೂತನ ಶ್ರೇಣಿ	
		ವೇತನ ಶ್ರೇಣಿ	ಹೊಸ ವೇತನ ಶ್ರೇಣಿ ಬ್ಯಾಂಡ್ ರೂ.	ಅಕಾಡೆಮಿಕ್ ಗ್ರೇಡ್ ವೇತನ ರೂ.
1	ಉಪನ್ಯಾಸಕರು ಹಾಗೂ ಸೀನಿಯರ್ ರೆಸಿಡೆಂಟ್ ಮತ್ತು ಪರ್ಮನೆಂಟ್ ಟ್ಯೂಟರ್ (with Post Graduate Master Degree)	8000–13500	15600–39100	6000
2	ಸಹಾಯಕ ಪ್ರಾಧ್ಯಾಪಕರು	12000–18300	15600–39100	8000
3	ಸಹ ಪ್ರಾಧ್ಯಾಪಕರು	16400–20000	37400–67000	9000
4	ಪ್ರಾಧ್ಯಾಪಕರು, ನಿರ್ದೇಶಕರು ಮತ್ತು ಡೀನ್, ನಿರ್ದೇಶಕರು ಮತ್ತು ಪ್ರಾಂಶುಪಾಲರು	18400–22400	37400–67000	10000

<u>ಷರತ್ತು ಮತ್ತು ನಿಬಂಧನೆಗಳು</u>

i) ವೇತನ ನಿಗದೀಕರಣ ಸೂತ್ರ:-

6ನೇ ಕೇಂದ್ರ ವೇತನ ಆಯೋಗವು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರವು ಒಪ್ಪಿಕೊಂಡಿರುವ ವೇತನ ನಿಗದೀಕರಣ ಸೂತ್ರವನ್ನು ಬೋಧಕ ವರ್ಗದವರ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದೀಕರಣಕ್ಕಾಗಿ ಅನುಬಂಧ 1 ರಿಂದ 4 ರವರೆಗೆ ಇರುವಂತೆ ಅಳವಡಿಸಿಕೊಳ್ಳತಕ್ಕದ್ದು.

ii) ಕಾಲಬದ್ಧ ಪದೋನ್ನತಿ (TBP):-

ಅ) ಸಹಾಯಕ ಪ್ರಾಧ್ಯಾಪಕರು ಅದೇ ಹುದ್ದೆಯಲ್ಲಿ 5 ವರ್ಷಗಳ ಸೇವೆ ಸಲ್ಲಿಸಿ ಎಂ.ಸಿ.ಐ. ಮಾರ್ಗಸೂಚಿಯಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಗೆ ನಿಗದಿಪಡಿಸಿರುವ ಎಲ್ಲಾ ಷರತ್ತು ಮತ್ತು ಶೈಕ್ಷಣಿಕ ಅರ್ಹತೆಗಳನ್ನು ಹೊಂದಿದ್ದಲ್ಲಿ, ಬಡ್ತಿ ನೀಡಲು ಖಾಲಿ ಹುದ್ದೆ ಲಭ್ಯವಿಲ್ಲದಿದ್ದಲ್ಲಿ ಅವರಿಗೆ ಸಹ ಪ್ರಾಧ್ಯಾಪಕರ ಹುದ್ದೆಯ ವೇತನ ಶ್ರೇಣಿಯನ್ನು ನೀಡಲಾಗುವುದು. ಆದರೆ, ಅವರು ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿಯೇ ಮುಂದುವರಿದು ಕಾರ್ಯನಿರ್ವಹಿಸತಕ್ಕದ್ದು.

ಆ) ಸಹ ಪ್ರಾಧ್ಯಾಪಕರು ಅದೇ ಹುದ್ದೆಯಲ್ಲಿ 10 ವರ್ಷಗಳ ಸೇವೆ ಸಲ್ಲಿಸಿ ಎಂ.ಸಿ.ಐ. ಮಾರ್ಗಸೂಚಿಯಲ್ಲಿ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಗೆ ನಿಗದಿಪಡಿಸಿರುವ ಎಲ್ಲಾ ಷರತ್ತು ಮತ್ತು ಶೈಕ್ಷಣಿಕ ಅರ್ಹತೆಗಳನ್ನು ಹೊಂದಿದ್ದಲ್ಲಿ, ಬಡ್ತಿ ನೀಡಲು ಖಾಲಿ ಹುದ್ದೆ ಲಭ್ಯವಿಲ್ಲದಿದ್ದಲ್ಲಿ ಅವರಿಗೆ ಪ್ರಾಧ್ಯಾಪಕರ ಹುದ್ದೆಗೆ ಅನ್ವಯವಾಗುವ ಶೈಕ್ಷಣಿಕ ಗ್ರೇಡ್ ವೇತನ (AGP) ವನ್ನು ನೀಡಲಾಗುವುದು. ಆದರೆ, ಅವರು ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿಯೇ ಮುಂದುವರಿದು ಕಾರ್ಯ ನಿರ್ವಹಿಸಿರತಕ್ಕದ್ದು.

ಇ) ದಿನಾಂಕ 19-05-2007ರ ಸರ್ಕಾರಿ ಆದೇಶ ಸಂಖ್ಯೆ: ಆಕುಕ 2007 ಎಂಎಂಸಿ 2006ರಲ್ಲಿ ನೀಡಿರುವ ಅವೃತ್ತಿ ಭತ್ಯೆಯು (Non Practicing Allowance) ಐಚ್ಛಿಕವಾಗಿ ಮುಂದುವರೆಯತಕ್ಕದ್ದು ಮತ್ತು ಸದರಿ ಆದೇಶದಲ್ಲಿ ಮಂಜೂರಾಗಿರುವ ಇತರೆ ಸೌಲಭ್ಯಗಳು ದಿನಾಂಕ 01-04-2011 ರಿಂದ ರದ್ದಾಗುತ್ತವೆ.

iii) ವಾರ್ಷಿಕ ವೇತನ ಬಡ್ತಿ:–

ಪ್ರತಿ ವಾರ್ಷಿಕ ವೇತನ ಬಡ್ತಿಯ ದರವು pay band ಮತ್ತು AGP ನಲ್ಲಿ ಪಡೆಯುವ ಒಟ್ಟು ಮೂಲ ವೇತನದ ಶೇ. 3 ಕ್ಕೆ ಸಮನಾಗಿರತಕ್ಕದ್ದು.

iv) ಭತ್ಯೆಗಳು:–

ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಸೇರಿದಂತೆ ಎಲ್ಲಾ ಇತರೆ ಭತ್ಯೆಗಳೂ ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವ ದರಗಳಲ್ಲಿ ದಿನಾಂಕ 01–04–2011 ರಿಂದ ಲಭ್ಯವಾಗತಕ್ಕದ್ದು.

v) ತುಟ್ಟಿ ಭತ್ಯೆ:–

ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯಲ್ಲಿ ದಿನಾಂಕ 01–04–2011 ರಿಂದ ಮೂಲ ವೇತನದ ಶೇ. 51 ರಷ್ಟು ಮತ್ತು 01–07–2011 ರಿಂದ ಶೇ. 58 ರಷ್ಟು ತುಟ್ಟಿ ಭತ್ಯೆಗೆ ಅರ್ಹರಿರುತ್ತಾರೆ.

vi) ವಯೋ ನಿವೃತ್ತಿ ವಯಸ್ಸು:–

ಇತರೆ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುವಂತೆ ವಯೋ ನಿವೃತ್ತಿ ವಯಸ್ಸು 60 ವರ್ಷಕ್ಕೆ ಮುಂದುವರೆಯತಕ್ಕದ್ದು

vii) ಜಾರಿಗೊಳಿಸುವ ದಿನಾಂಕ:–

ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ 01–04–2011 ರಿಂದ ವಿಸ್ತರಿಸಲಾಗುವುದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 16 ಎಸ್‌ಆರ್‌ಪಿ 2011, ದಿನಾಂಕ 05–03–2011 ಮತ್ತು ಸಂಖ್ಯೆ: ಆಇ 519 ಸೇ. 2/2011, ದಿನಾಂಕ 07–12–2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ಕೆ. ಭೈರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ–2,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ವೈದ್ಯಕೀಯ ಶಿಕ್ಷಣ)

ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಎಂಎಂಸಿ 2010, ಬೆಂಗಳೂರು, ದಿನಾಂಕ : 16-12-2011ಕ್ಕೆ

ಅನುಬಂಧ-1

Fitment Table-1

Pre-Revised Scale: Rs. 8000-275-13500

Revised Pay Band: Rs. 15600-39100+AGP 6000

Sl. No.	Pre-Revised		Revised Pay	
	Basic Pay Rs.	Pay in Pay Band Rs.	AGP: Rs.	Revised Basic Pay Rs.
1	8000	15600	6000	21600
2	8275	15600	6000	21600
3	8550	15910	6000	21910
4	8825	16420	6000	22420
5	9100	16930	6000	22930
6	9375	17440	6000	23440
7	9650	17950	6000	23950
8	9925	18470	6000	24470
9	10200	18980	6000	24980
10	10475	19490	6000	25490
11	10750	20000	6000	26000
12	11025	20510	6000	26510
13	11300	21020	6000	27020
14	11575	21530	6000	27530
15	11850	22050	6000	28050
16	12125	22560	6000	28560
17	12400	23070	6000	29070
18	12675	23580	6000	29580
19	12950	24090	6000	30090
20	13225	24600	6000	30600
21	13500	25110	6000	31110

ಎ. ಕೆ. ಭೈರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ-2,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ವೈದ್ಯಕೀಯ ಶಿಕ್ಷಣ)

ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಎಂಎಂಸಿ 2010, ಬೆಂಗಳೂರು, ದಿನಾಂಕ 16-12-2011ಕ್ಕೆ

ಅನುಬಂಧ-2

Fitment Table-2

Pre-Revised Scale: Rs. 12000-420-18300

Revised Pay Band: Rs. 15600-39100+AGP 8000

Sl. No.	Pre-Revised		Revised Pay	
	Basic Pay Rs.	Pay in Pay Band Rs.	AGP: Rs.	Revised Basic Pay Rs.
1	12000	22320	8000	30320
2	12420	23110	8000	31110
3	12840	23890	8000	31890
4	13260	24670	8000	32670
5	13680	25450	8000	33450
6	14100	26230	8000	34230
7	14520	27010	8000	35010
8	14940	27790	8000	35790
9	15360	28570	8000	36570
10	15780	29360	8000	37360

11	16200	30140	8000	38140
12	16620	30920	8000	38920
13	17040	31700	8000	39700
14	17460	32480	8000	40480
15	17880	33260	8000	41260
16	18300	34040	8000	42040

ಎ. ಕೆ. ಭೈರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಎಂಎಂಸಿ 2010, ಬೆಂಗಳೂರು, ದಿನಾಂಕ 16-12-2011ಕ್ಕೆ

ಅನುಬಂಧ-3

Fitment Table-3

Pre-Revised Scale: Rs. 16400-450-20000
Revised Pay Band: Rs. 37400-67000+AGP 9000

Sl. No.	Pre-Revised		Revised Pay	
	Basic Pay Rs.	Pay in Pay Band Rs.	AGP: Rs.	Revised Basic Pay Rs.
1	16400	40890	9000	49890
2	16850	40890	9000	49890
3	17300	42120	9000	51100
4	17750	42120	9000	51100
5	18200	43390	9000	52390
6	18650	43390	9000	52390
7	19100	44700	9000	53700
8	19550	44700	9000	53700
9	20000	46050	9000	55050

ಎ. ಕೆ. ಭೈರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಎಂಎಂಸಿ 2010, ಬೆಂಗಳೂರು, ದಿನಾಂಕ 16-12-2011ಕ್ಕೆ

ಅನುಬಂಧ-4

Fitment Table-4

Pre-Revised Scale: Rs. 18400-500-22400
Revised Pay Band: Rs. 37400-67000+AGP 10000

Sl. No.	Pre-Revised		Revised Pay	
	Basic Pay Rs.	Pay in Pay Band Rs.	AGP: Rs.	Revised Basic Pay Rs.
1	18400	44700	10000	54700
2	18900	46050	10000	56050
3	19400	46050	10000	56050
4	19900	47440	10000	57440
5	20400	47440	10000	57440
6	20900	48870	10000	58870
7	21400	48870	10000	58870
8	21900	50340	10000	60340
9	22400	51850	10000	61850

ಎ. ಕೆ. ಭೈರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಪಿ.ಆರ್.294

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಸ್ವಸಹಾಯ ಸಂಘಗಳ ಬಲವರ್ಧನೆಗಾಗಿ ವಿವಿಧ ತರಬೇತಿ ಕಾರ್ಯಕ್ರಮಗಳನ್ನು 2011-12ನೇ ಸಾಲಿನಲ್ಲಿ ಹಮ್ಮಿಕೊಳ್ಳುವ ಬಗ್ಗೆ.

ಪ್ರಸ್ತಾವನೆ :

2011-12ನೇ ಸಾಲಿನಲ್ಲಿ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ರಾಜ್ಯದಲ್ಲಿನ ಸ್ವಸಹಾಯ ಸಂಘಗಳ ಬಲವರ್ಧನೆಗಾಗಿ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯಕ್ಕೆ ಪ್ರಸ್ತಾವನೆ ಕಳುಹಿಸಲಾಗಿತ್ತು. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಈ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಮೊದಲನೇ ಕಂತಿನ ಅನುದಾನ ರೂ. 43.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈ ಅನುದಾನವನ್ನು 2011-12ನೇ ಸಾಲಿನಲ್ಲಿ ಉಪಯೋಗಿಸಿಕೊಳ್ಳಬೇಕಾಗಿದೆ. ಆದುದರಿಂದ, ಅನುದಾನವನ್ನು ಬಳಸಿಕೊಂಡು ಎಸ್.ಜಿ.ಎಸ್.ವೈ.ಯಡಿ ಕಡಿಮೆ ಪ್ರಗತಿ ಸಾಧಿಸಿರುವ 15 ಜಿಲ್ಲೆಗಳಲ್ಲಿ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ದಿನಾಂಕ 07-01-2012ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳೊಂದಿಗೆ ನಡೆದ ಸಂವಾದದಲ್ಲಿ ಕೆಳಕಂಡಂತೆ ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1	ಉಪಗ್ರಹ ಆಧಾರಿತ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ ಎಸ್ ಜಿಎಸ್‌ವೈ ಯಡಿಯಲ್ಲಿ ಕಡಿಮೆ ಪ್ರಗತಿ ಸಾಧಿಸಿರುವ 15 ಜಿಲ್ಲೆಗಳ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸ್ವಸಹಾಯ ಸಂಘದ ಪ್ರತಿನಿಧಿಗಳಿಗೆ	1 ದಿನ
2	ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ: ಆಯ್ದ 40 ಸ್ವಸಹಾಯ ಸಂಘ ಪ್ರತಿನಿಧಿಗಳಿಗೆ ಜಿಲ್ಲೆಗೆ 1 ರಂತೆ 15 ಕಾರ್ಯಕ್ರಮಗಳು	1 ವಾರ
3	ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ: ಸಂಘದ ಸದಸ್ಯರು ಆಯ್ಕೆ ಮಾಡಿದ ವೃತ್ತಿಗಳಲ್ಲಿ ಕೌಶಲ್ಯ ತರಬೇತಿ	ಕೌಶಲ್ಯ ಆಧಾರಿಸಿ ತರಬೇತಿ ಅವಧಿ ನಿಗದಿಪಡಿಸಲಾಗುವುದು
4	ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮ: ಈಗಾಗಲೇ ಆದಾಯ ಉತ್ಪನ್ನ ಚಟುವಟಿಕೆಗಳನ್ನು ಕೈಗೊಂಡಿರುವ ಸ್ವಸಹಾಯ ಸಂಘದ ಸದಸ್ಯರುಗಳಿಗೆ ಹಣಕಾಸು ನಿರ್ವಹಣೆ, ವ್ಯವಸ್ಥಿತ ಉತ್ಪಾದನೆ, ಪ್ಯಾಕೇಜಿಂಗ್, ಮಾರುಕಟ್ಟೆ ನಿರ್ವಹಣೆ ಬಗ್ಗೆ ತರಬೇತಿ ಕಾರ್ಯಕ್ರಮ (ಆಯ್ದ 5 ಜಿಲ್ಲೆಗಳಿಗೆ)	4 ದಿನ

ಈ ಎಲ್ಲ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅನುಕೂಲವಾಗುವಂತೆ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರನ್ನು ನೋಡಲ್ ಏಜನ್ಸಿಯಾಗಿ ನೇಮಿಸಬೇಕಾಗಿದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸಲು ಅನುಕೂಲವಾಗುವಂತೆ ಕ್ರಮ ಸಂಖ್ಯೆ 1 ಮತ್ತು 4 ಕಾರ್ಯಕ್ರಮಗಳನ್ನು ಸೀಡಾಕ್ ಸಂಸ್ಥೆಯೊಂದಿಗೆ ನಡೆಸುವುದು "Empanelment of NGOs and Institutions through Expression of Interest" ಕರೆದು ಉಳಿದ ಕಾರ್ಯಕ್ರಮಗಳನ್ನು ದಿನಾಂಕ 31-03-2012ರೊಳಗೆ ಪೂರ್ಣಗೊಳಿಸುವ ಷರತ್ತಿನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ಈ ಆದೇಶ:

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1 ಎಸ್‌ಜಿವೈ 2011 (ಎ1) ಬೆಂಗಳೂರು, ದಿನಾಂಕ : 07-01-2012.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಜ್ಯ ಸರ್ಕಾರವು ಎಸ್.ಜಿ.ಎಸ್.ವೈ.ಯಡಿ ಕಡಿಮೆ ಪ್ರಗತಿ ಸಾಧಿಸಿರುವ 15 ಜಿಲ್ಲೆಗಳಲ್ಲಿ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ರವರನ್ನು ಈ ಕೆಳಕಂಡ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ನೋಡಲ್ ಏಜೆನ್ಸಿಯಾಗಿ ಕೆಳಕಂಡ ಷರತ್ತುಗಳೊಂದಿಗೆ ನೇಮಿಸಲು ಮಂಜೂರಾತಿ ನೀಡಿದೆ.

1) ಉಪಗ್ರಹ ಆಧಾರಿತ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ
2) ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ
3) ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ
4) ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮ

ಷರತ್ತುಗಳು:

1. ತರಬೇತಿ ಕಾರ್ಯಕ್ರಮಗಳ ತರಬೇತಿ ವಿನ್ಯಾಸವನ್ನು ಸಿದ್ಧಪಡಿಸಿ ತರಬೇತಿ ನಡೆಸುವ ಸಂಸ್ಥೆಗಳಿಗೆ ಒದಗಿಸುವುದು.
2. ತರಬೇತಿ ದಿನಾಂಕಗಳನ್ನು ಮುಂಚಿತವಾಗಿ ನಿರ್ಧರಿಸಿ ತರಬೇತಿ ಕ್ಯಾಲೆಂಡರ್ ಸಿದ್ಧಪಡಿಸುವುದು
3. "Empanelment of NGOs through Expression of Interest" ಕರೆದು ಸರ್ಕಾರೇತರ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ದಿನಾಂಕ 31-03-2012 ರೊಳಗೆ ಪೂರ್ಣಗೊಳಿಸುವುದು.
4. ರಾಜ್ಯ ಸರ್ಕಾರ ತರಬೇತಿ ಬಗ್ಗೆ ಇಲ್ಲಿಯವರೆಗೆ ನೀಡಿರುವ ಎಲ್ಲಾ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸಿ ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಅಮಿತಾ ಪ್ರಸಾದ್
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 295

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಶ್ರೀ ಕೆ. ಸುಬ್ರಮಣ್ಯ ಅಧೀಕ್ಷಕರು ಇವರಿಗೆ ನಿಬಂಧಕರ ಹುದ್ದೆಗೆ ನೀಡಲಾಗಿದ್ದ ಮುಂಬಡ್ತಿಯನ್ನು ಮುಂದೂಡುವ ಬಗ್ಗೆ ಆದೇಶ.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ:18:ಸೇವಾಬ:11 ದಿನಾಂಕ 26-7-2011.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ:129:ಸೇಎಸು:11 ದಿನಾಂಕ 19-9-2011.

3) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಪತ್ರ ಸಂಖ್ಯೆ:ಸಿಬಿಎಸ್:114:ಅಧೀಕ್ಷಕರ ಬಡ್ತಿ:ಇಎಸ್‌ಹೆಚ್:2011-12 ದಿನಾಂಕ 12-11-2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿನ ಅಧೀಕ್ಷಕರುಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ರೂ. 10800-20025ರ ವೇತನ ಶ್ರೇಣಿಯ ನಿಬಂಧಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ. ಸದರಿ ಅಧಿಸೂಚನೆಯ ಕ್ರಮ ಸಂಖ್ಯೆ 15ರಲ್ಲಿ ಶ್ರೀ ಕೆ. ಸುಬ್ರಮಣ್ಯ ಅಧೀಕ್ಷಕರು, ಅಧೀಕ್ಷಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವೃತ್ತ, ಬೆಂಗಳೂರು ಇವರಿಗೆ ನಿಬಂಧಕರ ಹುದ್ದೆಗೆ (ಗ್ರೂಪ್-ಬಿ ಹುದ್ದೆ) ಸ್ಥಾನಪನ್ನ ಬಡ್ತಿ ನೀಡಿ ಮುಂದಿನ ಸ್ಥಳ ನಿಯುಕ್ತಿಗಾಗಿ ಇವರ ಸೇವೆಯನ್ನು ಜಲ ಸಂಪನ್ಮೂಲ ಇಲಾಖೆಯ ವಶಕ್ಕೆ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಅಧಿಸೂಚನೆಯಲ್ಲಿ ಜಲ ಸಂಪನ್ಮೂಲ ಇಲಾಖೆಯು ಸದರಿಯವರಿಗೆ ನಿಬಂಧಕರು, ಮುಖ್ಯ ಇಂಜಿನಿಯರ್‌ರವರ ಕಚೇರಿ, ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತ, ಒ.ಅಂಡ್‌ಎಂ. ವಲಯ ನಾರಾಯಣಪುರ ಇಲ್ಲಿನ ನಿಬಂಧಕರ ಖಾಲಿ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರು ಶ್ರೀ ಕೆ. ಸುಬ್ರಮಣ್ಯ, ಅಧೀಕ್ಷಕರು ಇವರು ವೈದ್ಯಕೀಯ ಕಾರಣದ ಮೇಲೆ ಹಾಗೂ ತಮ್ಮ ಪತ್ನಿಯವರು ಬೆಂಗಳೂರಿನಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಪದೋನ್ನತಿಯನ್ನು ತಾತ್ಕಾಲಿಕ ರದ್ದುಪಡಿಸಿ ಈಗಿರುವ ಸ್ಥಳದಲ್ಲಿಯೇ ಮುಂದುವರಿಸಲು ಕೋರಿರುತ್ತಾರೆಂದು ವರದಿ ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಶ್ರೀ ಕೆ. ಸುಬ್ರಮಣ್ಯ, ಇವರು ವೈದ್ಯಕೀಯ ಕಾರಣದ ಮೇಲೆ ಮತ್ತು ಅವರ ಪತ್ನಿಯವರು ಬೆಂಗಳೂರಿನಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ತಮ್ಮ ಮುಂಬಡ್ತಿಯನ್ನು ನಿರಾಕರಿಸುತ್ತಿರುವುದರಿಂದ ಸದರಿಯವರ ಮನವಿಯನ್ನು ಅಂಗೀಕರಿಸಿ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಯ ನಿಯಮ 4A (1)ರನ್ವಯ ಮುಂಬಡ್ತಿಯನ್ನು ಮುಂದೂಡಲು ಸರ್ಕಾರವು ತೀರ್ಮಾನಿಸಿದೆ ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲೋಇ 18:ಸೇವಾಬ:2011, ಬೆಂಗಳೂರು, ದಿನಾಂಕ: 15-12-2011

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಕೆ. ಸುಬ್ರಮಣ್ಯ, ಇವರು ವೈದ್ಯಕೀಯ ಕಾರಣದ ಮೇಲೆ ಮತ್ತು ಅವರ ಪತ್ನಿಯವರು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಮುಂಬಡ್ತಿಯನ್ನು ನಿರಾಕರಿಸುತ್ತಿರುವುದರಿಂದ ಸದರಿಯವರ ಮನವಿಯನ್ನು ಅಂಗೀಕರಿಸಿ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಯ ನಿಯಮ 4A (1)ರನ್ವಯ ಮುಂಬಡ್ತಿಯನ್ನು ಒಂದು ವರ್ಷ ಕಾಲ ಅಥವಾ ಮುಂದಿನ ಇಲಾಖಾ ಪದೋನ್ನತಿ ಸಮಿತಿ ಸಭೆಯವರೆಗೆ ಇವುಗಳಲ್ಲಿ ಯಾವುದು ನಂತರವೋ ಜರುಗುವುದೋ ಅಲ್ಲಿಯವರೆಗೆ ಮುಂದೂಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಮೋಹನ್‌ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)

ಲೋಕೋಪಯೋಗಿ, ಬಂದರು ಮತ್ತು ಒಳನಾಡು

ಜಲಸಾರಿಗೆ ಇಲಾಖೆ (ಸೇವೆಗಳು-ಬಿ)

ಪಿ.ಆರ್. 296

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮೈಸೂರು ನಗರದ ಮಹಾಯೋಜನೆಯ ಅವಧಿ ವಿಸ್ತರಿಸಲು ಸರ್ಕಾರದ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1) ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ:ಮೈನ ಪ್ರಾ/ನಯೋ/ಮಯೋ/1/2010-11 ದಿನಾಂಕ: 21.07.2011.

2) ಸರ್ಕಾರದ ಆದೇಶ ಸಂ:ನಅಇ:337:ಟಿಟಿಪಿ 96, ದಿನಾಂಕ: 16.05.1997.

3) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆರವರ ಪತ್ರ ಸಂಖ್ಯೆ:ನಗ್ರಾಯೋ/ಉನಿ/ಮಯೋ/83/2011-12 ದಿನಾಂಕ: 18-08-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರು ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯ (ಪರಿಷ್ಕೃತ-2)ನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಸಂಬಂಧ ಯೋಜನಾ ಅವಧಿಯನ್ನು ಮಹಾಯೋಜನೆ ಪರಿಷ್ಕರಣೆ-2 ಜಾರಿಗೆ ಬರುವವರೆಗೂ ವಿಸ್ತರಿಸಲು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಸರ್ಕಾರವು ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ಪರಿಷ್ಕರಣೆ-1)ಗೆ ಅಂತಿಮ ಅನುಮೋದನೆ ನೀಡಿದ್ದು, ಅನುಮೋದಿತ ಮಹಾಯೋಜನೆಯ ಅವಧಿಯು 2011ರವರೆಗೆ ಇರುತ್ತದೆ. ಪ್ರಾಧಿಕಾರವು

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 13(ಡಿ) ರನ್ವಯ ಮಹಾಯೋಜನೆಯನ್ನು 10 ವರ್ಷಗಳಿಗೊಮ್ಮೆ ಪರಿಷ್ಕರಿಸಿ ಸರ್ಕಾರದ ಅನುಮೋದನೆಯನ್ನು ಪಡೆಯಬೇಕಾಗುತ್ತದೆ.

ಮಹಾಯೋಜನೆಯನ್ನು ಪರಿಷ್ಕರಿಸುವ ಕಾರ್ಯವು ಪ್ರಗತಿಯಲ್ಲಿದ್ದು, ತಾತ್ಕಾಲಿಕ ಮಹಾಯೋಜನೆಯನ್ನು ಸಿದ್ಧಪಡಿಸಿ, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಇವರಿಗೆ ದಿನಾಂಕ:- 23.04.2011ರಂದು ಸರ್ಕಾರದ ಅನುಮೋದನೆ ಪಡೆಯುವ ಸಂಬಂಧ ಸಲ್ಲಿಸಲಾಗಿದ್ದು, ಮಹಾಯೋಜನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಪರಿಶೀಲಿಸುತ್ತಿದ್ದು, ನೀಡಲಾಗಿರುವ ಕೆಲವು ಸಲಹೆ/ಸೂಚನೆಗಳನ್ನು ಅಳವಡಿಸಿಕೊಳ್ಳಲು ಕ್ರಮವಹಿಸಲಾಗುತ್ತಿರುವುದಾಗಿ ಪ್ರಾಧಿಕಾರ ಪತ್ರದಲ್ಲಿ ತಿಳಿಸಲಾಗಿದೆ ಹಾಗೂ ಮಹಾಯೋಜನೆಯನ್ನು ಪರಿಷ್ಕರಿಸಿ ಸರ್ಕಾರದ ಅನುಮೋದನೆ ಪಡೆಯಲು ಹೆಚ್ಚಿನ ಸಮಯದ ಅವಶ್ಯಕತೆ ಇರುವುದಾಗಿ ತಿಳಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರು ಪರಿಶೀಲಿಸಿ ಉಲ್ಲೇಖ (3)ರ ಪತ್ರದಲ್ಲಿ ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶಕ್ಕೆ ಈಗಾಗಲೇ ಸರ್ಕಾರದಿಂದ ಅನುಮೋದಿಸಿರುವ ಮಹಾಯೋಜನೆಯ ಅವಧಿಯನ್ನು ಮಹಾಯೋಜನೆ ಪರಿಷ್ಕರಣೆ ಕಾರ್ಯವು ಪೂರ್ಣಗೊಳ್ಳುವವರೆಗೂ ಅಥವಾ 2014ರವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ಸರ್ಕಾರದ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 556 ಮೈಅಪ್ರಾ 2011, ಬೆಂಗಳೂರು, ದಿನಾಂಕ: 30-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ಪರಿಷ್ಕರಿಸಿ ಸರ್ಕಾರದ ಅಂತಿಮ ಅನುಮೋದನೆ ಪಡೆದು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಪ್ರಸ್ತುತ ಜಾರಿಯಲ್ಲಿರುವ ಮಹಾಯೋಜನೆ (ಪರಿಷ್ಕರಣೆ-1)ಯ ಅವಧಿಯನ್ನು ಮಹಾಯೋಜನೆ ಪರಿಷ್ಕರಣೆ ಕಾರ್ಯವು ಪೂರ್ಣಗೊಳ್ಳುವವರೆಗೂ ಅಥವಾ 2012 ರವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಸವರಾಜ್ ಬರದೇಲಿ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ನಗರಾಭಿವೃದ್ಧಿ ಇಲಾಖೆ

ಪಿ.ಆರ್. 297

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ರಾಜ್ಯಮಟ್ಟದಲ್ಲಿ ಲಭ್ಯವಿರುವ ಸಾದಿಲ್ವಾರು ವೆಚ್ಚವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಯೋಇ 10 ಪಿಎಂಎಂ 2011, ದಿನಾಂಕ: 22.06.2011.

2) ಸರ್ಕಾರದ ಆದೇಶ ಸಂಖ್ಯೆ:ಯೋಇ 10 ಪಿಎಂಎಂ 2011, ದಿನಾಂಕ: 15.09.2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ 2011-12ನೇ ಆರ್ಥಿಕ ವರ್ಷದಿಂದ ಜಾರಿಗೆ ಬರುವಂತೆ ಲೆಕ್ಕಶೀರ್ಷಿಕೆ 4575-60-800-0-01-132 (ಯೋಜನೆ) ಅಡಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಒದಗಿಸಲಾಗುವ ಒಟ್ಟು ಅನುದಾನದ ಶೇಕಡ 0.45 ರಷ್ಟನ್ನು ಜಿಲ್ಲಾಮಟ್ಟದಲ್ಲಿ ಮತ್ತು ಶೇಕಡ 0.05 ರಷ್ಟನ್ನು ರಾಜ್ಯ ಮಟ್ಟದಲ್ಲಿ ಯೋಜನೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಗಣಕಯಂತ್ರ ಖರೀದಿ, ಕಚೇರಿ ವೆಚ್ಚ, ಮಾಹಿತಿ ನಿರ್ವಹಣಾ ವ್ಯವಸ್ಥೆಯ ನಿರ್ವಹಣೆ/ಸುಧಾರಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಪ್ರೋಗ್ರಾಮರ್ ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳ ಸಂಭಾವನೆ, ಯೋಜನೆಯನ್ನು ಅನುಷ್ಠಾನಗೊಳಿಸುವ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡಲು ತಗಲುವ ವೆಚ್ಚ ಮತ್ತು ಯೋಜನೆಗೆ ಸಂಬಂಧಿಸಿದ ಇನ್ನಿತರೆ ವೆಚ್ಚಗಳನ್ನು ಭರಿಸಲು ಅನುಮತಿಸಲಾಗಿದೆ. ಅದರಂತೆ ರಾಜ್ಯ ಮಟ್ಟದಲ್ಲಿ ಈ ಯೋಜನೆಯ ಉಸ್ತುವಾರಿಗಾಗಿ ಈ ಯೋಜನೆ ಅಡಿ ಒದಗಿಸಲಾಗಿರುವ ಅನುದಾನದಿಂದ ಶೇಕಡ 0.05 ರಷ್ಟನ್ನು ಉಪಯೋಗಿಸಿಕೊಳ್ಳಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಅನುಮತಿಸಿದೆ. ರಾಜ್ಯಮಟ್ಟದಲ್ಲಿ ಸಾದಿಲ್ವಾರು ವೆಚ್ಚವನ್ನು ಭರಿಸಲು ಲಭ್ಯವಿರುವ ₹15.00 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಯೋಇ 10 ಪಿಎಂಎಂ 2011, ಬೆಂಗಳೂರು, ದಿನಾಂಕ: 08.12.2011

2011-12ನೇ ಸಾಲಿನಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಗಣಕ ಯಂತ್ರ ಖರೀದಿ, ಕಚೇರಿ ವೆಚ್ಚ, ಮಾಹಿತಿ ನಿರ್ವಹಣಾ ವ್ಯವಸ್ಥೆಯ ನಿರ್ವಹಣೆಗಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವ ಡಾಟಾ ಎಂಟ್ರಿ ಆಪರೇಟರ್ಸ್ ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸಂಭಾವನೆ, ಅಧಿಕಾರಿ/ಸಿಬ್ಬಂದಿಗಳ ತರಬೇತಿ ಹಾಗೂ ಇನ್ನಿತರೆ ವೆಚ್ಚಗಳನ್ನು ಭರಿಸಲು ಲೆಕ್ಕ ಶೀರ್ಷಿಕೆ 4575-60-800-0-01-132 (ಯೋಜನೆ) ಅಡಿ ₹15.00 ಲಕ್ಷ (ಹದಿನೈದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಸಂಬಂಧ ಈ ಕೆಳಗೆ ಸಹಿ ಮಾಡಿರುವ ಸರ್ಕಾರದ ಅಧೀನ ಕಾರ್ಯದರ್ಶಿ (1&2), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಹಣ ಸೆಳೆಯುವ, ಬಟವಾಡೆ ಮಾಡುವ ಮತ್ತು ಮೇಲುರುಜು ಮಾಡುವ ಅಧಿಕಾರ ಹೊಂದಿರುತ್ತಾರೆ.

ಈ ಆದೇಶವನ್ನು ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2008, ದಿನಾಂಕ 16.05.2008 ರಲ್ಲಿ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 298

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬಳ್ಳಾರಿ ಜಿಲ್ಲೆ ಮತ್ತು ಶಿರಗುಪ್ಪ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ:ಯೋಇ 309 ಪಿಟಿಪಿ 94, ದಿನಾಂಕ: 07-08-1995.

2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ ಪತ್ರ ಸಂ.ಗ್ರಾಅಪರಾ/ಆಕಾ/178/2011 ದಿನಾಂಕ: 22-09-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ: 07-08-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಬಳ್ಳಾರಿ ಜಿಲ್ಲೆ ಶಿರಗುಪ್ಪ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 105 ಯೋವಿವಿ 2011, ಬೆಂಗಳೂರು, ದಿನಾಂಕ: 13ನೇ ಡಿಸೆಂಬರ್, 2011

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಐದು ಜನರನ್ನು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಬಳ್ಳಾರಿ ಜಿಲ್ಲೆ

ಕ್ರ.ಸಂ.	ಹೆಸರು	ವರ್ಗ
1.	ಶ್ರೀ ವಿರುಪಾಕ್ಷಿರೆಡ್ಡಿ ಬಿನ್ ವೆಂಕಟರೆಡ್ಡಿ ಬಿ.ಎಂ.ಸೂಗೂರು	ಸಾಮಾನ್ಯ
2.	ಶ್ರೀಮತಿ ಈರಮ್ಮ ತಂದೆ ಕರಿಯಪ್ಪ ಚಲ್ಲೆಕೂಡ್ಲೂರು	ಎಸ್.ಸಿ.
3.	ಶ್ರೀ ಮೊಸಳೆ ಹನುಮಂತಪ್ಪ, ಬಿನ್ ದೊಡ್ಡಪ್ಪ ಮೊಸಳೆ ಎಂ.ಸೂಗೂರು	ಬಿ.ಸಿ.ಎಮ್
4.	ಶ್ರೀ ಎಸ್.ಬಿ. ಸಿದ್ದರಾಮನಗೌಡ ಬಿನ್ ದೊಡ್ಡನಗೌಡ ಚನವಾಸಪುರ	ಸಾಮಾನ್ಯ
5.	ಶ್ರೀ ಅಹ್ಮದ್ ಸಾಬ್ ಬಿನ್ ರಜಾಕ್ ಸಾಬ್ ಸಿರಿಗೇರಿ	ಅಲ್ಪ ಸಂಖ್ಯಾತರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 299

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ:ಯೋಇ 309 ಪಿಟಿಪಿ 94, ದಿನಾಂಕ: 07-08-1995.

2) ಸರ್ಕಾರಿ ಆದೇಶ ಸಂಖ್ಯೆ:ಯೋಇ 65 ಯೋವಿವಿ 2009, ದಿನಾಂಕ: 25-09-09.

3) ಮುಖ್ಯಮಂತ್ರಿಯವರ ಕಛೇರಿ ಟಿಪ್ಪಣಿ ಪತ್ರ ಸಂ: CM/PS/F-1744/2009 ದಿನಾಂಕ: 11/11/2009.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ: 07-08-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿನ ಸದಸ್ಯರ ನಾಮ ನಿರ್ದೇಶನವನ್ನು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿಗೆ ಈ ಹಿಂದೆ ನಾಮ ನಿರ್ದೇಶನ ಮಾಡಿ ಹೊರಡಿಸಿದ ಸರ್ಕಾರಿ ಆದೇಶ ಸಂಖ್ಯೆ: ಯೋಇ 65 ಯೋವಿವಿ 2009 ದಿನಾಂಕ 02ನೇ ಜನವರಿ 2009 ರಂದು ಹೊರಡಿಸಿದ ಆದೇಶವನ್ನು ರದ್ದುಪಡಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 65 ಯೋವಿವಿ 2009, ಬೆಂಗಳೂರು, ದಿನಾಂಕ: 29ನೇ ಡಿಸೆಂಬರ್, 2011

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಆರು ಜನರನ್ನು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀ ಚಂದ್ರು ಪಕ್ಕೀರಪ್ಪಾ, ಗಾಳಿ, ಸಾ: ಸಾತೇನಹಳ್ಳಿ, ತಾ: ಹಿರೇಕೆರೂರು	ಹಿಂ.ವ
2	ಶ್ರೀ ಪಾಲಾಕ್ಷಗೌಡ ಹೆಚ್. ಪಾಟೀಲ ಸಾ: ಮೇದೂರು, ತಾ: ಹಿರೇಕೆರೂರು	ಸಾಮಾನ್ಯ
3	ಶ್ರೀ ಶ್ರೀಕಾಂತ ಭೀಮರಾವ್ ಕುಲಕರ್ಣಿ, ಸಾ: ರಟ್ಟಿಹಳ್ಳಿ, ತಾ: ಹಿರೇಕೆರೂರು	ಸಾಮಾನ್ಯ
4	ಶ್ರೀ ಅಶೋಕ ಹನುಮಂತಪ್ಪಾ ಹೆಡಿಯಾಲ, ಸಾ: ಚಪ್ಪರಹಳ್ಳಿ, ತಾ: ಹಿರೇಕೆರೂರು	ಎಸ್.ಟಿ.
5	ಶ್ರೀಮತಿ ಗದಿಗೆವ್ವ ಶಿವಣ್ಣ ಗುತ್ತಲ, ಸಾ: ಮಾಸೂರು, ತಾ: ಹಿರೇಕೆರೂರು	ಮಹಿಳೆ
6	ಶ್ರೀ ಫೈರೋಜ್ ಅಬ್ದುಲ್ ಜಬ್ಬಾರ್ ಸಾಬ್ ಸವಣೂರು, ಸಾ: ಹಿರೇಕೆರೂರು	ಅ.ಸಂ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 300

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ:ಯೋಇ 309 ಪಿಟಿಪಿ 94, ದಿನಾಂಕ: 07–08–1995.

2) ಮಾನ್ಯ ಮುಖ್ಯ ಮಂತ್ರಿಯವರ ಟಿಪ್ಪಣಿ ಪತ್ರ ಸಂ: ಸಿ.ಎಂ/904/ಎನ್‌ಓಎಮ್/2011, ದಿನಾಂಕ: 14.12.2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ: 07–08–1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರ ಆದೇಶದಂತೆ ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 118 ಯೋವಿವಿ 2009, ಬೆಂಗಳೂರು, ದಿನಾಂಕ: 2ನೇ ಜನವರಿ, 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಯೋಇ 118 ಯೋವಿವಿ 2009, ದಿನಾಂಕ: 02.11.2009ರಂದು ಹೊರಡಿಸಿರುವ ಆದೇಶದ ಕ್ರಮ ಸಂಖ್ಯೆ: 2ರ ಶ್ರೀ ರಮೇಶ್ ಪೂಜಾರಿ, ಆರ್.ಆರ್. ಕಾಂಪ್ಲೆಕ್ಸ್, ಬಿ.ಹೆಚ್. ಕೈಮರ, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರ ನಾಮನಿದೇಶನವನ್ನು ರದ್ದುಗೊಳಿಸಿ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಸರ್ಕಾರ ಈ ಆದೇಶವನ್ನು ಹೊರಡಿಸಿದೆ. ಕೆಡಿಪಿ ಸಮಿತಿಗೆ ಶ್ರೀ ರಮೇಶ್ ಪೂಜಾರಿ, ಆರ್.ಆರ್. ಕಾಂಪ್ಲೆಕ್ಸ್, ಬಿ.ಹೆಚ್. ಕೈಮರ್, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರ ಸದಸ್ಯತ್ವವನ್ನು ರದ್ದುಗೊಳಿಸಿ ಸದರಿಯವರ ಬದಲಾಗಿ ಈ ಕೆಳಕಂಡ ಹೆಸರನ್ನು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆ: ನರಸಿಂಹರಾಜಪುರ ತಾಲ್ಲೂಕು:

ಕ್ರ.ಸಂ.	ಈ ಮೊದಲು ಇದ್ದ ಸದಸ್ಯರ ವಿವರ	ನಾಮಕರಣ ಮಾಡಬೇಕಾದ ಸದಸ್ಯರ ವಿವರ	ವರ್ಗ
1	ಶ್ರೀ ರಮೇಶ್ ಪೂಜಾರಿ, ಆರ್.ಆರ್. ಕಾಂಪ್ಲೆಕ್ಸ್, ಬಿ.ಹೆಚ್. ಕೈಮರ, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ	ಶ್ರೀ ಹೆಚ್.ಎಂ. ಆನಂದ್ ಬಿನ್ ಲೇಟ್ ಮಂಜಯ್ಯ, ಹೊರಬೈಲು (ನೆಲಗದ್ದೆ) ಮೂಡಬಾಗಿಲು ಅಂಚೆ, ನರಸಿಂಹರಾಜಪುರ ತಾ: ಚಿಕ್ಕಮಗಳೂರು ಜಿಲ್ಲೆ.	ಹಿಂ.ವರ್ಗ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 301

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ:ಯೋಇ 309 ಪಿಟಿಪಿ 94, ದಿನಾಂಕ: 07-08-1995.

2) ಮಾನ್ಯ ಮುಖ್ಯಮಂತ್ರಿ ರವರ ಪತ್ರ ಸಂ: ಮುಮಂ/369/ಅ.ಕಾ/2011, ದಿನಾಂಕ: 13/12/2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ: 07-08-1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ ಆದ್ದರಿಂದ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 131 ಯೋಏಖ 2010, ಬೆಂಗಳೂರು, ದಿನಾಂಕ: 4ನೇ ಜನವರಿ, 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಆರು ಜನರನ್ನು ತಾಲ್ಲೂಕಿನ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಚಿತ್ರದುರ್ಗ ಜಿಲ್ಲೆ: ಹೊಸದುರ್ಗ ತಾ:

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀ ದಾರಮಾದಪ್ಪ ಬಿನ್ ನಿಂಗಪ್ಪ, ವೆಂಗಳಾಪುರ ಅಂಚೆ, ಶ್ರೀರಾಂಪುರ ಹೋಬಳಿ, ಹೊಸದುರ್ಗ ತಾ:	ಎಸ್.ಟಿ.
2	ಶ್ರೀಮತಿ ಶ್ರೀದೇವಿ ಕೋಂ ರಮೇಶ್, ಶಿವಲಿಂಗಪ್ಪ ಬಡಾವಣೆ, ಹೊಸದುರ್ಗ ಟೌನ್,	ಮಹಿಳೆ
3	ಶ್ರೀ ಹೆಚ್.ಪಿ. ಸುರೇಶ್‌ಬಾಬು ಬಿನ್ ಹೊಂಬಣ್ಣ, ಹೊಸದುರ್ಗ	ಅ.ಸಂ
4	ಶ್ರೀ ಎಸ್. ಶಿವಪ್ರಸಾದ್ ಬಿನ್ ಶಿವರುದ್ರಯ್ಯ, ಜಿ.ಎನ್. ಕೆರೆ, ಹೊಸದುರ್ಗ ತಾ:	ಸಾಮಾನ್ಯ
5	ಶ್ರೀ ಪಿ. ಶಶಿಕುಮಾರ ಬಿನ್ ಪುಟ್ಟಪ್ಪ, ಶಿವನೇಕಟ್ಟೆ, ಹೊಸದುರ್ಗ ತಾಲ್ಲೂಕು	ಹಿಂ.ವರ್ಗ
6	ಶ್ರೀ ಡಿ.ಆರ್. ಚಂದ್ರಪ್ಪ ಬಿನ್ ರಾಮಪ್ಪ, ಹೊಸದುರ್ಗ ಟೌನ್,	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು

ಪಿ.ಆರ್. 302

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಯುವಜನ ಸೇವಾ ಸಚಿವಾಲಯ

ವಿಷಯ : 12ನೇ ಹಣಕಾಸು ಆಯೋಗದ ಅನುದಾನದಲ್ಲಿ ಸೆಂಟರ್ ಫಾರ್ ಪಾಪ್ಯುಲೇಷನ್ ಡೈನಾಮಿಕ್ಸ್ ಸಂಸ್ಥೆ ರವರಿಂದ ಕೈಗೊಳ್ಳಲಾದ ಈಜುಕೊಳ ಮತ್ತು ಕ್ರೀಡಾಂಗಣಗಳ ನಿರ್ಮಾಣ ಯೋಜನೆಯು 2010-11ನೇ ಸಾಲಿನ ಮೌಲ್ಯಮಾಪನ ಕಾರ್ಯಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ದಿನಾಂಕ: 20.12.2010ರ ಯುಸೇಇ 65 ಸಮನ 2010ನೇ ಸಂಖ್ಯೆಯ ಸರ್ಕಾರದ ಆದೇಶ.
2. ದಿನಾಂಕ: 09.02.2011ರ ಯುಸೇಇ 65 ಸಮನ 2010ನೇ ಸಂಖ್ಯೆಯ ಸರ್ಕಾರದ ಆದೇಶ.
3. ದಿನಾಂಕ: 29.04.2011ರ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ನಿರ್ದೇಶಕರ ಡಿವೈಎಸ್‌ಎಸ್/ಟಿಎಫ್‌ಸಿ-2/2010-11ನೇ ಸಂಖ್ಯೆಯ ಪತ್ರ.
4. ದಿನಾಂಕ: 26.09.2011ರ ಯುಸೇಇ 65 ಸಮನ 2010ನೇ ಸಂಖ್ಯೆಯ ಸರ್ಕಾರದ ಆದೇಶ.
5. ದಿನಾಂಕ: 23.08.2011ರ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ನಿರ್ದೇಶಕರ ಡಿವೈಎಸ್‌ಎಸ್/ಟಿಎಫ್‌ಸಿ-2/2011-12ನೇ ಸಂಖ್ಯೆಯ ಪತ್ರ.

ಪ್ರಸ್ತಾವನೆ :

12ನೇ ಹಣಕಾಸು ಆಯೋಗದ ಅನುದಾನದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಈಜುಕೊಳ ಮತ್ತು ಕ್ರೀಡಾಂಗಣ ನಿರ್ಮಾಣಗಳ 2010-11ನೇ ಸಾಲಿನ ಮೌಲ್ಯಮಾಪನ ಕಾರ್ಯವನ್ನು ₹ 4,40,000/-ಗಳ ವೆಚ್ಚದಲ್ಲಿ ಕೈಗೊಳ್ಳಲು ಸೆಂಟರ್ ಫಾರ್ ಪಾಪ್ಯುಲೇಷನ್ ಡೈನಾಮಿಕ್ಸ್, ಕೋರಮಂಗಲ, ಬೆಂಗಳೂರು ಇವರಿಗೆ ವಹಿಸಿ ಮೇಲೆ ಓದಲಾದ (1) ಮತ್ತು (2)ರ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ (3)ರಲ್ಲಿನ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರ ಪತ್ರದ ಪ್ರಕಾರ ಮೇಲ್ಕಂಡ ಮೌಲ್ಯಮಾಪನ ವೆಚ್ಚವನ್ನು 4 ಕಂತುಗಳಲ್ಲಿ ಬಿಡುಗಡೆ ಮಾಡಬೇಕಾಗುತ್ತದೆ (ಮೊದಲನೇ ಕಂತು ಶೇ. 30 ₹ 1,32,000 ಎರಡನೇ ಕಂತು ಶೇ. 20 ₹ 88,000 ಮೂರನೇ ಕಂತು ಶೇ. 30 ₹ 1,32,000 ನಾಲ್ಕನೇ ಕಂತು ಶೇ. 20 ₹ 88,000)

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ಮೇಲೆ ಓದಲಾದ ಉಲ್ಲೇಖ (5)ರ ಪತ್ರದ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ಮೌಲ್ಯಮಾಪನ ಕಾರ್ಯದ ಒಟ್ಟು ಮೊತ್ತವನ್ನು 4 ಕಂತುಗಳಲ್ಲಿ ಸಂಸ್ಥೆಗೆ ಬಿಡುಗಡೆ ಮಾಡಬೇಕಾಗುತ್ತದೆಯೆಂದೂ, ಸಂಸ್ಥೆಯು ಮೌಲ್ಯಮಾಪನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಈಗಾಗಲೇ ಕರಡು ವರದಿಯನ್ನು ಸಲ್ಲಿಸಿದೆಯೆಂದೂ, ಸಂಸ್ಥೆಯೊಂದಿಗೆ ಆಗಿರುವ ಕರಾರಿನ ಪ್ರಕಾರ 3 ಕಂತುಗಳ ಬಾಬ್ತು ಒಟ್ಟು ₹ 3,52,000/ಗಳನ್ನು ಪಾವತಿಸಲು ಆದೇಶ ಹೊರಡಿಸುವಂತೆ ಕೋರಿದ್ದರು.

ಮೇಲೆ ಓದಲಾದ ಉಲ್ಲೇಖ(4)ರ ಆದೇಶದ ಮೂಲಕ ಮೌಲ್ಯಮಾಪನ ಮೊತ್ತದ ಮೊದಲನೇ ಕಂತು ಶೇ. 30 ರಷ್ಟು ಅಂದರೆ ₹ 1,32,000ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರ ಪ್ರಸ್ತಾವನೆಯ ಪ್ರಕಾರ ಈಗ ಎರಡನೇ ಕಂತು ಮತ್ತು ಮೂರನೇ ಕಂತುಗಳನ್ನು (ಎರಡನೇ ಕಂತು ₹ 88,000, ಮೂರನೇ ಕಂತು ₹ 1,32,000) ಒಟ್ಟು ಸೇರಿ ₹ 2,20,000ಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ ಮತ್ತು ಕೊನೆಯ ಕಂತು ₹ 88,000ಗಳನ್ನು ಅಂತಿಮ ವರದಿ ಅಂಗೀಕೃತವಾದ ನಂತರ ಬಿಡುಗಡೆಗೊಳಿಸಬಹುದು.

ಈ ಪ್ರಸ್ತಾವನೆಯಲ್ಲಿನ ವಿವರಣೆಗಳ ಹಿನ್ನೆಲೆಯಲ್ಲಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯುಸೇಇ 65 ಸಮನ 2010, ಬೆಂಗಳೂರು, ದಿನಾಂಕ: 04.01.2012

12ನೇ ಹಣಕಾಸಿನ ಆಯೋಗದ ಅನುದಾನದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಕೈಗೊಳ್ಳಲಾದ ಈಜುಕೊಳ ಮತ್ತು ಕ್ರೀಡಾಂಗಣ ನಿರ್ಮಾಣಗಳ ಕಾರ್ಯದ 2010-11ನೇ ಸಾಲಿನ ಮೌಲ್ಯಮಾಪನ ಕಾರ್ಯವನ್ನು ₹ 4,40,000/-ಗಳ ವೆಚ್ಚದಲ್ಲಿ ಕೈಗೊಳ್ಳಲು ಸೆಂಟರ್ ಫಾರ್ ಪಾಪ್ಯುಲೇಷನ್, ಕೋರಮಂಗಲ, ಬೆಂಗಳೂರು, ಈ ಸಂಸ್ಥೆಗೆ ವಹಿಸಲಾಗಿದ್ದು, ಸಂಸ್ಥೆಯು ಮೌಲ್ಯಮಾಪನ ಕಾರ್ಯದ ಕರಡು ವರದಿಯನ್ನು ಸಲ್ಲಿಸಿರುವುದರಿಂದ ಒಟ್ಟು ಮೊತ್ತದ ಎರಡನೇ ಮತ್ತು ಮೂರನೇ ಕಂತಾಗಿ ಕ್ರಮವಾಗಿ ₹ 88,000 ಮತ್ತು ₹ 1,32,000 ಸೇರಿ ಒಟ್ಟು ₹ 2,20,000ಗಳನ್ನು (ಎರಡು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಈ ಸಂಸ್ಥೆಗೆ ಬಿಡುಗಡೆ ಮಾಡಲು ಈ ಮೂಲಕ ಆದೇಶಿಸಲಾಗಿದೆ.

ಒಟ್ಟು ಮೌಲ್ಯಮಾಪನ ಕಾರ್ಯದ ಉಳಿದ ಕೊನೆಯ ಕಂತು ₹ 88,000ಗಳನ್ನು ಅಂತಿಮ ವರದಿ ಸ್ವೀಕೃತಗೊಂಡ ನಂತರ ಬಿಡುಗಡೆ ಮಾಡಲಾಗುವುದು. ಈ ಸಂಬಂಧ ಮೇಲ್ಕಂಡ ವೆಚ್ಚವನ್ನು 2011-12ನೇ ಸಾಲಿನ ಲೆಕ್ಕಶೀರ್ಷಿಕೆ "4202-03-102-0-03-386 (ಬಂಡವಾಳ ವೆಚ್ಚ ಒಳಾಂಗಣ ಕ್ರೀಡಾಂಗಣಗಳ ನಿರ್ಮಾಣಗಳ)" ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 30.12.2011ರ ಯುಸೇಇ 4272 ಐಎಫ್ಎ 2011ನೇ ಸಂಖ್ಯೆಯ ಟಿಪ್ಪಣಿ ಮೂಲಕ ಈ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಶ್ರೀನಿವಾಸ್
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವಜನ ಸೇವಾ ಇಲಾಖೆ

ಪಿ.ಆರ್. 303

ಪಶುಸಂಗೋಪನೆ ಮತ್ತು ಮೀನುಗಾರಿಕಾ ಸಚಿವಾಲಯ

ವಿಷಯ : ಶ್ರೀ ಮುತ್ತುರಾಜ್ ಆರ್. ಕಂದಗಲ್, ದ್ವಿತೀಯ ದರ್ಜೆ ಸಹಾಯಕ, ಪಶುಆಸ್ಪತ್ರೆ, ಬ್ಯಾಗವಾಟ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸರ್ಕಾರಿ ಸೇವೆಯಿಂದ ವಜಾಗೊಂಡಿರುವ) ಇವರು ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಓದಲಾಗಿದೆ:
(1) ಆದೇಶ ಸಂಖ್ಯೆ: ಜಿಪರಾ/ಸಿಸಿಎ/3456/2006-07, ದಿನಾಂಕ 30-08-2006.
(2) ಶ್ರೀ ಮುತ್ತುರಾಜ್ ಆರ್. ಕಂದಗಲ್, ದ್ವಿತೀಯ ದರ್ಜೆ ಸಹಾಯಕ ಇವರ ವಿರುದ್ಧ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಾನ್ವಿ, ಇಲ್ಲಿ ದಾಖಲಾದ ಅಪರಾಧ ಮೊಕದ್ದಮೆ ಸಂಖ್ಯೆ (C.C.no.) 506/2006, ತೀರ್ಪು ದಿನಾಂಕ: 17-04-2010.
(3) ಕಛೇರಿ ಆದೇಶ ಸಂಖ್ಯೆ:ಅಪಸಂ/ಜಾಗೃತ/ವಿವ-12/2006-2007, ದಿನಾಂಕ, 08-03-2011.
(4) ಶ್ರೀ ಮುತ್ತುರಾಜ್ ಆರ್. ಕಂದಗಲ್ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ: 03-06-2011.

ಪ್ರಸ್ತಾವನೆ :

ಶ್ರೀ ಮುತ್ತುರಾಜ್ ಆರ್. ಕಂದಗಲ್, ದ್ವಿತೀಯ ದರ್ಜೆ ಸಹಾಯಕರು, ಪಶು ಆಸ್ಪತ್ರೆ ಬ್ಯಾಗವಾಟ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರು ದಿನಾಂಕ: 15-08-2006ರಂದು ಸದರಿ ಪಶು ಆಸ್ಪತ್ರೆಯ ಪ್ರಭಾರಿ ಸಹಾಯಕ ನಿರ್ದೇಶಕರಾದ ಡಾ॥ ಶಂಕರ ಗುಳೇದಗುಡ್ಡ ಇವರನ್ನು ಅವಾಚ್ಯ ಹಾಗೂ ಅಶ್ಲೀಲ ಶಬ್ದಗಳಿಂದ ಬೈದು, ಅವರ ಅಂಗಿ ಹಿಡಿದು ಎಳೆದಾಡಿ ರೋಲರ್ ಕಟ್ಟಿಗೆಯಿಂದ ಎಡ ತೊಡೆಗೆ ಆಸ್ಪತ್ರೆಯ ಸಿಬ್ಬಂದಿಯ ಸಮ್ಮುಖದಲ್ಲಿ ಹೊಡೆದು ಜೀವ ಬೆದರಿಕೆ ಹಾಕಿದರೆಂದು ಅವರ ವಿರುದ್ಧ ಮಾನ್ವಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ:160/2006ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ 504, 353, 324 ಮತ್ತು 506ರಡಿ ದೂರು ದಾಖಲಾದ ಪ್ರಯುಕ್ತ ಮಾನ್ವಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು (ಕಾನೂನು ಸುವ್ಯವಸ್ಥೆ) ಆಪಾದಿತ ನೌಕರರನ್ನು ದಸ್ತಗಿರಿ ಮಾಡಿ ದಿನಾಂಕ: 15-08-2006ರಂದು ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್) ದಾಖಲಿಸಿ ಅದೇ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತಾರೆ. ಈ ಸಂಬಂಧ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಜಿಲ್ಲಾ ಪಂಚಾಯತ್, ರಾಯಚೂರು ಇವರು ಶ್ರೀ ಮುತ್ತುರಾಜ್ ಆರ್. ಕಂದಗಲ್ ದಿನಾಂಕ: 15-08-2006ರಿಂದ 17-08-2006 ರವರೆಗೆ 2 ದಿವಸ ಅಂದರೆ 48 ಗಂಟೆಗಳವರೆಗೆ ನ್ಯಾಯಾಂಗ ಬಂಧನದಲ್ಲಿದ್ದರಿಂದ ಹಾಗೂ ಮಾನ್ವಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು (ಕಾನೂನು ಸುವ್ಯವಸ್ಥೆ) ನೌಕರರ ವಿರುದ್ಧ ಅಪರಾಧ ಸಂಖ್ಯೆ 160/2006ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪೊಲೀಸ್ ತನಿಖೆಯನ್ನು ಕೈಗೊಂಡಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(2)(ಎ)ರ ಪ್ರಕಾರ ತನಿಖೆಯನ್ನು ಕಾಯ್ದಿರಿಸಿ, ಶ್ರೀ ಮುತ್ತುರಾಜ್ ಆರ್. ಕಂದಗಲ್, ದ್ವಿತೀಯ ದರ್ಜೆ ಸಹಾಯಕರು ಇವರನ್ನು ನ್ಯಾಯಾಂಗ ಬಂಧನದಲ್ಲಿರಿಸಿದ ದಿನಾಂಕ: 15-08-2006ರಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿರುತ್ತಾರೆ.

ಶ್ರೀ ಮುತ್ತುರಾಜ್ ಆರ್. ಕಂದಗಲ್, ದ್ವಿತೀಯ ದರ್ಜೆ ಸಹಾಯಕರು, ಇವರ ವಿರುದ್ಧ ಮಾನ್ವಿ ಪೊಲೀಸ್ ಠಾಣೆ ಆರಕ್ಷಕ ಉಪ ನಿರೀಕ್ಷಕರು (ಕಾನೂನು ಸುವ್ಯವಸ್ಥೆ) ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾಖಲಿಸಿದ್ದ ಅಪರಾಧ ಮೊಕದ್ದಮೆ ಸಂಖ್ಯೆ: 506/2006ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ: 17-04-2006ರಂದು ನೀಡಿರುವ ಆದೇಶದಲ್ಲಿ ನೌಕರರು ಅಪರಾಧಿ ಎಂದು ಸಾಬೀತಾಗಿ ಬಂದೀಖಾನೆ ಶಿಕ್ಷೆಗೆ ಒಳಗಾದ್ದರಿಂದ ನೌಕರರನ್ನು ಸರ್ಕಾರಿ ಸೇವೆಯಲ್ಲಿ ಮುಂದುವರೆಸುವ ಅಗತ್ಯವಿಲ್ಲವೆಂದು ತೀರ್ಪು ನೀಡಿದೆ.

ಮೇಲೆ ಕ್ರಮ ಸಂಖ್ಯೆ(3)ರಲ್ಲಿ ಓದಲಾದ ಆದೇಶದಲ್ಲಿ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಮಾನ್ವಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶ್ರೀ ಮುತ್ತುರಾಜ್ ಆರ್. ಕಂದಗಲ್, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ಭಾರತೀಯ ದಂಡ ಸಂಹಿತೆ (I.P.C.) 504, 324, 353ರಡಿ ಹಾಗೂ ಕ್ರಿಮಿನಲ್ ಸಂಹಿತೆ (C.R.P.C) 428 ರಲ್ಲಿ ದಂಡನೆ ವಿಧಿಸಿರುವುದರಿಂದ ಮತ್ತು ಸುತ್ತೋಲೆ ಸಂಖ್ಯೆ: ಸಿಆಸುಇ 9 ಸೇಇವಿ 95, ದಿನಾಂಕ: 26-06-1998ರನ್ವಯ ಸರ್ಕಾರಿ ಸೇವೆಯಲ್ಲಿ ಸಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ, ಶ್ರೀ ಮುತ್ತುರಾಜ್ ಆರ್. ಕಂದಗಲ್ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು, 1966ರ ನಿಯಮ 3(i)(ii)(iii)ರನ್ವಯ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8 (viii) ಮತ್ತು 14(i) ಪ್ರಕಾರ ಸರ್ಕಾರಿ ಸೇವೆಯಿಂದ ವಜಾಗೊಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4)ರನ್ವಯ ಶ್ರೀ ಮುತ್ತುರಾಜ್ ಆರ್. ಕಂದಗಲ್ ಇವರು ದಿನಾಂಕ: 08-03-2011ರ ಆದೇಶದಲ್ಲಿ ಸೇವೆಯಿಂದ ವಜಾಗೊಳಿಸಿರುವುದನ್ನು ಪ್ರಶ್ನಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 18ರನ್ವಯ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು ಅದರಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

(i) ಸಿ.ಸಿ.ಸಂಖ್ಯೆ. 506/2006 ಪ್ರಕರಣದಲ್ಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಾನ್ವಿ ದಿನಾಂಕ: 17-04-2010 ರಂದು ನೀಡಿರುವ ಆದೇಶದಲ್ಲಿ ಶಿಕ್ಷೆಗೆ ಗುರಿಪಡಿಸಿದ್ದು ಸದರಿ ಆದೇಶದ ವಿರುದ್ಧ ಪ್ರಧಾನ ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇಲ್ಲಿ ಕ್ರಿಮಿನಲ್ ಅಪೀಲು ಸಂಖ್ಯೆ: 23/2006 ಸಲ್ಲಿಸಿದ್ದು ಈ ಸಂಬಂಧ ಮಾನ್ಯ ನ್ಯಾಯಾಲಯು ದಿನಾಂಕ: 10-05-2010 ರಂದು ನೀಡಿರುವ ಆದೇಶದಲ್ಲಿ ದಂಡನೆಯನ್ನು (Sentence) ಒಂದು ವರ್ಷದ ಅವಧಿಗೆ ತಡೆಹಿಡಿದಿರುತ್ತದೆ.

(ii) ದಿನಾಂಕ: 08-03-2011ರ ಆದೇಶದಲ್ಲಿ ಸೇವೆಯಿಂದ ವಜಾಗೊಳಿಸಿರುವುದು ಕಾನೂನುಬಾಹಿರವಾಗಿರುತ್ತದೆ.

(iii) ತಮ್ಮ ಹಾಗೂ ಮಾನ್ವಿ ಪಶುಆಸ್ಪತ್ರೆಯ ಪ್ರಭಾರಿ ಸಹಾಯಕ ನಿರ್ದೇಶಕರಾದ ಡಾ॥ ಶಂಕರ ಗುಳೇದಗುಡ್ಡ ನಡುವೆ ವೈಯಕ್ತಿಕ ವೈಮನಸ್ಯ ಇರುತ್ತದೆ.

(iv) ದಿನಾಂಕ: 08-03-2011ರ ಕಛೇರಿ ಆದೇಶವು ವಿವರವಾದ ಆದೇಶವಾಗಿರುವುದಿಲ್ಲ.

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14(I)ರಲ್ಲಿ ಒಬ್ಬ ಸರ್ಕಾರಿ ನೌಕರನು ಕ್ರಿಮಿನಲ್ ನಡತೆಗಾಗಿ ದೋಷಾರೋಪಣೆಗಾಗಿ ಶಿಕ್ಷೆಗೆ ಒಳಪಟ್ಟಾಗ ಸದರಿ ನಿಯಮ 11 ಮತ್ತು 12ರಲ್ಲಿ ಏನೇ ಒಳಗೊಂಡಿದ್ದರೂ ಸಹ ಅಂತಹ ಸರ್ಕಾರಿ ನೌಕರನ ಮೇಲೆ ಇಲಾಖಾ ವಿಚಾರಣೆ ಮಾಡದೇ ಸರ್ಕಾರಿ ಸೇವೆಯಿಂದ ವಜಾಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಈ ರೀತಿ ಪ್ರಕರಣದಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ ಸುತ್ತೋಲೆ ಸಂಖ್ಯೆ: ಡಿಪಿಎಆರ್ 9 ಎಸ್‌ಡಿಇ 95 ದಿನಾಂಕ: 26-06-1996 ಮತ್ತು ಡಿಪಿಎಆರ್ 8 ಎಸ್‌ಡಿಇ 2000(ಇ), ದಿನಾಂಕ: 29-08-2000ರಲ್ಲಿ ಸೂಚನೆಗಳನ್ನು ನೀಡಿದೆ.

ಶ್ರೀ ಮುತ್ತುರಾಜ್ ಆರ್. ಕಂದಗಲ್ ಇವರು ವಜಾ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯನ್ನು ಸರ್ಕಾರ ಸಮಗ್ರವಾಗಿ ಪರಿಶೀಲಿಸಿದೆ. ಅಪೀಲುದಾರರು ಅಪರಾಧ ಪ್ರಕರಣ ಸಂಖ್ಯೆ C.C.No. 506/2006ರಲ್ಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಾನ್ವಿ ಅವರನ್ನು ದಂಡನೆಗೆ ಗುರಿಪಡಿಸಿದ್ದು ಸದರಿ ದಂಡನಾದೇಶದ ವಿರುದ್ಧ ಪ್ರಧಾನ ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇಲ್ಲಿ ಕ್ರಿಮಿನಲ್ ಅಪೀಲು ಸಂಖ್ಯೆ: 23/2010ನ್ನು ಸಲ್ಲಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ: 17-05-2010ರಂದು ನೀಡಿರುವ ಆದೇಶದಲ್ಲಿ ನ್ಯಾಯಾಲಯವು ಈ ಕೆಳಕಂಡಂತೆ ತಿಳಿಸಿದೆ.

> "that the impugned order on sentence stands suspended for period of one year or till disposal of this appeal..................."

ಶ್ರೀ ಮುತ್ತುರಾಜ್ ಆರ್. ಕಂದಗಲ್ ಇವರು ಮೇಲ್ಮನವಿ ದಾಖಲಿಸಿದ್ದ ಪ್ರಧಾನ ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇಲ್ಲಿ ಕ್ರಿಮಿನಲ್ ಅಪೀಲು ಸಂಖ್ಯೆ: 23/2010 ಇನ್ನೂ ನ್ಯಾಯಾಲಯದಲ್ಲಿ ಬಾಕಿ ಇದೆ. ಅಪೀಲುದಾರರನ್ನು ಅಧೀನ ನ್ಯಾಯಾಲಯ (ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ) ಶಿಕ್ಷೆಗೆ ಗುರಿಪಡಿಸಿದ್ದನ್ನು ಮೇಲಿನ ನ್ಯಾಯಾಲಯ ರದ್ದುಪಡಿಸಿರುವುದಿಲ್ಲ. ಕೇವಲ ದಂಡನಾದೇಶ ನಿಲಂಬಲನೆಯಲ್ಲಿಟ್ಟಿದೆ. ಆದ್ದರಿಂದ ಅಪೀಲುದಾರರು ತಮ್ಮನ್ನು ಎಲ್ಲಾ ಆರೋಪಗಳಿಂದ ನ್ಯಾಯಾಲಯ ಮುಕ್ತರನ್ನಾಗಿಸಿದೆ ಎನ್ನುವುದು ಸಮರ್ಪಕವಾಗಿರುವುದಿಲ್ಲ ಆದ್ದರಿಂದ, ಅಪೀಲುದಾರರ ವಾದದಲ್ಲಿ (Contention) ಹುರುಳಿರುವುದಿಲ್ಲ.

ನೇಮಕಾತಿ ಹಾಗೂ ಶಿಸ್ತು ಪ್ರಾಧಿಕಾರವಾದ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಅಪೀಲುದಾರರನ್ನು (ಶ್ರೀ ಮುತ್ತುರಾಜ್ ಆರ್. ಕಂದಗಲ್) ದಿನಾಂಕ: 08-03-2011 ರಂದು ಸೇವೆಯಿಂದ ವಜಾ ಮಾಡಿರುವ ದಂಡನಾದೇಶ ಕರ್ನಾಟಕ ನಾಗರೀಕ ಸೇವಾ ನಿಯಮಗಳು, ನಿಯಮ 14(1)ರ ಪ್ರಕಾರ ಇದೆ ಮತತು ಸುತ್ತೋಲೆ ಸಂಖ್ಯೆ: ಡಿಪಿಎಆರ್ 9 ಎಸ್‌ಡಿಇ 95, ದಿನಾಂಕ: 26-06-1996 ಹಾಗೂ ಡಿಪಿಎಆರ್ 8 ಎಸ್‌ಡಿಇ 2000-I ದಿನಾಂಕ: 29-08-2000 ಗಳನ್ವಯ ಇರುತ್ತದೆ. ಆದ್ದರಿಂದ ಅಪೀಲುದಾರರ ವಾದದಲ್ಲಿ ಹುರುಳಿರುವುದಿಲ್ಲ.

ಅಪೀಲುದಾರರಿಗೆ ಮಾನ್ವಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಭಾರತೀಯ ದಂಡ ಸಂಹಿತೆ I.P.C 504, 324, 353ರಡಿ ಹಾಗೂ ಕ್ರಿಮಿನಲ್ ಸಂಹಿತೆ C.R.P.C. 428ರಲ್ಲಿ ದಂಡನೆ ವಿಧಿಸಿದ್ದು, ಅದನ್ನು ಅಪೀಲುದಾರರು ಅನುಭವಿಸಿರುತ್ತಾರೆ ಈ ರೀತಿ ಪ್ರಕರಣಗಳಲ್ಲಿ ವಿವರವಾದ ಆದೇಶ ಹೊರಡಿಸುವ ಅಗತ್ಯವಿರುವುದಿಲ್ಲ. ಅಪೀಲುದಾರರಿಗೆ ಮಾನ್ವಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶಿಕ್ಷೆ ವಿಧಿಸಿದ್ದು ಅದನ್ನು ರಾಯಚೂರಿನ ಪ್ರಧಾನ ಸೆಷನ್ಸ್ ನ್ಯಾಯಾಲಯ ತಡೆಹಿಡಿದಿದ್ದು ಸದರಿ ಪ್ರಕರಣ ಇನ್ನೂ ಬಾಕಿ ಇರುವುದರಿಂದ ಅಪೀಲುದಾರರು ಆರೋಪದಿಂದ ಸಂಪೂರ್ಣ ಮುಕ್ತರಾಗಿಲ್ಲ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವು

ಶ್ರೀ ಮುತ್ತುರಾಜ್ ಆರ್. ಕಂದಗಲ್ ಇವರನ್ನು ಸೇವೆಯಿಂದ ವಜಾಗೊಳಿಸಿರುವ ಆದೇಶ ಸ್ಥಿರೀಕರಿಸಲು ಮತ್ತು ಅವರು ಸಲ್ಲಿಸಿರುವ ಮೇಲ್ಮನವಿಯನ್ನು ತಿರಸ್ಕರಿಸಲು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 124 ಪಅವಿ 2011, ಬೆಂಗಳೂರು, ದಿನಾಂಕ: 30ನೇ ಡಿಸೆಂಬರ್ 2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಕಛೇರಿ ಆದೇಶ ಸಂಖ್ಯೆ: ಆಪಸಂ/ಜಾಗೃತ/ವಿವ-12/2006-2007, ದಿನಾಂಕ: 08-03-2011ರಲ್ಲಿ ಶ್ರೀ ಮುತ್ತುರಾಜ್ ಆರ್. ಕಂದಗಲ್, ದ್ವಿತೀಯ ದರ್ಜೆ ಸಹಾಯಕರು, ಪಶು ಆಸ್ಪತ್ರೆ, ಬ್ಯಾಗವಾಟ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರನ್ನು ಸೇವೆಯಿಂದ ವಜಾ ಮಾಡಿರುವ ಆದೇಶವನ್ನು ಸ್ಥಿರೀಕರಿಸಿ ಅದನ್ನು ಎತ್ತಿಹಿಡಿದಿರುವುದಲ್ಲದೆ ಸದರಿ ವಜಾ ಆದೇಶವನ್ನು ಪ್ರಶ್ನಿಸಿ ಶ್ರೀ ಮುತ್ತುರಾಜ್ ಆರ್. ಕಂದಗಲ್‌ರವರು ದಿನಾಂಕ: 03-06-2011ರಂದು ಸರ್ಕಾರಕ್ಕೆ ಸಲ್ಲಿಸಿದ್ದ (Appeal) ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಪಿ. ನಾಗರಾಜ

ಪೀಠಾಧಿಕಾರಿ-2

ಪಿ.ಆರ್. 304 ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ)

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಹಾವೇರಿ ತಾಲ್ಲೂಕ ಎಕ್ಕುಂಬಿ – ಮೊಳಕಾಲ್ಮೂರ ರೈಲು ಮಾರ್ಗದಲ್ಲಿನ ಎಲ್‌ಸಿ ಸಂಖ್ಯೆ: 237ರ ಬದಲಾಗಿ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಲೋಇ 30 ಸಿಬಿಆರ್ 2010 ದಿನಾಂಕ: 04-08-2010.
2) ಸರ್ಕಾರದ ಆದೇಶ ಸಂಖ್ಯೆ: ಲೋಇ 222 ಸಿಎನ್‌ಹೆಚ್ 2010 ದಿನಾಂಕ: 16-11-2010.
3) ಸರ್ಕಾರದ ಆದೇಶ ಸಂಖ್ಯೆ: ಮೂಅಇ 122 ರಾರಾಹೆ 2009, ಬೆಂಗಳೂರು, ದಿನಾಂಕ: 16-07-2011.
4) ಸರ್ಕಾರದ ಆದೇಶ ಸಂಖ್ಯೆ: ಮೂಅಇ 122 ರಾರಾಹೆ 2009, ಬೆಂಗಳೂರು, ದಿನಾಂಕ: 30-08-2011.
5) ಸರ್ಕಾರದ ಪತ್ರ ಸಂಖ್ಯೆ: ಮೂಅಇ 112 ರಾರಾಹೆ 2009, ಬೆಂಗಳೂರು, ದಿನಾಂಕ: 23-09-2011.
6) ಪತ್ರ ಸಂ: ಕಾನಿಇಂ/ ಲೋಇಹಾ/ಲೋಇ/ ಭೂಸ್ವಾ/ ಎಬಿ-4/ 2011-12/ 2313 ದಿನಾಂಕ : 21-09-2011 ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಹಾವೇರಿ ಇವರಿಂದ.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ. (1)ರ ಆದೇಶದಲ್ಲಿ ಹಾವೇರಿ ತಾಲ್ಲೂಕ ಎಕ್ಕುಂಬಿ -- ಮೊಳಕಾಲ್ಮೂರ ರೈಲು ಮಾರ್ಗದಲ್ಲಿ ಬರುವ ಎಲ್‌ಸಿ ಸಂಖ್ಯೆ: – 237 ರ ಬದಲಾಗಿ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಮೆ. ರೈಟ್ಸ್ ಸಂಸ್ಥೆಯು ತಯಾರಿಸಿರುವ ರೂ. 23.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ ರೇಲ್ವೆ ಮಂತ್ರಾಲಯ ಶೇಕಡ 50: 50 ರಷ್ಟು ವೆಚ್ಚವನ್ನು ಭರಿಸುವ ಷರತ್ತಿಗೊಳಪಟ್ಟು ಲೋಕೋಪಯೋಗಿ ಇಲಾಖೆಯು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

2. ಮೇಲೆ ಓದಲಾದ ಕ್ರ, ಸಂ. (2)ರ ಆದೇಶದಲ್ಲಿ ಲೋಕೋಪಯೋಗಿ ಇಲಾಖೆಯು ಕಾಮಗಾರಿಯನ್ನು ರೂ. 22.01 ಕೋಟಿಗಳಿಗೆ ಗುತ್ತಿಗೆಯನ್ನು ಗುತ್ತಿಗೆದಾರರಾದ ಶ್ರೀ ರಾಜಣ್ಣ ಶಿವಕುಮಾರ್, ಇವರಿಗೆ ವಹಿಸಿದೆ.

3. ಮೇಲೆ ಓದಲಾದ ಕ್ರಸಂ. 3 ಮತ್ತು 4 ರ ಸರ್ಕಾರಿ ಆದೇಶಗಳಲ್ಲಿ ಕ್ರಮವಾಗಿ ರೂ. 500.00 ಮತ್ತು 300.00 ಲಕ್ಷಗಳನ್ನು ಒಟ್ಟು ರೂ. 800.00 ಲಕ್ಷಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಹಾವೇರಿ ಇವರಿಗೆ ಬಿಡುಗಡೆ ಮಾಡಲಾಗಿದೆ.

4. ಮೇಲೆ ಓದಲಾದ ಕ್ರಸಂ. (5)ರ ಸರ್ಕಾರದ ಪತ್ರದಲ್ಲಿ ಮುಖ್ಯ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಸಂಪರ್ಕ ಮತ್ತು ಕಟ್ಟಡ (ಉ), ಧಾರವಾಡ ಇವರಿಗೆ ಬರೆದಿರುವ ಪತ್ರದಲ್ಲಿ ಎಲ್.ಸಿ. ಸಂ. 237 ರ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣಕ್ಕೆ ಬಿಡುಗಡೆಗೊಳಿಸಿರುವ ಅನುದಾನದಲ್ಲಿ ಯಾವ ಯಾವ ಕಾಮಗಾರಿಗೆ ಎಷ್ಟು ಮೊತ್ತ ವೆಚ್ಚ ಮಾಡಿರುವ ವಿವರಗಳು ಹಾಗೂ ಕಾಮಗಾರಿಯು ಭೌತಿಕ ಪ್ರಗತಿಯ ಪೂರ್ಣ ವಿವರಗಳನ್ನು ಕಳುಹಿಸುವಂತೆ ಕೋರಲಾಗಿತ್ತು. ಆದರೆ ಮುಖ್ಯ ಅಭಿಯಂತರರು, ಲೋಕೋಪಯೋಗಿ ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಸಂಪರ್ಕ ಮತ್ತು ಕಟ್ಟಡ (ಉ), ಧಾರವಾಡ ಇವರಿಂದ ಮಾಹಿತಿ ಸ್ವೀಕೃತವಾಗಿಲ್ಲ.

5. ಮೇಲೆ ಓದಲಾದ ಕ್ರಸಂ. (6)ರ ಪತ್ರದಲ್ಲಿ ಕಾರ್ಯನಿರ್ವಾಹಕ, ಇಂಜನಿಯರ್, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಹಾವೇರಿ, ಇವರು ದಿನಾಂಕ: 16-07-2011ರ ಸರ್ಕಾರದ ಆದೇಶದಲ್ಲಿ ಬಿಡುಗಡೆ ಮಾಡಿದ ರೂ. 300.00 ಲಕ್ಷಗಳ ಅನುದಾನದಲ್ಲಿ ಭೂಸ್ವಾಧೀನ ವೆಚ್ಚಕ್ಕೆ 108.10 ಲಕ್ಷ ಹಾಗೂ ಕಾಮಗಾರಿ ವೆಚ್ಚ ರೂ. 191.74 ಲಕ್ಷಗಳು ಮತ್ತು ಜಾಹೀರಾತು ವೆಚ್ಚ ರೂ. 0.16 ಲಕ್ಷಗಳು ಖರ್ಚು ಮಾಡಲಾಗಿದೆಯೆಂದು ಮತ್ತು ಕಾಮಗಾರಿಯು ಪ್ರಗತಿಯಲ್ಲಿದ್ದು ವಿದ್ಯುತ್, ಒಳಚರಂಡಿ, ಮಾರ್ಗ ಬದಲಾವಣೆ ಮತ್ತು ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿಸುವ ಸಲುವಾಗಿ ಒಟ್ಟು 400.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

6. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 122 ರಾರಾಹೆ 2009, ಬೆಂಗಳೂರು, ದಿನಾಂಕ 15-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ತಾಲ್ಲೂಕ ಎಕ್ಕುಂಬಿ-ಮೊಳಕಾಲ್ಮೂರ ರೈಲು ಮಾರ್ಗದಲ್ಲಿ ಬರುವ ಎಲ್ ಸಂಖ್ಯೆ: 237ರ ಬದಲಾಗಿ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಗೆ ರಾಜ್ಯ ಸರ್ಕಾರದ ಪಾಲಿನ ಮೊತ್ತದ ಶೇಕಡ 50ರಷ ಮೊತ್ತವಲ್ಲಿ ರೂ. 77.20 ಲಕ್ಷಗಳನ್ನು (ಎಪ್ಪತ್ತೇಳು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) 2011-12 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿ "5465-01-190-3-04- (ಯೋಜನೆ)-211-ಕೆ-ರೈಡ್ ಬಂಡವಾಳ" ಇದರ ಅಡಿಯಲ್ಲಿ ರಸ್ತೆ ಮೇಲುಸೇತುವೆ/ಕೆಳಸೇತುವೆಗಳ ನಿರ್ಮಾಣ ಒದಗಿಸಿರುವ ರೂ. 21.49 ಕೋಟಿಗಳಿಂದ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ ಹಾವೇರಿ ವಿಭಾಗ, ಹಾವೇರಿ ಇವರಿಗೆ ಬಿಡುಗಡೆ ಮಾಡಿದೆ.

2. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ ಹಾವೇರಿ ವಿಭಾಗ, ಇವರು ಪೇಯಿಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇವರಿಂದ ಪಡೆಯಲು ಅನುಮತಿಸಿದೆ.

3. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ಹಾವೇರಿ ವಿಭಾಗ ಹಾವೇರಿ ಇವರು ಕಾಮಗಾರಿಯ ಭೌತಿಕ ಪ್ರಗತಿಯ ವಿವರಗಳು/ಅನುದಾನದ ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. ಈ ಆದೇಶವನ್ನು ಸಂಖ್ಯೆ: FD 1595 EXP. 1/2011 ದಿನಾಂಕ : 05-12-2011 ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 305

HEALTH AND FAMILY WELFARE SECRETARIAT

Sub : Procurement of MS Office standard 2010 and antivirus Software-reg.

Read : Govt., Order No. HFW/KHSDRP/Comp. to PHCS & CHCs/17/09-10, 07-10-2011.

2. Proceedings of the 27th meeting of the Programme Steering Committee dt: 09-11-2011.

3. Letter of Wipro dated : 16-09-2011.

Preamble:

In the Government Order read at (1), above sanction was accorded for procurement of 1133 Nos. of Desktops, Printers and Ups to PHCs and CHCs at a total cost of Rs. 4,17,45,384-00 from M/s Wipro Infotech, Bangalore. For the computers so procured, it is proposed to supply MS Office and antivirus.

Therefore, an IFB was issued under NCB on 17-06-2011 for the procurement of MS Office & Antivirus software, Bids received for antivirus were evaluated and during the evaluation the inspection team who visited the factory of M/s Wipro Ltd., Kotdwar-Uttarkand has reported that the Antivirus which was preloaded in the desktops has one year validity. Hence, it was recommended to reject the bids received and drop the procurement of Antivirus.

The bids received for the procurement of MS Office Standard 2010 Software was evaluated. M/s Wipro Infotech, Bangalore had quoted Rs. 10,106-00 as unit price and later offered a discount and finally agreed to supply the goods at Rs. 9,656-00 per unit price.

The Secretary, Health and family Welfare Department and Chairman, Programme Steering Committee has approved the proposal on file subject to the ratification by the PSC. The Subject was placed before the steering committee (PSC) meeting held on 09-11-2011. After detail discussion the committee ratified the action taken on procurement of MS Office Standard 2010.

Hence, the following Order.

Government Order No. HFW/KHSDRP/MS Office & NA/26/10-11, Bangalore, dated 31-12-2011

Under the circumstences mentioned in the preamble, Government are pleased to accord sanction for Procurement of MS Office Standard 2010, at a total cost of Rs. 1,09.40.248-00 (Rupees one crore nine lakhs forty thousand two hundred and fortyeight only) from Ms/ Wipro Infotech, Bangalore.

By Order and in the name of the Governor of Karnataka
K.N. Ramesh
Deputy Secretary to Govt (I/c)
KHSDRP
Health & Famliy Welfare Department

P.R. 306

HEALTH AND FAMILY WELFARE SECRETARIAT

, **Sub :** Leave and TA/DA allowance to KHSDRP consultants –reg.

Read : 1) Proceedings of the 26th meeting of the Programme Steering Committee dt: 22-06-2011.

2. Proceedings of the 27th meeting of the Programme Steering Committee dt: 09-11-2011.

Preamble:

The leave, TA/DA allowance are not uniform for the consultants appointed under the Karnataka Health System Development and Reform Project. Some of the consultants are drawing travel allowances at the rate applicable to that of a group B gazetted officer. The Terms of Reference (ToRs) of the consultants appointed under the Project are not uniform in respect of the Leave/allowance and admissibility of TA/DA. Many ToRs are silent on the admissible/eligibility of the claim. There is no mention of even a single day casual leave for the consultants.

It is intended to make a uniform policy regarding the admissibility of leave/allowances. The Programme Steering Committee has deliberated about this issue in its 26th meeting, and has approved the proposal made by the Project Administrator.

Hence, the following order.

Government Order No. HFW (PR) 17 WBA 2011, Bangalore, dated 3-1-2012

Under the circumstences mentioned in the preamble, one Casual Leave for every completed month of service and medical leave as pwr KCSRs has been sanctioned to all the consultants working under the Karnataka Health System Development and Reform Project.

The TA/DA admissible for the consultants are as follows:

a) Consultants with consolidated remuneration of Rs. 25,000-00 per month or more	Rates as applicable to that of a Category-I officer of State Government as per KCSR.
b) Consultants with consolidated remuneration of less than Rs.25,000-00 per month	Rates as applicable to that of a Category-II officer of State Government as per KCSR.

This Government Order, being issued under the KHSDRP is valid only during the Project period.

By Order and in the name of the Governor of Karnataka

K.N. Ramesh

Deputy Secretary to Govt. (I/c)

KHSDRP

Health & Famliy Welfare Department

P.R. 307

TRANSPORT SECRETARIAT

Corrigendum

No. SAREE 103 SAEPA 2011, Bangalore, Dated : 28-12-2011

In Government order No. Sarie 103 Saepa 2011, dated : 20-12-2011 (Unique No. 118/08) at page 7 in the operative portion of the Government order, in Para (1)(i), the words " for payment of the amount" shall be and shall always be read as " for direct collection by the bidder of the amount".

By Order and in the name of the Governor of Karnataka

Ramachandra

Under Secretary to Government,

Transport Department

P.R. 308

COMMERCE AND INDUSTRIES SECRETARIAT

CORRIGENDUM

No. CI/280/SPI/2011, Bangalore dated 4th January 2012

Sub : Approval to the Project Proposal of M/s. Minera Steel and Power Pvt. Ltd., Bellary for enhancement of power generation capacity from 15 MW to 35 MW at Yerabanahalli Village, Sandur Taluk, Bellary District.

Read :
1. Govt. Order No. CI 280 SPI 2011, dated : 28-12-2011.
2. Govt. Order dated : 13-05-2008.
3. Govt. Order dated : 12-09-2011.
4. Proceedings of the 26th State High Level Clearance Committee (SHLCC) Meeting held on 09-11-2011.

With reference to the above subject, on page 2 of the Government Order cited at (1) above, under "Infrastructure Facilities", the words.

"4. As per applicable Tourism Policy of the State" shall be read as under:-

4. " As per applicable Industrial Policy of the State".

By Order and in the name of the Governor of Karnataka,

Shivashankar Naik. L

Desk Officer (Technical Cell) I/c

Commerce & Industries Department

P.R.310

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ವಿ.ಪಿ. ಇಕ್ಕೇರಿ ಐ.ಎ.ಎಸ್. ರವರ ಕಡ್ಡಾಯ ನಿರೀಕ್ಷಣಾ ಅವಧಿಯನ್ನು ಸಕ್ರಮಗೊಳಿಸುವ ಕುರಿತು.

ಓದಲಾಗಿದೆ : 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 498 ಎಸ್ಐಎಸ್ 2011. ದಿನಾಂಕ: 30–09–2011

2. ಶ್ರೀ ವಿ.ಪಿ. ಇಕ್ಕೇರಿ, ಐ.ಎ.ಎಸ್. ರವರ ಪತ್ರ ಸಂಖ್ಯೆ: ಕಕೊಅಮಃಆಡಳಿ:7:2011–12/465 ದಿನಾಂಕ: **17–11–2011.**

ಪ್ರಸ್ತಾವನೆ :

ಶ್ರೀ ವಿ.ಪಿ. ಇಕ್ಕೇರಿ, ಐ.ಎ.ಎಸ್. ಇವರಿಗೆ ನಾನ್-ಐಎಎಸ್‌ನಿಂದ ಭಾರತೀಯ ಆಡಳಿತ ಸೇವಾ ವೃಂದಕ್ಕೆ ಬಡ್ತಿ ನೀಡಿದ್ದರ ಮೇರೆಗೆ ಅವರು ಕಾರ್ಯ ನಿರ್ವಹಿಸುತ್ತಿದ್ದ ಜಂಟಿ ಆಯುಕ್ತರು (ಪಶ್ಚಿಮ ವಲಯ) ಬಿಬಿಎಂಪಿ ಹುದ್ದೆಯ ಕಾರ್ಯಭಾರವನ್ನು ದಿನಾಂಕ: 19–09–2011ರಂದು ವಹಿಸಿಕೊಟ್ಟು ದಿನಾಂಕ: 20–09–2011 ರಂದು ಪೂರ್ವಾಹ್ನ ಸಿ.ಆ.ಸು. ಇಲಾಖೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ನೇಮಕಾತಿ ನಿರೀಕ್ಷಣೆಯಲ್ಲಿದ್ದರು. ತದ ನಂತರ ಅವರನ್ನು ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 30–09–2011 ಅಧಿಸೂಚನೆಯಲ್ಲಿ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹುದ್ದೆಗೆ ನೇಮಿಸಿದ್ದು, ಈ ಆದೇಶದ ಮೇರೆಗೆ ದಿನಾಂಕ: 12–10–2011ರ ವಸತಿ ಇಲಾಖೆಯು ಹೊರಡಿಸಿದ ಮರುನೇಮಕಾತಿ ಆದೇಶದನ್ವಯ ಶ್ರೀ ವಿ.ಪಿ. ಇಕ್ಕೇರಿ, ಐ.ಎ.ಎಸ್., ಇವರು ದಿನಾಂಕ: 13–10–2011ರಂದು (ಪೂರ್ವಾಹ್ನ) ಸದರಿ ಹುದ್ದೆಯ ಕಾರ್ಯಭಾರ ವಹಿಸಿಕೊಂಡಿರುತ್ತಾರೆ. ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ: 17–11–2011ರ ಪತ್ರದಲ್ಲಿ ಶ್ರೀ ವಿ.ಪಿ. ಇಕ್ಕೇರಿ ಐ.ಎ.ಎಸ್. ರವರು ದಿನಾಂಕ: 20–09–2011 ರಿಂದ 12–10–2011 ರವರೆಗೆ ನೇಮಕಾತಿ ನಿರೀಕ್ಷಣೆಯಲ್ಲಿ ಕಳೆದ ಅವಧಿಯನ್ನು ಸಕ್ರಮಗೊಳಿಸುವ ನಿಟ್ಟಿನಲ್ಲಿ ಸೂಕ್ತ ಆದೇಶ ಹೊರಡಿಸಲು ಕೋರಿದ್ದಾರೆ. ಸರ್ಕಾರವು ಪ್ರಕರಣವನ್ನು ಪರಿಶೀಲಿಸಿದೆ. ಆದುದರಿಂದ ಈ ಕೆಳಕಂಡ ಆದೇಶ:

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 199 ಎಸ್ಐಎಸ್ 2011, ಬೆಂಗಳೂರು, ದಿನಾಂಕ : 07–01–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ವಿ.ಪಿ. ಇಕ್ಕೇರಿ ಐ.ಎ.ಎಸ್. ಇವರು ದಿನಾಂಕ: 20–09–2011ರಿಂದ 12–10–2011 ರವರೆಗಿನ ಕಳೆದ ಅವಧಿಯನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳ ನಿಯಮ 8(15)(ಎಫ್)ರ ಮೇರೆಗೆ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/1/ಟಿಎಫ್‌ಪಿ/96, ದಿನಾಂಕ: 10–07–1996ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾದ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಶ್ರೀನಿವಾಸಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–1)

ಪಿ.ಆರ್. 312

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ತಿದ್ದುಪಡಿ

ಸಂಖ್ಯೆ ಆನಾಸ/67 ಡಿಆರ್ಎ 2011 ಬೆಂಗಳೂರು ದಿನಾಂಕ: 29–12–2011

ವಿಷಯ : ರಾಜ್ಯದ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವಿತರಿಸುವ ಚಿಲ್ಲರೆ ವರ್ತಕರಿಗೆ ಗೋದಿಯ ಚಿಲ್ಲರೆ ಲಾಭಾಂಶವನ್ನು ಹೆಚ್ಚಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಆನಾಸ 67 ಡಿಆರ್ಎ 2011, ಬೆಂಗಳೂರು, 9ನೇ ಡಿಸೆಂಬರ್ 2011 ರಲ್ಲಿನ ಆದೇಶ ಭಾಗದ ಒಂದನೇ ಕಂಡಿಕೆಯ ಎರಡನೇ ಸಾಲಿನಲ್ಲಿ **"ಪಟ್ಟಣ/ನಗರ/ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ"** ಎಂಬುದರ ಬದಲಾಗಿ **"ರಾಜ್ಯದಲ್ಲಿನ 20459"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಈ ತಿದ್ದುಪಡಿಯನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/930/ವೆಚ್ಚ–5/2011, ದಿನಾಂಕ: 16–11–2011 ರಲ್ಲಿನ ಸೂಚನೆಯ ಅನುಸಾರ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಇಲಾಖೆ. (ಆಹಾರ–1 ಮತ್ತು 2)

ಪಿ.ಆರ್. 313

ಶಿಕ್ಷಣ ಸಚಿವಾಲಯ

ವಿಷಯ : ಕಾಣೆಯಾಗಿರುವ ಶ್ರೀ ಕೆ. ಶ್ರೀನಿವಾಸ್, ಸಹಾಯಕ ಆಫ್‌ಸೆಟ್ ಮುದ್ರಕರು, ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ, ಮೈಸೂರು ಇವರ ಕುಟುಂಬಕ್ಕೆ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1. ದಿನಾಂಕ: 21-04-2011ರ ಮಾನ್ಯ ಸಿವಿಲ್ ಜಡ್ಜ್, ಜೆ.ಎಂ.ಎಫ್.ಸಿ. ನ್ಯಾಯಾಲಯ, ಮೈಸೂರು, ಆದೇಶ ಸಂಖ್ಯೆ: ಓ.ಎಸ್.ನಂ. 1635/2010.
2. ದಿನಾಂಕ: 03-09-2011ರ ಸರ್ಕಾರಿ ಮುದ್ರಣಾಲಯ ನಿರ್ದೇಶಕರ ಪತ್ರ ಸಂಖ್ಯೆ: ಡಿಪಿಎಸ್/ಸಿಸಿಎ-06(08)/17322011-12.
3. ದಿನಾಂಕ: 21-03-1988ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆರ್ಥಿಕ (ವಿಶೇಷ) 11 ಕುವಿವೇ/87.

ಪ್ರಸ್ತಾವನೆ :

1) ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಕಾಣೆಯಾದ ಶ್ರೀ ಕೆ. ಶ್ರೀನಿವಾಸ್, ಸಹಾಯಕ ಆಫ್‌ಸೆಟ್ ಮುದ್ರಕರು, ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ, ಮೈಸೂರು. ರವರ ಪತ್ನಿ ಶ್ರೀಮತಿ ಗೀತಾ ದೇವಿ ರವರು ನ್ಯಾಯಾಧೀಶರು 4ನೇ ಅಪರ 1ನೇ ಸಿವಿಲ್ ಜಡ್ಜ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮೈಸೂರು. ಇಲ್ಲಿ ತಮ್ಮ ಪತಿ ದಿನಾಂಕ: 09-04-2001 ರಂದು ಕಾಣೆಯಾಗಿದ್ದು, ಇವರ ಪತ್ತೆಗಾಗಿ ಮಾಡಿರುವ ಎಲ್ಲಾ ಪ್ರಯತ್ನಗಳು ವಿಫಲವಾಗಿರುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಕೃಷ್ಣರಾಜ ಪೊಲೀಸ್ ಠಾಣೆ, ಮೈಸೂರು. ಇವರು ವರದಿ ನೀಡಿದ ಹಿನ್ನೆಲೆಯಲ್ಲಿ ಶ್ರೀಮತಿಯವರ ಪತಿ ಕಾಣೆಯಾದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದು, (ಸಂಖ್ಯೆ: 1635/2010) ಮಾನ್ಯ ನ್ಯಾಯಾಲಯವು ದಿನಾಂಕ: 21-04-2011 ರಲ್ಲಿ ತೀರ್ಪು ನೀಡಿ ಶ್ರೀ ಕೆ. ಶ್ರೀನಿವಾಸ್ ಇವರು ದಿನಾಂಕ: 09-04-2009 ರಿಂದ ಮೃತರಾಗಿರುವುದಾಗಿ ಭಾವಿಸಿರುವುದಾಗಿಯೂ ಹಾಗೂ ಮೃತ ಸರ್ಕಾರಿ ನೌಕರರ ಕುಟುಂಬಕ್ಕೆ ಲಭ್ಯವಾಗುವ ಆರ್ಥಿಕ ಸೌಲಭ್ಯವನ್ನು ಬಿಡುಗಡೆ ಮಾಡಲು ಆದೇಶ ನೀಡಿರುತ್ತಾರೆ.

2) ಮೇಲೆ (2) ರಲ್ಲಿ ಓದಲಾದ ನಿರ್ದೇಶಕರ ಪ್ರಸ್ತಾವನೆಯಲ್ಲಿ ಮೈಸೂರಿನ ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯದಲ್ಲಿ ಸಹಾಯಕ ಆಫ್‌ಸೆಟ್ ಮುದ್ರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೆ. ಶ್ರೀನಿವಾಸ್‌ರವರು ದಿನಾಂಕ : 9-4-2001 ರಿಂದ ಕಾಣೆಯಾಗಿರುತ್ತಾರೆಂದು ಅವರ ಪತ್ನಿ ಶ್ರೀಮತಿ ಗೀತಾ ದೇವಿ ರವರು ಮಾಹಿತಿಯನ್ನು ಸಲ್ಲಿಸಿ ದಿನಾಂಕ : 21-4-2011ರ ನ್ಯಾಯಾಲಯದ ಆದೇಶದಂತೆ ತಮಗೆ ಕುಟುಂಬ ಪಿಂಚಣಿ ಹಾಗೂ ಇತರೆ ಆರ್ಥಿಕ ಸೌಲಭ್ಯವನ್ನು ಬಿಡುಗಡೆ ಮಾಡುವಂತೆ ಕೋರಿ ಮರಣ ಸಮರ್ಥನಾ ಪತ್ರ, ನ್ಯಾಯಾಲಯದ ತೀರ್ಪಿನ ಪ್ರತಿ, ನಷ್ಟಬಂದಿ ಪ್ರಮಾಣ ಪತ್ರ, ವಾರಸುದಾರರ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಶ್ರೀಮತಿ ಗೀತಾ ದೇವಿ ಇವರಿಗೆ ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಆದೇಶವನ್ನು ನೀಡುವಂತೆ ಮುದ್ರಣ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

3) ಮೇಲೆ (3) ರಲ್ಲಿ ಓದಲಾದ ಆದೇಶದಲ್ಲಿ ಕಾಣೆಯಾದ ಪೆನ್ಷನ್‌ದಾರರ ಕುಟುಂಬಕ್ಕೆ ಪೆನ್ಷನ್‌ದಾರರು ಕಣ್ಮರೆಯಾದ ದಿನಾಂಕದಿಂದ ಒಂದು ವರ್ಷದ ಅವಧಿಯು ಕಳೆದ ಬಳಿಕ ಅಂತಹ ನೌಕರರು ಮಾಡಿರುವ ನಾಮ ನಿರ್ದೇಶವನ್ನು ಗಮನದಲ್ಲಿಟ್ಟುಕೊಂಡು ಕುಟುಂಬ ವಿಶ್ರಾಂತಿ ವೇತನವನ್ನು ಮಂಜೂರು ಮಾಡಲು ಅವಕಾಶವನ್ನು ಕಲ್ಪಿಸಿದೆ.

4) ಸರ್ಕಾರಿ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಇಲಾಖೆಯ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 174 ಇಎಸ್‌ಡಬ್ಲ್ಯೂ 2011, ಬೆಂಗಳೂರು, ದಿನಾಂಕ : 07-01-2012.

5) ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ, ಮೈಸೂರು, ಇಲ್ಲಿ ಸಹಾಯಕ ಆಫ್‌ಸೆಟ್ ಮುದ್ರಕರಾಗಿ ಕಾರ್ಯನಿರ್ವಹಿಸುತ್ತಿದ್ದು ದಿನಾಂಕ: 09-04-2001 ರಿಂದ ಕಾಣೆಯಾಗಿರುವ ಶ್ರೀ ಕೆ.ಶ್ರೀನಿವಾಸ್ ಇವರಿಗೆ ದೀರ್ಘ ಕಾಲದ ಅನಧಿಕೃತ ಗೈರು ಹಾಜರಾತಿಗೆ ಶಿಸ್ತು ಕ್ರಮ ಪ್ರಾರಂಭಿಸಿಲ್ಲವಾದಲ್ಲಿ ದಿನಾಂಕ: 21-03-1988ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆರ್ಥಿಕ (ವಿಶೇಷ) 11 ಕುವಿವೇ 87, ರನ್ವಯ ಎಲ್ಲಾ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಇವರ ಕುಟುಂಬ ವಾರಸುದಾರರಿಗೆ ನಿಯಮಾನುಸಾರ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಆದೇಶಿಸಿದೆ.

6) ಈ ಆದೇಶವನ್ನು ಅ.ಟಿ. ಸಂಖ್ಯೆ: ಆಇ(ವಿ) 201 ಪಿಇಎನ್-1/2011 ದಿನಾಂಕ: 22-09-2011 ರಲ್ಲಿ ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)ಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಬಿ. ಪಟಗಾರ್
ಸರ್ಕಾರದ ಅಧೀನ ಕಾರ್ಯದರ್ಶಿ, (ಸಾಮಾನ್ಯ)
ಶಿಕ್ಷಣ ಇಲಾಖೆ.

ಪಿ.ಆರ್. 311

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ನಂದಿನಿ ಹಾಲಿನ ಮಾರಾಟ ದರ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ಇವರ ಪತ್ರ ಸಂಖ್ಯೆ: ಕಹಾಮ/ಮಾರುಕಟ್ಟೆ/263/2011-12, ದಿನಾಂಕ: 15-12-2011.

ಪ್ರಸ್ತಾವನೆ :

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 15-12-2011ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾ ಮಂಡಳಿ, ಬೆಂಗಳೂರು ರವರು ರಾಜ್ಯದ ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಹಾಲು ಉತ್ಪಾದಕರಿಗೆ ಉತ್ತೇಜಕವಾಗುವಂತಹ ಖರೀದಿ ದರಗಳನ್ನು ನೀಡಲು ಅನುವಾಗುವಂತೆ ನಂದಿನಿ ಹಾಲಿನ ಎಲ್ಲಾ ವಿಧಗಳ ಗರಿಷ್ಠ ಮಾರಾಟ ದರಗಳನ್ನು ಪ್ರತಿ ಲೀಟರಿಗೆ ರೂ. 4.00 ರಂತೆ ಹೆಚ್ಚಿಸಿ ಪರಿಷ್ಕರಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಈ ಸಂಬಂಧ ದಿನಾಂಕ: 31-12-2011 ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯ ಅಧ್ಯಕ್ಷರು ಹಾಗೂ ಇತರೆ ಇಲಾಖಾ ಮತ್ತು ಕರ್ನಾಟಕ ಹಾಲು ಮಹಾ ಮಂಡಳಿಯ ಅಧಿಕಾರಿಗಳೊಂದಿಗೆ

ಚರ್ಚಿಸಿ, ಎಲ್ಲಾ ಹಾಲು ಉತ್ಪಾದಕರ ಒಕ್ಕೂಟಗಳು ಪ್ರಸ್ತುತ ಹಾಲಿನ ಉತ್ಪಾದನೆಯ ವೆಚ್ಚದ ಜೊತೆಗೆ ಮೇವು, ಪಶು ಆಹಾರ, ಸಂಸ್ಕರಣೆ ಮತ್ತು ಸಾಗಾಣಿಕೆ ವೆಚ್ಚಗಳು ಹೆಚ್ಚಾಗಿರುವುದರಿಂದ ಪ್ರತಿ ಲೀಟರ್ ಹಾಲಿಗೆ ರೂ. 4.00 ಅಥವಾ ರೂ. 3.00ರಂತೆ ಹೆಚ್ಚಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಪಸಂಮೀ 121 ಕಹಾಮ 2011, ಬೆಂಗಳೂರು, ದಿನಾಂಕ : 06-01-2012.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ರಾಜ್ಯವು ಬರಗಾಲವನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಹಾಲು ಉತ್ಪಾದಕರ ರೈತರಿಗೆ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಹಾಗೂ ಒಕ್ಕೂಟಗಳನ್ನು ಸಧೃಡಗೊಳಿಸಲು ಮತ್ತು ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಎಲ್ಲಾ ವಿಧಗಳ ನಂದಿನಿ ಹಾಲಿನ ಗರಿಷ್ಠ ಮಾರಾಟ ದರಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಪ್ರತಿ ಲೀಟರಿಗೆ ರೂ. 3.00ರಂತೆ (ಮೂರು ರೂಪಾಯಿಗಳು ಮಾತ್ರ) ಹೆಚ್ಚಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ಕೆ. ಶ್ರೀನಿವಾಸಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಗೆ ಇಲಾಖೆ.
(ಪಶುಸಂಗೋಪನೆ)

ಪಿ.ಆರ್. 314

INFRASTRUCTURE DEVELOPMENT SECRETARIAT

Sub : Review of Documents for Development of Greenfield Airport at Hassan – payment of fees to iDeck for services.

Read :
1. G.O. No. IDD 24 DIA 2010 dated: 21-04-2010.
2. Letter No. iDeck/2010-12/1122 dated: 15-11-2011.

Preamble :

In the Government Order read at (1) iDeck has been appointed as Nodal Agency for the development of the Greenfield Airports at Bellary and Hassan along with the construction of airstrips at chitradurga, Karwar, Haveri, Kollegal, Yadgir and Koppal. iDeCK will also continue to be the Nodal Agency for the development of Gulbarga, Shimoga and Bijapur Airports.

2. In the letter read at (2) above, iDeck has sent the advisory assistance proposal for the project monitoring of Minor Airport at Hassan and requested to release a fee of Rs. 4,96,000 towards the services rendered by them for review of DPR and analysis of the Hassan Airport.

3. Proposal has been examined in detail and hence this order.

GOVERNMENT ORDER NO. IDD 94 DIA 2008, BANGALORE, DATED 03-01-2012.

Under the Circumstances explained in the preamble, Sanction is accorded for release of Rs.4,96,000/- (Rupees four lakhs ninety-six thousand only) towards fees to iDeck for the servies rendered by iDeck for review of D.P.R. and analysis of the Hassan Airport Project.

2. This amount shall be met under the Head of Account 3451-00-090-1-06-059 – Infrastructure Preliminary Studies. Other Expenditure – out of the provision of Rs. 300.00 lakhs.

3. The Chief Financial Officer, and Company Secretary, iDeCK, Bangalore is authroised to draw the above amount on a payees receipt duly countersigned by the Under Secretary to Government, Infrastructure Development Department, Bangalore.

4 This order issues in accordance with the financial powers delegated to the Principal Secretaries/Secretaries to Government vide G.O. No. FD 1 TFP 2008, dated: 16-05-2008.

By Order and in the name of the Governor of Karnataka,
S.J. SAMPATH KUMAR
Under Secretary to Government,
Infrastructure Development Department.

P.R.315

ಇಂಧನ ಸಚಿವಾಲಯ

ವಿಷಯ : ಮೆ: RVS Associates ರವರಿಗೆ 0.25 ಮೆ.ವ್ಯಾ ಪವನ ವಿದ್ಯುತ್ ಯೋಜನೆಯನ್ನು ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಂದ ವರ್ಗಾಯಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಡಿಇ 26 ಎನ್‌ಸಿಇ 1999 ದಿನಾಂಕ: 13–05–1999,
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 259 ಎನ್‌ಸಿಇ 2004 ದಿನಾಂಕ: 18–03–2005.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 20–06–2009.
4. ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 04–03–2011.
5. ಸರ್ಕಾರಿ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 02–08–2011.
6. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/RVSA-0-25(AMTL-17.25MW)/2011/4108 ದಿನಾಂಕ: 17/19–10–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ಅರಸಿನಗುಂಡಿ ಗಾಳಿವಲಯ ಪ್ರದೇಶದ ತುರುವನೂರು (4 ಮೆ.ವ್ಯಾ) ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಒಟ್ಟು 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ಗಾಳಿ ವಲಯ ಪ್ರದೇಶಗಳಲ್ಲಿ ಹಂಚಿಕೆಮಾಡಲಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 17.25 ಮೆ.ವ್ಯಾಗೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದು ಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು ಯೋಜನೆಯ ಅನುಷ್ಠಾನಕ್ಕಾಗಿ ಕೊನೆಯ ಅವಕಾಶವಾಗಿ ಕಾಲಾವಕಾಶವನ್ನು ದಿನಾಂಕ: 31-12-2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ವಲಯ ಪ್ರದೇಶಗಳಲ್ಲಿ ಹಂಚಿಕೆಯಾಗಿರುವ 6.05 ಮೆ.ವ್ಯಾ. ಹೆಚ್ಚುವರಿ ಸಾಮರ್ಥ್ಯದ (17.25 – 11.2 = 6.05 ಮೆ.ವ್ಯಾ.) ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ: 31-12-2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಅನುಮತಿಸಲಾದ 17.25 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.25 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ: RVS Associates ಕಂಪನಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಯೋಜನೆಗೆ ಅವಶ್ಯಕವಾದ ಜಮೀನು ಕಂದಾಯ ಜಮೀನಾಗಿದ್ದು, ಈ ಯೋಜನೆಯನ್ನು 31-12-2011ರೊಳಗೆ ಪೂರ್ಣಗೊಳಿಸಲಿದ್ದು, ಉತ್ಪಾದನೆ ಆಗುವ ವಿದ್ಯುತ್ತನ್ನು ಪಿಪಿಎ ಮೂಲಕ ಎಸ್ಕಾಂಗೆ ಮಾರಾಟಮಾಡುವುದಾಗಿಯೂ ಸಹ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 416 ಎನ್‌ಸಿಇ 2011, ಬೆಂಗಳೂರು, ದಿನಾಂಕ : 16-11-2011.

ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಯವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ಗಾಳಿ ವಲಯ ಪ್ರದೇಶಗಳಲ್ಲಿ ಅನುಮತಿಸಲಾದ 17.25 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.25 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ: RVS Associates ಕಂಪನಿಯವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲಾಗಿದೆ:-

Village	Taluk	District	MW	Type of land	Land Survry Number	No. of WTGs	Extent in Land (Acres)
Turuvanur	Chitradurga	Chitradurga	0.25	Revenue	339	AMNTL-5	0.56

1. ಮೆ: RVS Associates ರವರು 45 ದಿನಗಳ ಒಳಗೆ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. PPA is assined to BESCOM, BESCOM shall execute the PPA with M/s. RVS Associates within the period of one month.
3. ಸದರಿ ಕಂಪನಿಯು ಯೋಜನೆಯನ್ನು ದಿನಾಂಕ 31-12-2011 ರೊಳಗಾಗಿ ಅನುಷ್ಠಾನಗೊಳಿಸುವುದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (commitment letter)
4. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1) ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 316

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಂಪಾಪುರ ಗ್ರಾಮದ ಸ.ನಂ. 1/1 ಮತ್ತು ಸ.ನಂ. 18/1ರ ಒಟ್ಟು ವಿಸ್ತೀರ್ಣ 15.19 ಎಕರೆ ಎ ಮತ್ತು ಬಿ ಸರ್ಕಾರಿ ಖರಾಬು ಜಮೀನನ್ನು ಖಾಸಗಿ ವಸತಿ ಉದ್ದೇಶಕ್ಕಾಗಿ ಕರ್ನಾಟಕ ಗೃಹ ಮಂಡಳಿಗೆ ಮಂಜೂರು ಮಾಡುವ ಬಗ್ಗೆ:-

ಓದಲಾಗಿದೆ : ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (ಎಸ್) ಸಿಆರ್/120/09-10, ದಿನಾಂಕ 23-08-2010, 06-09-2010 ಮತ್ತು 18-10-2010.

ಪ್ರಸ್ತಾವನೆ :

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ದಿನಾಂಕ 23-08-2010, ದಿನಾಂಕ 06-09-2010 ಮತ್ತು ದಿನಾಂಕ 18-10-2010ರ ಪತ್ರಗಳಲ್ಲಿ ಸರ್ಕಾರಕ್ಕೆ ವರದಿ ಮಾಡುತ್ತಾ, ಹಂಪಾಪುರ ಗ್ರಾಮದಲ್ಲಿನ ಸ.ನಂ. 1/1 ಮತ್ತು ಇತರೆ ಸರ್ವೆ ನಂಬರುಗಳಲ್ಲಿನ

ಸುಮಾರು 104 ಎಕರೆ 34¾ ಗುಂಟೆ ಜಮೀನಿನಲ್ಲಿ ಹಮ್ಮಿಕೊಂಡಿರುವ ವಸತಿ ಯೋಜನೆಗೆ ಸಂಬಂಧಿಸಿದಂತೆ ವಸತಿ ಇಲಾಖೆಯು ಮೆಮೊರಾಂಡಂ ಆಫ್ ಜಾಯಿಂಟ್ ವೆಂಚರ್ ಅಗ್ರಿಮೆಂಟ್‌ಗೆ ಅನುಮೋದನೆ ನೀಡಿದ್ದು, ಈ ಸಂಬಂಧ ಸದರಿ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಈಗಾಗಲೇ ಕರ್ನಾಟಕ ಗೃಹ ಮಂಡಳಿಯ ಹೆಸರಿಗೆ ಪಿಪಿಪಿ ಸಹಭಾಗಿತ್ವದ ಪಾಲುದಾರರು 104 ಎಕರೆ 34¾ ಗುಂಟೆ ಜಮೀನನ್ನು ಕರ್ನಾಟಕ ಗೃಹ ಮಂಡಳಿಗೆ ವರ್ಗಾಯಿಸಿರುತ್ತಾರೆ ಎಂದು ತಿಳಿಸುತ್ತಾ. ಇದರಲ್ಲಿ ವಿವಿಧ ಸರ್ವೆ ನಂಬರುಗಳ ಜಮೀನುಗಳಲ್ಲಿ ಒಟ್ಟು 15 ಎಕರೆ 19 3/4 ಗುಂಟೆ ಅ ಮತ್ತು ಬಿ ಸರ್ಕಾರಿ ಖರಾಬುಗಳಿದ್ದು. ಈ ಖರಾಬು ಜಮೀನುಗಳು ಕರ್ನಾಟಕ ಗೃಹ ಮಂಡಳಿಗೆ ಈಗಾಗಲೇ ವರ್ಗಾಯಿಸಲಾಗಿರುವ ಜಮೀನುಗಳ ಮಧ್ಯ ಭಾಗದಲ್ಲಿ ಬರುತ್ತದೆ ಎಂದು ತಿಳಿಸಿರುತ್ತಾರೆ.

ಈ ಸರ್ಕಾರಿ ಖರಾಬು ಜಮೀನುಗಳು ಮೂಲ ಕೃಷಿ ಸ್ವರೂಪವನ್ನು ಕಳೆದುಕೊಂಡು ಕಲ್ಲುಮರಟೆ ಗುಡ್ಡ ಎಂಬುದು ಖಚಿತವಾಗಿದೆ ಮತ್ತು ಸದರಿ ಸರ್ವೆ ನಂಬರುಗಳಲ್ಲಿ ಖರಾಬು ಕಂಡುಬರುವುದಿಲ್ಲ, ರೀ ಸರ್ವೆ ಕಾಲದಲ್ಲಿಯೂ ಸಹ ಈ ಜಮೀನುಗಳು ಓಡುವಳಿ ಭೂಮಿಯಿಂದ ಪರಿವರ್ತನೆಯಾಗಿರುವುದು ಸ್ಥಳ ತನಿಖೆಯಿಂದ ಕಂಡುಬರುವುದಲ್ಲದೇ ಸದರಿ ಸರ್ವೆ ನಂಬರುಗಳಲ್ಲಿನ ಕಲ್ಲುಮರಟೆ ಸ್ವರೂಪದ ಖರಾಬು ಉಪಯೋಗಿಸದೇ ಇದ್ದು, ಇಂತಹ ಜಮೀನುಗಳನ್ನು ಭೂ ಕಂದಾಯ ಕಾಯ್ದೆ ಕಲಂ 69, 91 ಮತ್ತು ಭೂ ಮಂಜೂರಾತಿ ನಿಯಮ 20(1)(ಸಿ)ರನ್ವಯ ಪ್ರತಿ ಎಕರೆಗೆ ಮಾರ್ಗಸೂಚಿ ಬೆಲೆಯ ಶೇ 50 ರಂತೆ ಎಕರೆಯೊಂದಕ್ಕೆ ರೂ. 17,50,000/-ಗಳನ್ನು ವಿಧಿಸಿ ಕರ್ನಾಟಕ ಗೃಹ ಮಂಡಳಿಗೆ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ:-

i) ಇದು ವಸತಿ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಕರ್ನಾಟಕ ಗೃಹ ಮಂಡಳಿಯು ಖಾಸಗಿ ಸಹಭಾಗಿತ್ವದಲ್ಲಿ ಕೈಗೊಂಡಿರುವ ಸಾರ್ವಜನಿಕ ವಸತಿ ಯೋಜನೆಯಾಗಿದ್ದು, ಸದರಿ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಈಗಾಗಲೇ ಕರ್ನಾಟಕ ಗೃಹ ಮಂಡಳಿಯ ಹೆಸರಿಗೆ ಪಿಪಿಪಿ ಸಹಭಾಗಿತ್ವದ ಪಾಲುದಾರರು 104 ಎಕರೆ 34 3/4 ಗುಂಟೆ ಜಮೀನು ವರ್ಗಾಯಿಸಿದ್ದು, ಈ ಜಮೀನುಗಳ ಮದ್ಯೆ ಸರ್ಕಾರಿ ಖರಾಬು ಒಟ್ಟು 15 ಎಕರೆ 19 3/4 ಗುಂಟೆ ಜಮೀನು ಇದ್ದು, ಸದರಿ ಎಲ್ಲಾ ಸರ್ವೆ ನಂಬರುಗಳಲ್ಲಿನ ಜಮೀನು ಆರ್.ಟಿ.ಸಿ. ಯಂತೆ ಈ ಖರಾಬಿನೊಂದಿಗೆ ಕರ್ನಾಟಕ ಗೃಹ ಮಂಡಲಿಯ ಮಾಲೀಕತ್ವದಲ್ಲಿರುತ್ತದೆ ಮತ್ತು ಬಡಾವಣೆ ಅಭಿವೃದ್ಧಿ ನಕ್ಷೆ ಕರ್ನಾಟಕ ಗೃಹ ಮಂಡಳಿಯಿಂದ ಅನುಮೋದನೆಯಾಗಿದೆ.

ii) ಇದರಲ್ಲಿ ಶೇ. 25ರಷ್ಟು ಬಡಾವಣೆಯನ್ನು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಲಾಭವಿಲ್ಲದೇ ಮೀಸಲಾಗಿರಿಸಲು ಉದ್ದೇಶಿಸಲಾಗಿದೆ.

iii) ಸರ್ವೆ ಇಲಾಖೆ ಇವರ ಅಭಿಪ್ರಾಯದಂತೆ ಸದರಿ ಖರಾಬು ಜಮೀನುಗಳು ಮೂಲ ಮತ್ತು 2ನೇ ಕ್ಲಾಸಿಫಿಕೇಷನ್ ಕಾಲದಲ್ಲಿ ಓಡುವಳಿ ಖರಾಬು ನಂಬರುಗಳಾಗಿ ಮುಂದುವರೆದಿದ್ದು, ಖರಾಬು ಅಸ್ತಿತ್ವಗಳನ್ನು ಕಳೆದುಕೊಂಡಿರುತ್ತವೆ.

iv) ಸದರಿ ಜಮೀನು ಕಲ್ಲುಮರಟಿ ಸ್ವರೂಪವಾಗಿದ್ದು, ಕೃಷಿ ಸ್ವರೂಪವನ್ನು ಕಳೆದುಕೊಂಡಿರುತ್ತದೆ

v) ಸದರಿ ಸರ್ಕಾರಿ ಖರಾಬುಗಳ ಬಹುತೇಕ ಭಾಗವನ್ನು ನಾಗರಿಕ ಸೌಲಭ್ಯಕ್ಕಾಗಿ ಮೀಸಲಿಡಲಾಗುವುದು

ಸರ್ಕಾರವು ವಿಶೇಷ ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: 701 ಎಲ್‌ಜಬಿ 2010, ಬೆಂಗಳೂರು, ದಿನಾಂಕ 09-02-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಶಿಫಾರಸ್ಸಿನಂತೆ ಮತ್ತು ಭೂಮಾಪನ ಇಲಾಖೆಯ ಅಭಿಪ್ರಾಯದಂತೆ, ಪಿಪಿಪಿ ಯೋಜನೆ ಅಡಿ ಈಗಾಗಲೇ ಪಾಲುದಾರರಿಂದ ಕರ್ನಾಟಕ ಗೃಹ ಮಂಡಳಿಗೆ ಹಸ್ತಾಂತರಿಸಲ್ಪಟ್ಟಿರುವ 104 ಎಕರೆ 34¾ ಗುಂಟೆ ಜಮೀನಿನ ಮಧ್ಯೆ ಬರುವ ಹಂಪಾಪುರ ಗ್ರಾಮದ ಸ.ನಂ. 1/1 ಮತ್ತು ಇತರೆ ಸ.ನಂ. ಗಳಲ್ಲಿರುವ 15 ಎಕರೆ 19 3/4 ಗುಂಟೆ ಎ ಮತ್ತು ಬಿ ಖರಾಬು ಜಮೀನುಗಳನ್ನು ಕರ್ನಾಟಕ ಗೃಹ ಮಂಡಳಿರವರಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 69, 91 ಮತ್ತು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ) ರನ್ವಯ ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ದರದ ಶೇ. 50 ರಷ್ಟು ದರ ವಿಧಿಸುವ ಬದಲು, ಸದರಿ ಜಮೀನಿನ ಪ್ರಚಲಿತ ಪೂರ್ಣ ಮಾರುಕಟ್ಟೆ ದರ ವಿಧಿಸಿ ಮತ್ತು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

1. ಕರ್ನಾಟಕ ಗೃಹ ಮಂಡಳಿಯ ಸಾರ್ವಜನಿಕ ಪಿ.ಪಿ.ಪಿ. ವಸತಿ ಯೋಜನೆಯಡಿ Joint Venture Agreement ನಂತೆ ಶೇ. 25 ರಷ್ಟು ಬಡಾವಣೆಯನ್ನು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕಡ್ಡಾಯವಾಗಿ ಮೀಸಲಿಡತಕ್ಕದ್ದು.
2. ಸದರಿ ಸಾರ್ವಜನಿಕ ವಸತಿ ಯೋಜನೆಗೆ ಅವಶ್ಯವಾಗಿರುವ "ಎ" ಮತ್ತು "ಬಿ" ಖರಾಬುಗಳಲ್ಲಿ ಬರುವ ಬಂಡಿದಾರಿ, ಕಾಲುದಾರಿ ಪ್ರದೇಶಗಳನ್ನು ಕರ್ನಾಟಕ ಗೃಹ ಮಂಡಳಿಯಿಂದ ಅನುಮೋದಿತವಾಗಿರುವ ಸಾರ್ವಜನಿಕ ವಸತಿ ಯೋಜನೆ ನಕ್ಷೆಯಂತೆ ನಾಗರೀಕ ಸೌಲಭ್ಯ ಆಸ್ತಿಗಳನ್ನಾಗಿಯೇ ಮುಂದುವರೆಸಿಕೊಂಡು ಹೋಗತಕ್ಕದ್ದು.
3. ಸದರಿ ಸರ್ಕಾರಿ ಜಮೀನುಗಳನ್ನು ಯಾವುದೇ ಕಾರಣಕ್ಕೂ ಬೇರೆ ಉದ್ದೇಶಕ್ಕೆ ಉಪಯೋಗಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಕೆ. ರಾಮಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ.ಮಂ.)

ಪಿ.ಆರ್. 507

ಸಹಕಾರ ಸಚಿವಾಲಯ

ವಿಷಯ : ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಗೂರ, ಹಾವೇರಿ ಜಿಲ್ಲೆ, ಇದರ 2006-07 ರಿಂದ 2010-11ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು ದಿನಾಂಕ 31-03-2012ರೊಳಗೆ ನಡೆಸಲು ಅನುಮತಿ ನೀಡುವ ಬಗ್ಗೆ

ಓದಲಾಗಿದೆ : ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರ ಪತ್ರ ಸಂಖ್ಯೆ: DSK-ESTS-55-2011-12, ದಿನಾಂಕ 17-10-2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಗೂರು ತಾಲ್ಲೂಕು, ಹಾವೇರಿ ಇದನ್ನು ಸಕಾರದ ಆದೇಶ ಸಂಖ್ಯೆ: ಸಿಡಿ-63-ಸಸಕಾ-2007(ಪಿ), ದಿನಾಂಕ 10-01-2008 ರನ್ವಯ ದಿನಾಂಕ 18-2-2008 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ. ಕಾರ್ಖಾನೆಯ 2006-07 ರಿಂದ 2010-11ನೇ ಸಾಲಿನವರೆಗೆ ವಾರ್ಷಿಕ ಮಹಾ ಸಭೆಗಳನ್ನು ನಡೆಸಬೇಕಾಗಿದ್ದು, ಅದರಂತೆ ಸದರಿ ಸಭೆಗಳನ್ನು ನಡೆಸಲು ಹಣಕಾಸಿನ ಲಭ್ಯತೆ ಇಲ್ಲದಿರುವುದರಿಂದ ಕಾರ್ಖಾನೆಯು ರೂ. 63 ಕೋಟಿಗಳಿಗೂ ಮಿಕ್ಕಿ ಹಾನಿಯನ್ನು ಹೊಂದಿದ್ದು ತೀರಿಸಬೇಕಾದ ಹೊಣೆಗಾರಿಕೆಗಳು ರೂ. 54 ಕೋಟಿಗೂ ಮಿಕ್ಕಿ ಇರುತ್ತದೆ. ಗುತ್ತಿಗೆ ಒಪ್ಪಂದದಂತೆ 2011-12ನೇ ಸಾಲಿನ ಗುತ್ತಿಗೆ ಹಣ ದಿನಾಂಕ 30-09-2011 ರೊಳಗೆ ಕಾರ್ಖಾನೆಗೆ ಪಾವತಿಸಬೇಕಾಗಿದ್ದು, ಅದರಿಂದ ಲಭ್ಯವಾಗುವ ಹಣವನ್ನು ಯಾವ-ಯಾವ ರೀತಿ ಯಾವ-ಯಾವ ಬಾಬ್ತುಗಳಿಗೆ ವೆಚ್ಚಮಾಡಬೇಕೆನ್ನುವ ಬಗ್ಗೆ ದಿನಾಂಕ 23-07-2011 ರಂದು ಕಾರ್ಖಾನೆಗೆ ಸಂಬಂಧಿಸಿದಂತಹ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯಿಸಿದ್ದು, ಅದರಂತೆ ಕಾರ್ಖಾನೆಯ 2006-07 ರಿಂದ 2010-11ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು ದಿನಾಂಕ 31-03-2012ರ ಒಳಗೆ ನಡೆಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಸಇ 17 ಸಸಕಾ 2011, ಬೆಂಗಳೂರು, ದಿನಾಂಕ 23-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಸಹಕಾರ ಸಂಘ ಅಧಿನಿಯಮ 1959ರ ಪ್ರಕರಣದ 121 ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕಲಂ 27(1)ನ್ನು ಸಡಿಲಿಸಿ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಗೂರ ಹಾವೇರಿ ಜಿಲ್ಲೆ ಇದರ 2006-07ರಿಂದ 2010-11ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು ದಿನಾಂಕ 31-03-2012ರೊಳಗೆ ನಡೆಸಲು ಅನುಮತಿ ನೀಡಿದೆ.

ಸೂಚನೆ:

ಕರ್ನಾಟಕ ಸಹಕಾರ ಸಂಘ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 31-03-2012ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ರ ಪ್ರಕರಣದ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್. ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಪಿ.ಆರ್. 317 ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ, (ರಿ) ಮೈಸೂರು ಇದರ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 08-08-2011ರ ಪತ್ರದಲ್ಲಿ ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ, ಮೈಸೂರು, ಈ ಸಂಘದ ಬಗ್ಗೆ ಸಹಕಾರ ಸಂಘಗಳ ಉಪ ನಿಬಂಧಕರು ಮೈಸೂರು ಇವರು ಸಂಘದಲ್ಲಿನ ಕೆಲವೊಂದು ಆರೋಪಗಳ ಕುರಿತಂತೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರಡಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ ಮೈಸೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದ್ದು ಅದರಂತೆ, ವಿಚಾರಣಾಧಿಕಾರಿಗಳು, ಈ ಕೆಳಂಡಂತೆ ವರದಿ ಮಾಡುತ್ತಾ ಸಂಘದಲ್ಲಿ ಲೆಕ್ಕಪತ್ರಗಳನ್ನು 2005-06 ರಿಂದ 2008-09ನೇ ಸಾಲುಗಳಲ್ಲಿ ಶ್ರೀ ಕೆ. ಟಿ. ಲಕ್ಷ್ಮಣ್ ಶೆಟ್ಟಿ ಇವರು ಅಧ್ಯಕ್ಷರೆಂದು ಹಾಗೂ ಸದರಿ ಅವಧಿಯಲ್ಲಿ ಶ್ರೀ ಕೆ. ಆರ್. ಸೋಮಶೇಖರ್ ಇವರು ಕಾರ್ಯದರ್ಶಿ ಎಂದು ಲೆಕ್ಕಪತ್ರಗಳನ್ನು ಮೈಸೂರು ಉಪನಿಬಂಧಕರ ಕಛೇರಿಗೆ ಸಲ್ಲಿಸಿದ್ದು, ಅದೇ ಅವಧಿಯಲ್ಲಿ ಶ್ರೀ ಚೆನ್ನಕೇಶವ ಇವರು ಅಧ್ಯಕ್ಷರೆಂದು ಹೇಳಿ ಸ್ವೀಕೃತಿಗಾಗಿ ಮೈಸೂರು ಉಪನಿಬಂಧಕರ ಕಛೇರಿಗೆ ಲೆಕ್ಕಪತ್ರಗಳನ್ನು ಸಲ್ಲಿಸಿರುತ್ತಾರೆ.

ಸಂಘದ ಲೆಕ್ಕಪತ್ರಗಳನ್ನು 2 ಗುಂಪುಗಳು ತಮ್ಮದೇ ನಿಜವಾದ ಆಡಳಿತ ಮಂಡಳಿಯೆಂದು ಪರಿಗಣಿಸಲು ಉಪನಿಬಂಧಕರು ಮೈಸೂರು ರವರನ್ನು ಕೋರಿರುತ್ತಾರೆ. ಈ ರೀತಿ 2 ಗುಂಪುನವರು ಲೆಕ್ಕಪತ್ರಗಳನ್ನು ಸಲ್ಲಿಸಿ ಸ್ವೀಕೃತಿ ಕೋರಿದ್ದ ಬಗ್ಗೆ ನೈಜ ಆಡಳಿತ ಮಂಡಳಿಯನ್ನು ಗುರುತಿಸಲು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರಡಿ ವಿಚಾರಣೆ ಜರುಗಿಸಲಾಗಿದೆ. ವಿಚಾರಣಾ ವೇಳೆಯಲ್ಲಿ 2 ಗುಂಪಿನವರು ಕಾನೂನು ಅಥವಾ ಬೈಲಾ ಮಹಾಸಭೆ ಹಾಗೂ ಚುನಾವಣೆ ನಡೆಸಿರುವ ಕ್ರಮವು ಕಾನೂನುಬಾಹಿರವಾಗಿದ್ದು, ಆಯ್ಕೆ ಮಾಡಲಾಗಿರುವ ಬಗ್ಗೆ ದಾಖಲಾತಿಗಳನ್ನು ಒದಗಿಸಲು ವಿಫಲರಾಗಿರುತ್ತಾರೆ ಹಾಗೂ ವಿಚಾರಣಾಧಿಕಾರಿಗಳು ಸಂಘದ ಬೈಲಾ ರೀತ್ಯಾ ಆಡಳಿತ ಮಂಡಳಿ ಸದಸ್ಯರ ಚುನಾವಣೆಯನ್ನು ಹಾಗೂ ವಾರ್ಷಿಕ ಮಹಾಸಭೆಯನ್ನು 2 ಗುಂಪಿನವರು ನಡೆಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಈಗಾಗಲೇ ಆಡಳಿತ ಮಂಡಳಿ ಸದಸ್ಯರ ಅವಧಿಯು ಮುಗಿದಿರುವುದರಿಂದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸಿರುವುದು ಸೂಕ್ತವೆಂದು ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳೂ ಮೈಸೂರು ಜಿಲ್ಲೆ ಹಾಗೂ ಉಪನಿಬಂಧಕರು ಮೈಸೂರು ಇವರು

ಅಭಿಪ್ರಾಯಪಟ್ಟಿರುತ್ತಾರೆ. ಆದ್ದರಿಂದ ಉಪನಿಬಂಧಕರು ಮೈಸೂರು ಹಾಗೂ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು ರವರ ಅಭಿಪ್ರಾಯದಂತೆ ಮೇಲ್ಕಂಡ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27ಎ ರನ್ವಯ ಪ್ರಸ್ತಾವನೆಯನ್ನು ಪರಿಗಣಿಸಲು ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 161 ಸಸಂನೋ 2011, ಬೆಂಗಳೂರು, ದಿನಾಂಕ 07-01-2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ (ರಿ) ಬನುಮಯ್ಯ ರಸ್ತೆ, ಮೈಸೂರು. ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘ ಸಂಸ್ಥೆಗಳ ಜಿಲ್ಲಾ ನೋಂದಣಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು ಇವರನ್ನು ಆಡಳಿತಾಧಿಕಾರಿಯನ್ನಾಗಿ ಅರು (06) ತಿಂಗಳ ಅವಧಿಗೆ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಸ್ಥೆಗೆ ಚುನಾವಣೆ ನಡೆಸಿ, ಚುನಾಯಿತರಾದ ನೂತನ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸಿ ಸರ್ಕಾರಕ್ಕೆ ವರದಿಯನ್ನು ನೀಡಬೇಕೆಂದು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ. ಎಸ್. ವಿಶ್ವೇಶ್ವರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್. 318

ಸಹಕಾರ ಸಚಿವಾಲಯ

ವಿಷಯ : ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರಾಯಬಾಗ, ಬೆಳಗಾವಿ ಜಿಲ್ಲೆ ಇದರ 2000-01 ರಿಂದ 2010-11ನೇ ಸಾಲುಗಳ ವಾರ್ಷಿಕ ಮಹಾಸಭೆಯನ್ನು ಜರುಗಿಸಲು ಕಾಲಾವಧಿ ವಿಸ್ತರಿಸುವ ಕುರಿತು.

ಓದಲಾಗಿದೆ : 1) ವಿಶೇಷಾಧಿಕಾರಿಗಳು, ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರಾಯಬಾಗ ಇವರ ಪತ್ರ ಸಂಖ್ಯೆ: ರಾಸಸಕಾ/ವಾರ್ಷಿಕ ಮಹಾಸಭೆ/2011-12, ದಿನಾಂಕ 11-11-2011.

2) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರ ಪತ್ರ ಸಂಖ್ಯೆ: ಡಿಎಸ್‌ಕೆ/ಇಎಸ್‌ಟಿಎಸ್/54/2011-12, ದಿನಾಂಕ 25-11-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ ವಿಶೇಷಾಧಿಕಾರಿಗಳು, ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರಾಯಬಾಗ, ಬೆಳಗಾವಿ ಜಿಲ್ಲೆ ಇವರು 2000-01 ರಿಂದ 2010-11ನೇ ಸಾಲುಗಳ ವಾರ್ಷಿಕ ಮಹಾಸಭೆಗಳನ್ನು ದಿನಾಂಕ 30-09-2012ರಲ್ಲಿ ಜರುಗಿಸಲು ಅನುಮತಿ ನೀಡುವಂತೆ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಿರುತ್ತಾರೆ.

ಮೇಲೆ ಓದಲಾದ (2)ರಲ್ಲಿನ ಪತ್ರದಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರಾಯಬಾಗ, ಬೆಳಗಾವಿ ಜಿಲ್ಲೆ ಇವರು ಸದರಿ ಕಾರ್ಖಾನೆಯು 2000-01 ರಿಂದ 2010-11ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು ಜರುಗಿಸಲು ಹೆಚ್ಚಿನ ಹಣಕಾಸಿನ ಅವಶ್ಯಕತೆಯಿದ್ದು ಈಗ ಗುತ್ತಿಗೆದಾರರು ಪಾವತಿಸಿರುವ ಗುತ್ತಿಗೆ ಹಣವನ್ನು ಪ್ರಮುಖ ಶಾಸನಬದ್ಧ ಬಾಕಿಗಳನ್ನು ತೀರಿಸಲು ಉಪಯೋಗಿಸಲಾಗಿರುತ್ತದೆ. ಕಾರ್ಖಾನೆಯ ಹಣಕಾಸಿನ ಸಮಸ್ಯೆಗಳು ಇತ್ಯರ್ಥವಾಗದೆ ಬಾಕಿ ಇರುವುದರಿಂದ ಸದರಿ ಪ್ರಕರಣಗಳು ಇತ್ಯರ್ಥವಾದ ನಂತರ ವಿಶೇಷಾಧಿಕಾರಿಗಳು ನೀಡಿದ ವರದಿಯನ್ನು ಪರಿಶೀಲಿಸಿ ದಿನಾಂಕ 30-09-2012 ರವರೆಗೆ ವಾರ್ಷಿಕ ಮಹಾಸಭೆಯನ್ನು ಜರುಗಿಸಲು ಅನುಮತಿ ನೀಡಬಹುದಾಗಿದೆ ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಅದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 30 ಸಸಕಾ 2010, ದಿನಾಂಕ : 05-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಯಭಾಗ ಸಹಕಾರ ಸಕ್ಕರೆ ಕಾರ್ಖಾನೆ ನಿ., ರಾಯಬಾಗ, ಬೆಳಗಾವಿ ಜಿಲ್ಲೆ ಇದರ 2000-01 ರಿಂದ 2010-11ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು ದಿನಾಂಕ 30-09-2012ರೊಳಗಾಗಿ ಜರುಗಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಅಡಿಯಲ್ಲಿ ಹಾಗೂ ಪ್ರಕರಣ 121(1)ರ ಅಡಿಯಲ್ಲಿ ಕಾಲಾವಕಾಶ ನೀಡಲಾಗಿದೆ.

ಸೂಚನೆ:

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 30-09-2012ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ರ ಪ್ರಕರಣದ ಉಪಬಂಧಗಳು ಪುನಃ ಜಾರಿಗೆ ಬರತಕ್ಕದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್. 319

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ರತ್ನಕುಮಾರ್, ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಉಡುಪಿ ಜಿಲ್ಲೆ, ಇವರ ಮೇಲಿನ ಆರೋಪಗಳ ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ :
1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆ ಸಂಖ್ಯೆ: ಸಿ2(3)ಪಅದೂ 43/2006-07, ದಿನಾಂಕ 20-10-2008.
2) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಡಿ 211 ಡಿಜಿಡಿ 2007, ದಿನಾಂಕ 11-12-2008
3) ಶ್ರೀ ರತ್ನಕುಮಾರ್ ಇವರ ಪ್ರತಿ ರಕ್ಷಣಾ ಹೇಳಿಕೆ ದಿನಾಂಕ 05-01-2009
4) ಸರ್ಕಾರದ ಆದೇಶ ಸಂಖ್ಯೆ: ಇಡಿ 211 ಡಿಜಿಡಿ 2007, ದಿನಾಂಕ 30-04-2009
5) ಸರ್ಕಾರದ ಆದೇಶ ಸಂಖ್ಯೆ: ಇಡಿ 23 ಡಿಜಿಪಿ 2010, ದಿನಾಂಕ 26-08-2010
6) ವಿಚಾರಣಾ ವರದಿ ದಿನಾಂಕ 10-01-2011
7) ಎರಡನೆ ಕಾರಣ ಕೇಳುವ ನೋಟೀಸ್ ದಿನಾಂಕ 01-08-2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಪ್ರಸ್ತಾವನೆಯಲ್ಲಿ ಶ್ರೀ ರತ್ನಕುಮಾರ್, ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಉಡುಪಿ ಜಿಲ್ಲೆ, ಇವರ ಮೇಲೆ ಬಂದಿದ್ದ ಆರೋಪಗಳ ಬಗ್ಗೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕರಡು ದೋಷಾರೋಪಣಾ ಪಟ್ಟಿಯೊಂದಿಗೆ ಪ್ರಸ್ತಾಪಿಸಲಾಗಿತ್ತು.

ಆರೋಪ-1 ಶ್ರೀ ರತ್ನಕುಮಾರ್, ಪ್ರಾಂಶುಪಾಲರು, ಆದ ನೀವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಉಡುಪಿ ಜಿಲ್ಲೆ, ಉಡುಪಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಇಲಾಖೆ ಆದೇಶ ಅಥವಾ ಆಡಳಿತ ಪರಿಷತ್ತಿನ ಒಪ್ಪಿಗೆ ಇಲ್ಲದೇ ಪ್ರಥಮ ಟಿ.ಸಿ.ಹೆಚ್.ನ ಪ್ರತಿ ವಿದ್ಯಾರ್ಥಿಯಿಂದ ರೂ. 4,500/- ಹಾಗೂ ದ್ವಿತೀಯ ಟಿ.ಸಿ.ಹೆಚ್. ವಿದ್ಯಾರ್ಥಿಗಳಿಂದ ರೂ. 3,500/-ಹಣವನ್ನು ಅನಧಿಕೃತವಾಗಿ ವಸೂಲು ಮಾಡಿರುವುದು. ಸಭೆಯನ್ನು ರಚನೆ ಮಾಡಲು ಅಥವಾ ನಿರ್ವಹಣೆ ಮಾಡಲು ಸುತ್ತೋಲೆ ಇಲ್ಲದಿದ್ದರೂ ಶುಲ್ಕ ವಸೂಲಾದ ಬಗ್ಗೆ ನಡವಳಿ ಮಾಡಿ ವಸೂಲಾತಿ ಬಗ್ಗೆ ಸರ್ಕಾರದ ಆದೇಶವಿದ್ದು, ನೀವು ಅನಧಿಕೃತವಾಗಿ ವಿದ್ಯಾರ್ಥಿಗಳಿಂದ ಹೆಚ್ಚಿಗೆ ಶುಲ್ಕ ವಸೂಲು ಮಾಡಿರುತ್ತೀರಿ. ಹೆಚ್ಚಿನ ವಂತಿಗೆ ವಸೂಲು ಮಾಡಿ, ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು.

ಆರೋಪ-2 ಉಡುಪಿ ಪ್ರಥಮ ಹಾಗೂ ದ್ವಿತೀಯ ಡಿ.ಎಡ್. ವಿದ್ಯಾರ್ಥಿಗಳಿಂದ ಹೆಚ್ಚುವರಿ ಹಣ ವಸೂಲು ಮಾಡಿರುವ ಬಗ್ಗೆ ಆಡಳಿತ ಸಮಿತಿ ಸಭೆಗೆ ಹಾಜರಾಗಲು ವಿವಿಧ ದಿನಾಂಕಗಳಲ್ಲಿ ಸಹಿ ಮಾಡಿದ್ದು, ನೀವು ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದು, ಅನಧಿಕೃತವಾಗಿ ವಸೂಲು ಮಾಡಿರುವ ಹಣವನ್ನು ನಿಮ್ಮ ಹೆಸರಿನಲ್ಲಿರುವ ಖಾತೆಗೆ ಜಮಾ ಮಾಡಿಕೊಂಡಿರುವುದು. ಈ ರೀತಿ ಅನಧಿಕೃತವಾಗಿ ವಸೂಲು ಮಾಡಿದ ಹಣವನ್ನು ನಗದು ಪುಸ್ತಕಕ್ಕೆ ತೆಗೆದುಕೊಳ್ಳಲು ಅವಕಾಶ ಇಲ್ಲದಿದ್ದರೂ ಈ ಸಂಬಂಧ ಖರ್ಚು ವೆಚ್ಚಗಳನ್ನು ಅನಧಿಕೃತವಾಗಿ ತಾವೇ ನಿರ್ವಹಿಸಿರುವುದು.

ಆರೋಪ-3 ಸರ್ಕಾರ ನಿಗಧಿಪಡಿಸಿರುವ ಪರೀಕ್ಷಾ ಶುಲ್ಕ ರೂ. 75/- ಎಂಬುದಾಗಿದ್ದರೂ ಪರೀಕ್ಷಾ ಕಾರ್ಯಕ್ಕೆ ಅಧಿಕ ವೆಚ್ಚ ಮಾಡಿರುವುದಿಲ್ಲದೇ ಇದಕ್ಕೆ ಸಂಬಂಧಿಸಿದ ರಶೀದಿಗಳನ್ನು ತಾವೇ ನಿರ್ವಹಿಸಿ ಅವಶ್ಯಕತೆಗಿಂತ ಹೆಚ್ಚಿನ ಹಣ ಖರ್ಚು ಮಾಡಿರುವುದು.

ಆರೋಪ-4 ಅನಧಿಕೃತವಾಗಿ ವಸೂಲು ಮಾಡಿರುವ ವಂತಿಗೆಯಲ್ಲಿ ಸಮವಸ್ತ್ರ ಖರೀದಿಯನ್ನು ಉಡುಪಿ ಟೌನ್‌ನಲ್ಲಿ ಖರೀದಿಸದೇ ನಿಮಗೆ ಅನುಕೂಲವಾಗಲು ಮೈಸೂರಿನಲ್ಲಿ ಸಮವಸ್ತ್ರವನ್ನು ಖರೀದಿಸಿದ್ದು ಖರೀದಿಸಿ ನೀಡಿರುವ ಸಮವಸ್ತ್ರದ ಬಗ್ಗೆ ವಿದ್ಯಾರ್ಥಿಯರನ್ನು ವಿಚಾರಿಸಲಾಗಿ ಸಮವಸ್ತ್ರದ ಬೆಲೆಯು ಮಾರುಕಟ್ಟೆಯಲ್ಲಿ ರೂ. 150/- ರಿಂದ ರೂ. 200/-ಆಗಿದ್ದು, ನೀವು ಖರೀದಿಸಿದ ಸಮವಸ್ತ್ರದ ಬೆಲೆ ರೂ. 600/- ಎಂಬುದಾಗಿ ತಿಳಿಸಿರುವುದು.

ಆರೋಪ-5 ಸಂಸ್ಥೆಯ ವಿದ್ಯುತ್ ಬಿಲ್ಲಿಗಾಗಿ ಡಿ.ಎಸ್.ಇ.ಆರ್.ಟಿ. ಬೆಂಗಳೂರು, ಇವರಿಂದ ಸಾಕಷ್ಟು ಹಣ ಮಂಜೂರಾಗಿದ್ದರೂ ಈ ಸಂಸ್ಥೆಯ ವಿದ್ಯಾರ್ಥಿ ನಿಲಯದಲ್ಲಿ ವಾಸವಾಗಿರುವ ವಿದ್ಯಾರ್ಥಿಗಳಿಂದ ವಿದ್ಯುತ್ ಶುಲ್ಕಕ್ಕಾಗಿ ಪ್ರತಿ ವಿದ್ಯಾರ್ಥಿಯಿಂದ ರೂ. 500/- ವಸೂಲು ಮಾಡಿರುವುದು.

ಆರೋಪ-6 ಸಾಮಗ್ರಿಗಳ ಖರೀದಿ, ಸಾದಿಲ್ವಾರು ಬಿಲ್ಲನ್ನು ಟ್ಯಾಕ್ಸ್ ಇನ್‌ವಾಯ್ಸ್ ಮೇಲೆ ಬಿಲ್ಲನ್ನು ತಯಾರಿಸಿ ಡ್ರಾ ಮಾಡಿ ಹಣ ಪಾವತಿಸಿರುವುದು.

ಆರೋಪ-7 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ ನಡೆಸುವ ಟೆಲಿಕಾನ್ಫರೆನ್ಸ್‌ಗೆ ಡಯಟ್ ಅನುದಾನ ಹಾಗೂ ಎಸ್.ಎಸ್.ಎ. ನಿಧಿಯಿಂದ ತರಬೇತಿ ಕಾರ್ಯಕ್ರಮ ನಡೆಸಲಾಗಿದೆ. ತರಬೇತಿಗೆ ಉಪಯೋಗಿಸಿದ ರಶೀದಿಗಳಲ್ಲಿ ಜೆರಾಕ್ಸ್, ಜನರೇಟರ್ ಹಾಗೂ ಲೇಖನಾ ಸಾಮಗ್ರಿಗಳನ್ನು ಒಂದೇ ಅಂಗಡಿಯಲ್ಲಿ ಖರೀದಿಸಲಾಗಿದೆ. ಹಾಗೂ ಕೆಲವು ತರಬೇತಿಗಳಲ್ಲಿ ತರಬೇತಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದು, ಅವರಿಗೆ ಮತ್ತೊಂದು ತರಬೇತಿಯಲ್ಲಿ ಆರ.ಪಿ.ಎಸ್. ಆಗಿ ಕಾರ್ಯನಿರ್ವಹಿಸಲು ಅನುಮತಿ ನೀಡಿದ್ದು, ಏಕ ಕಾಲದಲ್ಲಿಯೇ ಆರ್.ಪಿ.ಎಸ್. ಹಾಗೂ ಶಿಬಿರ ನಿರ್ದೇಶಕರ ಸಂಭಾವನೆಯನ್ನು ನೀಡಿರುತ್ತೀರಿ. ಎರಡು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಸಂಭಾವನೆಯನ್ನು ಎರಡೂ ಹುದ್ದೆಗಳಿಗೂ ನೀಡಿರುವುದು. ಡಯಟ್‌ನ ಸುತ್ತೋಲೆಯಲ್ಲಿ ತಿಳಿಸಿರುವಂತೆ ಡಯಟ್ ಸಿ.ಆರ್.ಪಿ. ಬಿ.ಆರ್.ಸಿ. ಸಿಬ್ಬಂದಿಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸದೇ ಯಾವುದೇ ಸಂಭಾವನೆ ಇಲ್ಲ ಎಂಬುದಾಗಿ ಸೂಚನೆ ಇದ್ದರೂ ಎರಡು ಹುದ್ದೆಗಳಲ್ಲಿ ಏಕಕಾಲದಲ್ಲಿ ಕಾರ್ಯ ನಿರ್ವಹಿಸಿರುವವರಿಗೆ ಸಂಭಾವನೆ ನೀಡಲಾಗಿರುವುದು.

ಆರೋಪ-8 ಎನ್.ಎಸ್.ಎಸ್. ದಿನಾಂಕ 06-03-2007ರಲ್ಲಿ ಯುವಜನೋತ್ಸವಕ್ಕಾಗಿ ಶಿಬಿರದ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಗೆ ರು 10,000/- ವೆಚ್ಚ ಮಾಡಿದೆ ಎಂದು ನಮೂದಿಸಲಾಗಿದ್ದು, ದಿನಾಂ 31-03-2007ರಲ್ಲಿ ವಿದ್ಯಾರ್ಥಿಗಳಿಂದ ಅನಧಿಕೃತವಾಗಿ ವಸೂಲಾದ ಹಣ ರು 10,000/-ವನ್ನು ಖರ್ಚು ಮಾಡಿದೆ ಎಂದು ರಶೀದಿ ಇಟ್ಟಿರುವುದು ಹಣ ದುರುಪಯೋಗ ಪಡಿಸಿಕೊಂಡಿರುವುದು.

ಆರೋಪ-9 ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಭೇಟಿ ಕಾಲದಲಿ ಕಡಿಮೆ ಸಾಧನೆ ತೋರಿಸಿರುವ ಶಾಲೆಗಳ ಭೇಟಿ ನೀಡುವಂತೆ ಸೂಚಿಸಿದ್ದರೂ ನೀವು ನಿಯೋಜನೆ ಆದೇಶವಿಲ್ಲದೇ ಹಿರಿಯ ಉಪನ್ಯಾಸಕರ ಪ್ರವಾಸ ಕಾರ್ಯಕ್ರಮ ನೀಡಿ ಪ್ರವಾಸ ಮಾಡಬಾರದಾ ಕಚೇರಿ ಆದೇಶವನ್ನು ಹೊರಡಿಸಿ ಮೇಲಾಧಿಕಾರಿಗಳ ಆದೇಶವನ್ನು ಧಿಕ್ಕರಿಸಿರುವುದು.

ಆರೋಪ-10 ಡಯಟ್‌ನ ಪಿ.ಎಸ್.ಟಿ.ಇ. ವಿಭಾಗಕ್ಕೆ ಹಿರಿಯ ಉಪನ್ಯಾಸಕರನ್ನು ನೇಮಿಸುವಂತೆ ಆದೇಶವಿದ್ದರೂ ನೀವು ಏಕಪಕ್ಷೀಯವಾ ಉಪನ್ಯಾಸಕರಾದ ಶ್ರೀ ಶಂಕರಯ್ಯ, ಎಂಬುವರನ್ನು ಅನಧಿಕೃವಾಗಿ ವಂತಿಗೆ ವಸೂಲು ಮಾಡಲು ನೇಮಿಸಿಕೊಂಡು ನಿಯಮಗಳನ್ನು ಉಲ್ಲಂಘಿಸಿರುವುದು

ಮೇಲಿನ ಕ್ರಮ ಸಂಖ್ಯೆ (2)ರಲ್ಲಿ ಸದರಿಯವರ ವಿರುದ್ಧ ಬಂದಿದ್ದ ಆರೋಪಗಳ ಹಿನ್ನೆಲೆಯಲ್ಲಿ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವ ನಿಯಮ 11ರನ್ವಯ ಕಾರಣ ಕೇಳುವ ನೋಟೀಸು ಜಾರಿಗೊಳಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಆರೋಪಿತ ಅಧಿಕಾರಿಯು ತವ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ಮತ್ತು (5)ರಲ್ಲಿ ಶ್ರೀ ರತ್ನಕುಮಾರ್, ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಉಡುಪಿ ಜಿಲ್ಲೆ, ಇವರ ಮೇಲಿನ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಕೂಲಂಕುಷವಾಗಿ ವಿಚಾರಣೆ ಮಾಡುವುದು ಸೂಕ್ತವೆಂದು ಪರಿಗಣಿಸಿ ಸರ್ಕಾರವು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಲಾಗಿತ್ತು. ಅದರಂತೆ ಕ್ರಮ ಸಂಖ್ಯೆ (6)ರಲ್ಲಿ ವಿಚಾರಣಾ ವರದಿಯು ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ. ಈ ವಿಚಾರಣಾ ವರದಿಯಲ್ಲಿ ಆರೋಪಿತರ ಮೇಲೆ ಹೊರಿಸಲಾಗಿದ್ದ 10 ಆರೋಪಗಳ ಪೈಕಿ ಕ್ರಮ ಸಂಖ್ಯೆ 6 ಮತ್ತು 7ನೇ ಆರೋಪವು ಸಾಬೀತಾಗಿರುವುದಾಗಿ ತಿಳಿಸಿರುವುದರಿಂದ ಈ ವಿಚಾರಣಾ ವರದಿಯ ಪ್ರತಿಯನ್ನು ಆರೋಪಿತ ಅಧಿಕಾರಿಗೆ ಕ್ರಮ ಸಂಖ್ಯೆ (7)ರಲಿ ಎರಡನೆ ಕಾರಣ ಕೇಳುವ ನೋಟೀಸಿನ ವಿವರಣೆ ಕೋರಲಾಗಿತ್ತು. ಅವಕಾಶ ನೀಡಲಾಗಿತ್ತು. ಆದರೆ, ಆರೋಪಿತ ಅಧಿಕಾರಿಯ ವಿಚಾರಣಾ ವರದಿಯಲ್ಲಿನ ಅಂಶಗಳ ಬಗ್ಗೆ ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ನಿಗದಿತ ಅವಧಿಯಲಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸದೇ ಇರುವುದರಿಂದ ಅವರ ಹೇಳಿಕೆ ಏನು ಇರುವುದಿಲ್ಲವೆಂದು ಪರಿಗಣಿಸಿದೆ.

ಸದರಿಯವರ ಮೇಲಿನ ಆರೋಪಗಳ ಬಗ್ಗೆ ವಿಚಾರಣಾ ವರದಿಯನ್ನು ನಿಯಮಗಳನುಸಾರ ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಆರೋಪ-5, 6 ಮತ್ತು 7ಕ್ಕೆ ಸಂಬಂಧಿಸಿದಂತೆ ಆರೋಪಿತರು ಪ್ರತಿರಕ್ಷಣಾ ಹೇಳಿಕೆಯಲ್ಲಿ ಪ್ರತಿಪಾದಿಸಿದ ಅಂಶಗಳ ಬಗ್ಗೆ ಸಮಂಜಸವಾದ ಕಾರಣಗಳು ಇಲ್ಲದೇ ಇರುವುದರಿಂದ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದ್ದು ಶ್ರೀ ರತ್ನಕುಮಾರ್, ಇವರ ಮೇಲೆ ಹೊರಿಸಲಾದ ಆರೋಪಗಳಿಗೆ ಸಂಬಂಧಿಸಿದಂತೆ ನಡೆದ ಇಲಾಖಾ ವಿಚಾರಣಾ ವರದಿಯಲ್ಲಿ ಆರೋಪಿತ ನೌಕರರು ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966ರ ನಿಯಮ 3 (i)(i)(ii)(iii) ರನ್ನು ಉಲ್ಲಂಘಿಸಿರುವುದರಿಂದ ಆರೋಪಿತ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8 ರನ್ವಯ ಅವರ ವಾರ್ಷಿಕ ಬಡ್ತಿಯನ್ನು ಸಂಚಿತ ಪರಿಣಾಮರಹಿತವಾಗಿ ತಡೆಹಿಡಿಯುವ ದಂಡನೆ ವಿಧಿಸುವ ಹಾಗೂ ಸದರಿಯವರಿಂದ ಹೆಚ್ಚುವರಿಯಾಗಿ ಪಾವತಿಯಾಗಿರುವ ಹಣವನ್ನು ಇಲಾಖೆಗೆ ವಸೂಲಿ ಮಾಡುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 23 ಡಿಜಿಪಿ 2010, ಬೆಂಗಳೂರು, ದಿನಾಂಕ : 09-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ರತ್ನಕುಮಾರ್, ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಉಡುಪಿ ಜಿಲ್ಲೆ. ಇದರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ-8 (iii) ರನ್ವಯ ಅವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮರಹಿತವಾಗಿ ತಡೆಹಿಡಿಯುವ ದಂಡನೆ ವಿಧಿಸಿದೆ. ಹಾಗೂ ಸದರಿಯವರಿಂದ ಹೆಚ್ಚುವರಿ ಹಣವನ್ನು ಇಲಾಖೆಗೆ ಅವರಿಂದ ವಸೂಲಿ ಮಾಡುವ ದಂಡನೆಯನ್ನು ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 320

ಶಿಕ್ಷಣ ಇಲಾಖೆ (ಆಡಳಿತ)